" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ 11ನೇ ಫೆಬ್ರವರಿ 2019
ಸೋಮವಾರ

## ವಿಷಯಾನುಕ್ರಮಣಿಕೆ

1. ಹಣದ ಆಮಿಷ ಒಡ್ಡಿ ಮಾನ್ಯ ಶಾಸಕರುಗಳನ್ನು ಪಕ್ಷಾಂತರ ಮಾಡುವಂತೆ ಪ್ರಚೋದಿಸಲಾಗುತ್ತಿದೆ ಎನ್ನುವ ಆರೋಪದ ಕುರಿತು ಹಾಗೂ ಧ್ವನಿಸುರುಳಿಯ ಕುರಿತು ನಿಯಮ 342ರ ಅಡಿಯಲ್ಲಿ ಸೂಚನೆ ನೀಡಿ ಚರ್ಚೆಗೆ ಅವಕಾಶ ಕೋರಿರುವ ಬಗ್ಗೆ

- ಶ್ರೀ ಪಿ.ಆರ್.ರಮೇಶ್
- ಶ್ರೀ ಐವನ್ ಡಿ'ಸೋಜಾ
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
- ಡಾ:ತೇಜಸ್ವಿನಿ ಗೌಡ
- ಶ್ರೀ ಹೆಚ್.ಎಂ.ರೇವಣ್ಣ
- ಡಾ: ವೈ.ಎ.ನಾರಾಯಣಸ್ವಾಮಿ
- ಡಾ: ಜಯಮಾಲ (ಸಭಾ ನಾಯಕರು)
- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಎಂ.ಎ.ಗೋಪಾಲಸ್ವಾಮಿ
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಟಿ.ಎ.ಶರವಣ
- ಶ್ರೀ ಅರುಣ ಶಹಾಪುರ
- ಶ್ರೀ ಆಯನೂರು ಮಂಜುನಾಥ್
- ಶ್ರೀ ಶರಣಪ್ಪ ಮಟ್ಟೂರ
- ಶ್ರೀ ಅಲ್ಲಂ ವೀರಭದ್ರಪ್ಪ
- ಶ್ರೀ ನಸೀರ್ ಅಹ್ಮದ್
- ಶ್ರೀ ಸಾ.ರಾ.ಮಹೇಶ್ (ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

- ಶ್ರೀ ಪ್ರಿಯಾಂಕ ಖರ್ಗೆ (ಸಮಾಜ ಕಲ್ಯಾಣ ಸಚಿವರು)
- ಶ್ರೀ ಎಂ.ಕೆ.ಪ್ರಾಣೇಶ್
- ಶ್ರೀ ವೆಂಕಟರಾವ್ ನಾಡಗೌಡ (ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು)
- ಶ್ರೀ ಹೆಚ್.ಎಂ.ರಮೇಶ್‌ಗೌಡ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಕೆ.ಅಬ್ದುಲ್ ಜಬ್ಬಾರ್
- ಶ್ರೀ ರಘುನಾಥರಾವ್ ಮಲ್ಕಾಪೂರೆ
- ಶ್ರೀ ಎನ್.ರವಿಕುಮಾರ್
- ಶ್ರೀ ಯು.ಬಿ.ವೆಂಕಟೇಶ್

(ಸಭಾಪತಿಯವರ ತೀರ್ಪನ್ನು ಕಾಯ್ದಿರಿಸಲಾಯಿತು)

~~~****~~~

(12) 11-02-2019/11-20/ಕೆಹೆಚ್-ಬಿಎನ್ಎಸ್

**ಕರ್ನಾಟಕ ವಿಧಾನ ಪರಿಷತ್ತು**

***ಸೋಮವಾರ, 11ನೇ ಫೆಬ್ರವರಿ 2019***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**1. ಹಣದ ಆಮಿಷ ಒಡ್ಡಿ ಮಾನ್ಯ ಶಾಸಕರುಗಳನ್ನು ಪಕ್ಷಾಂತರ ಮಾಡುವಂತೆ ಪ್ರಚೋದಿಸಲಾಗುತ್ತಿದೆ ಎನ್ನುವ ಆರೋಪದ ಕುರಿತು ಹಾಗೂ ಧ್ವನಿಸುರುಳಿಯ ಕುರಿತು ನಿಯಮ 342ರ ಅಡಿಯಲ್ಲಿ ಸೂಚನೆ ನೀಡಿ ಚರ್ಚೆಗೆ ಅವಕಾಶ ಕೋರಿರುವ ಬಗ್ಗೆ**

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ರಾಜ್ಯದ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ಮಾನ್ಯ ಶಾಸಕರುಗಳನ್ನು ಸೆಳೆಯುವುದಕ್ಕೋಸ್ಕರ ಆಮಿಷಗಳನ್ನು ಒಡ್ಡಿದ್ದಾರೆ. ಅದೇ ರೀತಿ ಬಿಜೆಪಿಯ ನಾಯಕರುಗಳು ಕೋಲಾರ ಕ್ಷೇತ್ರದ ಶಾಸಕರಿಗೆ 30 ಕೋಟಿ ರೂಪಾಯಿಗಳಲ್ಲಿ 5 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಪ್ರಾರಂಭಿಸೋಣ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಸದನದ ಸದಸ್ಯರೆಲ್ಲರೂ . . .

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಪ್ರತಿಯೊಬ್ಬ ಶಾಸಕರುಗಳಿಗೆ ವಿರೋಧ ಪಕ್ಷದ ನಾಯಕರುಗಳು ಆಮಿಷಗಳನ್ನು ಒಡ್ಡುತ್ತಿದ್ದಾರೆ.

**(ಗೊಂದಲ)**

**Sri ARUN SHAHAPUR** :- I am on point of order.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ತಮ್ಮ ಸ್ಥಾನದಲ್ಲಿ ನಿಂತುಕೊಂಡು “50 ಕೋಟಿ ಮತ್ತು ಮಂತ್ರಿಗಿರಿ ನೀಡುವ ಬಿಜೆಪಿಗೆ ದುಡ್ಡು ಎಲ್ಲಿಂದ ಬಂತು”, “ಭ್ರಷ್ಟಾಚಾರ ಬಿಜೆಪಿಯ ಮೂಲ ಮಂತ್ರ” ಎಂಬ ಫಲಕಗಳನ್ನು ಪ್ರದರ್ಶಿಸಿದರು)**

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, . . .

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ. ಮಾನ್ಯ ಅಪ್ಪಾಜಿಗೌಡರೇ ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ತಂದು ನಿಲ್ಲಿಸುತ್ತೇನೆ. . .

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ದಯಮಾಡಿ ಮಾನ್ಯ ಸದಸ್ಯರೆಲ್ಲರೂ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು.

**(13) 11/02/2019/11:30/ಎಸ್‌ಪಿಆರ್/ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಸರ್ಕಾರ ನಡೆಸುವವರಾಗಿದ್ದು, ರಾಜೀನಾಮೆ...

**(ಗೊಂದಲ)**

**ಸಭಾಪತಿಯವರು:–** ಈಗ ಪ್ರಶ್ನೋತ್ತರಗಳು.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೊಬ್ಬರು "ಐವತ್ತು ಕೋಟಿ ಮತ್ತು ಮಂತ್ರಿಗಿರಿ ನೀಡುವ ಬಿ.ಜೆ.ಪಿ.ಗೆ ದುಡ್ಡು ಎಲ್ಲಿಂದ ಬಂತು" ಎಂಬ ಫಲಕವನ್ನು ಹಿಡಿದುಕೊಂಡಿದ್ದರು.)**

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾ ಹಾಗೂ ಮಂತ್ರಿಗಳೇ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಕುಳಿತುಕೊಳ್ಳುವವರೆಗೆ ಆಡಳಿತ ಪಕ್ಷದವರು ಕುಳಿತುಕೊಳ್ಳುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ಯಾವ ನ್ಯಾಯ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಶ್ರೀ ಯಡಿಯೂರಪ್ಪನವರಿಗೆ ರಾಜೀನಾಮೆ ಕೊಡಲಿಕ್ಕೆ ಹೇಳಿ.

**(ಗೊಂದಲ)**

**ಡಾ॥ ಜಯಮಾಲ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಸಭಾನಾಯಕರೇ, ಈ ವಿಚಾರವಾಗಿ ಮಾತನಾಡಲು ಯಾರೂ ಸಹ ನೋಟೀಸ್ ನೀಡಿಲ್ಲ. ಹೀಗಾಗಿ ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ತನಿಖೆಯಾಗಬೇಕು. ಅವರು ರಾಜೀನಾಮೆ ಕೊಡುತ್ತೇವೆಂದು ಹೇಳಿದ್ದಾರೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ತನಿಖೆಗಿಂತ ಮೊದಲು ಆಡಳಿತ ಪಕ್ಷದವರು ರಾಜೀನಾಮೆ ಕೊಡಬೇಕು.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ಮಾನ ಮರ್ಯಾದೆ ಇಲ್ಲ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಯಾರಿಗೂ ಸುರಕ್ಷೆ ಇಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ರೇವಣ್ಣನವರೇ, ಕುಳಿತುಕೊಳ್ಳಿ. ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:–** ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ತನಿಖೆ ಮಾಡಿಸಿ, ರಾಜೀನಾಮೆ ಕೊಡಿಸಿ. We want justice.

**(ಗೊಂದಲ)**

**ಶ್ರೀ ಜಮೀರ್ ಅಹ್ಮದ್ ಖಾನ್:–** ಮಾನ್ಯ ಸಭಾಪತಿಯವರೇ, ಎಂ.ಎಲ್.ಎ. ಆಗಿ ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದಾರೆ. ಆದರೆ ಅದಕ್ಕೂ ಮೊದಲು ತನಿಖೆಯಾಗಲಿ.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ದೇಶವನ್ನೆಲ್ಲಾ ಹಾಳು ಮಾಡಿದ್ದಾರೆ. ಹೀಗಾಗಿ ಅವರು ಮೊದಲು ರಾಜೀನಾಮೆಯನ್ನು ನೀಡಲಿ. ವಿರೋಧ ಪಕ್ಷದ ನಾಯಕರ...

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ.

**ಎನ್.ರವಿಕುಮಾರ್:–**ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರಿಗೆ ನಾಚಿಕೆಯಾಗಬೇಕು.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇದು ಅದಕ್ಕಿಂತ ಅಪರಾಧವಾಗಿದೆ. ವಿರೋಧ ಪಕ್ಷದ ನಾಯಕರ...

**(ಗೊಂದಲ)**

**ಸಭಾಪತಿಯವರು:–** ಮೊದಲು ಪ್ರಶ್ನೋತ್ತರ ಕಲಾಪ ಪೂರ್ಣಗೊಳ್ಳಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಡಳಿತ ನಡೆಸುತ್ತಿರುವ ಸರ್ಕಾರಕ್ಕೆ ಮಾನ ಮರ್ಯಾದೆ ಇಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ತನಿಖೆ ಮಾಡಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಈಗ ಸದನವನ್ನು ಐದು ನಿಮಿಷಗಳ ಕಾಲ ಮುಂದೂಡಲಾಗಿದೆ.

**(ಸದನವು ಪೂರ್ವಾಹ್ನ 11 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು,**
**ಐದು ನಿಮಿಷಗಳ ನಂತರ ಪುನಃ ಸೇರಲು ನಿಶ್ಚಯಿಸಿತು.)**

( 014 ) 11–02–2019 (11–50) ಬಿಎಸ್‌ಡಿ–ಕೆಎಸ್

**(ಸದನವು ಪುನ: 11 ಗಂಟೆ 53 ನಿಮಿಷಗಳಿಗೆ ಸಮಾವೇಶಗೊಂಡಿತು)**
**(ಪೀಠದಲ್ಲಿ ಮಾನ್ಯ ಸಭಾಪತಿಯವರು ಉಪಸ್ಥಿತರಿದ್ದರು)**

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ರಾಜ್ಯದ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರು ಈ ರೀತಿ ಹೇಳಿಕೆ ಕೊಟ್ಟರೆ ನಮ್ಮ ಗೌರವ ಏನಾಗುತ್ತದೆ?

(ಗೊಂದಲ)

**ಸಭಾಪತಿಯವರು:–** ನಾನು ಎದ್ದು ನಿಂತಿದ್ದೇನೆ, ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಭೋಜೇಗೌಡರೇ ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ ಪ್ರಾರಂಭ ಮಾಡುತ್ತೇನೆ,

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**ಸಭಾಪತಿಯವರು:–** ಈಗ ಆಗುವುದಿಲ್ಲ, ತಾವು ಯಾವುದೇ ಪೂರ್ವಬಾವಿ ನೋಟೀಸ್ ನೀಡದೇ ಇರುವುದರಿಂದ ತಮಗೆ ಪ್ರಸ್ತಾಪ ಮಾಡಲು ಅವಕಾಶ ಕೊಡುವುದಿಲ್ಲ. ಈಗ ಪ್ರಶ್ನೋತ್ತರಗಳು. ಮಾನ್ಯ ರೇವಣ್ಣನವರೇ, ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಸಂವಿಧಾನಕ್ಕೆ ಅಪಚಾರವಾಗಿದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ರೇವಣ್ಣನವರು ತಮ್ಮ ಪ್ರಶ್ನೆಯನ್ನು ಕೇಳಿ. ಸಭೆ ನಡೆಸಬೇಕೋ, ಬೇಡವೋ?

(ಗೊಂದಲ)

**ಶ್ರೀ ಹೆಚ್.ಎಂ. ರೇವಣ್ಣ:–** ಇಂತಹ ಸ್ಥಿತಿ ಇರುವಾಗ ಸಭೆ ಹೇಗೆ ನಡೆಸುವುದು?

**ಸಭಾಪತಿಯವರು:–** ತಾವು ಯಾವ ನೋಟೀಸ್ ನೀಡಿದ್ದೀರಿ? ಇಲ್ಲಿ ಇಷ್ಟ ಬಂದಹಾಗೆ ಮಾಡುವುದಕ್ಕೆ ಅಥವಾ ಮಾತನಾಡುವುದಕ್ಕೆ ಆಗುವುದಿಲ್ಲ. ತಾವು ಕುಳಿತುಕೊಳ್ಳಿ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಆರೋಪದ ಬಗ್ಗೆ ವಿರೋಧ ಪಕ್ಷದ ನಾಯಕರೇ ಒಪ್ಪಿಕೊಂಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಅಪಚಾರವಾಗಿದೆ.

**ಸಭಾಪತಿಯವರು:–** ತಮಗೆ ಹೇಳಿದರೆ ಅರ್ಥವಾಗುವುದಿಲ್ಲವೇ? ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಅಪ್ಪಾಜಿಗೌಡರು ಪ್ರಶ್ನೆ ಕೇಳಿ.

(ಗೊಂದಲ)

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಮಾತನಾಡಲು ಅವಕಾಶ ಕೊಡಿ, ಸಂವಿಧಾನಕ್ಕೆ ಅಪಚಾರವಾಗಿದೆ, ಸದನದ ಗೌರವ ಹಾಳಾಗುತ್ತಿದೆ. ಆದ್ದರಿಂದ ಪ್ರಶ್ನೋತ್ತರವನ್ನು ಮುಂದೆ ಹಾಕಿ ಈ ವಿಷಯವನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಬೇಡ, ಕುಳಿತುಕೊಳ್ಳಿ.

(ಗೊಂದಲ)

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನಾನು ಕೊಡಗಿನ ವಿಷಯದ ಬಗ್ಗೆ ಮಾತನಾಡಬೇಕು. ದಯಮಾಡಿ ಅವಕಾಶ ಮಾಡಿಕೊಡಿ.

(ಗೊಂದಲ)

**ಸಭಾಪತಿಯವರು:–** ಯಾರೂ ನೋಟೀಸ್ ಕೊಟ್ಟಿಲ್ಲ, ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ದಯಮಾಡಿ ನನಗೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:–** ಆಯಿತು, ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಪ್ರಶ್ನೋತ್ತರವನ್ನು ಮುಂದೆ ಹಾಕಿ ಅವಕಾಶ ಕೊಡಿ, ಸದನದ ಮತ್ತು ಸದಸ್ಯರ ಗೌರವ ಹೋಗುತ್ತಿದೆ.

(ಗೊಂದಲ)

**ಡಾ॥ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿ ಸರ್ಕಾರ ನಡೆಸುವಾಗಲೂ ಮಧ್ಯೆ ಮಧ್ಯೆ ಬರುತ್ತಾರೆ.

(ಗೊಂದಲ)

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ತಾವು ಆದೇಶ ಮಾಡಿ.

(ಗೊಂದಲ)

**ಶ್ರೀ ಹೆಚ್.ಎಂ. ರೇವಣ್ಣ:–** ಸಾರ್ವಜನಿಕ ಜೀವನದಲ್ಲಿ ಗೌರವ ಹೋಗುತ್ತಿದೆ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಸತ್ಯವು ಹೊರಗೆ ಬರಬೇಕು.

**ಶ್ರೀ ಹೆಚ್.ಎಂ. ರೇವಣ್ಣ:–** ಲೋಕಸಭೆಯಲ್ಲಿ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡುವುದಿಲ್ಲ.

(ಗೊಂದಲ)

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:–** ದಯಮಾಡಿ ಒಂದು ಅವಕಾಶ ಕೊಡಿ.

**ಸಭಾಪತಿಯವರು:–** ಸಭೆ ನಡೆಸಬೇಕೋ, ಬೇಡವೋ, ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಅರವಿಂದ ಕುಮಾರ್ ಅರಳಿ ರವರು ಪ್ರಶ್ನೆ ಕೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನನಗೆ ಒಂದು ಅವಕಾಶ ಕೊಡಿ.

**ಸಭಾಪತಿಯವರು:–** ಕಾಲಾವಕಾಶ ಕೇಳಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ;–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟರೆ ಮಾತನಾಡುತ್ತೇನೆ.

**ಸಭಾಪತಿಯವರು:–** ಆಯಿತು, ಕುಳಿತುಕೊಳ್ಳಿ. ಸಭೆ ನಡೆಸಬೇಕೋ, ಬೇಡವೋ?

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಸದಸ್ಯರ ಗೌರವ ಹೋಗುತ್ತಿದೆ, ಮಾನ್ಯ ಸಭಾನಾಯಕರ ಗೌರವ ಹೋಗುತ್ತಿದೆ, ಸಂವಿಧಾನದ ಗೌರವ ಹೋಗುತ್ತಿದೆ. ದಯಮಾಡಿ ಅವಕಾಶ ಕೊಡಿ.

(ಗೊಂದಲ)

**ಸಭಾಪತಿಯವರು:–** ಇದು ಮನೆ ಅಲ್ಲ, ತಾವು ಮಾತನಾಡಲು ನೋಟೀಸ್ ಕೊಟ್ಟಿದ್ದೀರಾ? ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ ತಾವು ಪ್ರಶ್ನೆ ಕೇಳಿ.

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ವಿರೋಧ ಪಕ್ಷದ ನಾಯಕರು ನೋಟೀಸ್ ಇಲ್ಲದೇ ಮಾತನಾಡಿರಲಿಲ್ಲವೇ? ವಾಸ್ತವಾಂಶ ಹೊರಗೆ ಬರಬೇಕು.

(ಗೊಂದಲ)

**ಶ್ರೀ ಹೆಚ್.ಎಂ. ರೇವಣ್ಣ:–** ರೂ.50 ಕೋಟಿ ರೂಪಾಯಿಗಳು ಎಲ್ಲಿಂದ ಬಂತು? ಸಂವಿಧಾನಕ್ಕೆ ಅಪಚಾರ ಆಗುತ್ತಿದೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿ ಮಾಡಿದ್ದಾರೆ. ರಾಜಕೀಯ ನಿವೃತ್ತಿ ಬಗ್ಗೆ ಹೇಳಿದ್ದಾರೆ.

(ಗೊಂದಲ)

**ಸಭಾಪತಿಯವರು:–** ಸಭೆ ನಡೆಸಬೇಕೋ, ಬೇಡವೋ? ಎಲ್ಲರೂ ಕುಳಿತುಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(15)11–02–2019(12–00)ಹೆಚ್‌ವಿ–ಜಿಆರ್**

(ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**(ಈ ಹಂತದಲ್ಲಿ "ಬೇಕೇಬೇಕು ನ್ಯಾಯ ಬೇಕು", "We want justice" ಎನ್ನುವ ಘೋಷಣೆಯನ್ನು ಕೂಗುತ್ತಾ, ಜನತಾದಳ(ಎಸ್) ಪಕ್ಷದ ಎಲ್ಲ ಸದಸ್ಯರು ಮತ್ತು ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿಸೋಜಾರವರು ಸದನದ ಬಾವಿಗಿಳಿದು ಧರಣಿ ನಡೆಸಿದರು.)**

**(ಗೊಂದಲ)**

**ಸಭಾಪತಿಯವರು:–** ಆಡಳಿತ ಪಕ್ಷದವರು ಈ ರೀತಿ ಮಾಡುವುದು ಸರಿಯಲ್ಲ. ತಾವುಗಳು ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು ಮಧ್ಯಾಹ್ನ ಒಂದು ಗಂಟೆಯವರೆಗೆ ಮುಂದೂಡಲಾಗುತ್ತಿದೆ.

**(ಗೊಂದಲ)**

**(ಸದನವನ್ನು ಮಧ್ಯಾಹ್ನ 12 ಗಂಟೆ 02 ನಿಮಿಷಗಳಿಗೆ ಮುಕ್ತಾಯಗೊಳಿಸಿ, ಪುನಃ ಮಧ್ಯಾಹ್ನ 1 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು.)**

**––––**

(16) 11-02-2019/1-20/bkp-md

**(ಸದನವು ಮತ್ತೆ ಮಧ್ಯಾಹ್ನ 1 ಗಂಟೆ 24 ನಿಮಿಷಕ್ಕೆ ಸಮಾವೇಶಗೊಂಡಿತು)**
**(ಸಭಾಪತಿಯವರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ಸಭಾಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:-** ಮೊದಲಿಗೆ ಸಭಾನಾಯಕರು ಮಾತನಾಡುತ್ತಾರೆ. ತಾವು ಕುಳಿತುಕೊಳ್ಳಿ.

**ಡಾ|| ಜಯಮಾಲ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಒಂದು ಘಳಿಗೆ ಮಾತನಾಡುತ್ತೇನೆ.

(ಗೊಂದಲ)

**ಸಭಾಪತಿಯವರು:-** ಮಾತನಾಡಲಿಕ್ಕೆ ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ. ಮೊದಲಿಗೆ ನಾನು ಸಭಾನಾಯಕರಿಗೆ ಮಾತನಾಡಲಿಕ್ಕೆ ಕರೆದದ್ದು ಆಯಿತು. ಅವರು ಮೊದಲು ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

**ಸಭಾಪತಿಯವರು:-** ಧರಣಿಯಲ್ಲಿರುವಾಗ ಹೇಗೆ ಮಾತನಾಡಲಿಕ್ಕೆ ಅವಕಾಶ ಕೊಡಲಿಕ್ಕೆ ಸಾಧ್ಯ? ನಂತರ ತಮಗೆ ಅವಕಾಶ ಕೊಡುತ್ತೇನೆ. ನಾನೀಗ ಸಭಾನಾಯಕರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಮಾತನಾಡುತ್ತಾರೆ.

(ಗೊಂದಲ)

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಸೇರಿದಂತೆ ವಿರೋಧ ಪಕ್ಷದ ಇತರ ಸದಸ್ಯರುಗಳೆಲ್ಲರೂ ಸಭಾತ್ಯಾಗ ಮಾಡಿದರು)**

**ಡಾ|| ಜಯಮಾಲ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಸರ್ಕಾರದ ವತಿಯಿಂದ ಉತ್ತರಿಸಬೇಕಾಗಿದೆ. ಆಡಳಿತ ಪಕ್ಷದ ಸದಸ್ಯರುಗಳು ದಯವಿಟ್ಟು ಧರಣಿಯಿಂದ ವಾಪಸ್ಸು ಬಂದು ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಲಿಕ್ಕೆ ತಿಳಿಸಬೇಕೆಂದು ಕೋರಿಕೊಳ್ಳುತ್ತೇನೆ. ಏಕೆಂದರೆ, ಯಾವುದೇ ಒಂದು ಸಮಸ್ಯೆ ಇದ್ದರೂ ಸಹ ಅದರ ಬಗ್ಗೆ ಕುಳಿತುಕೊಂಡು ಮಾತನಾಡೋಣ. ಆದ್ದರಿಂದ, ಮಾನ್ಯ ಸದಸ್ಯರುಗಳು ಧರಣಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ಕೇಳಿಕೊಳ್ಳುತ್ತೇನೆ.

**(ಬಾವಿಯಲ್ಲಿ ಧರಣಿ ನಿರತರಾದ ಆಡಳಿತ ಪಕ್ಷದ ಸದಸ್ಯರುಗಳು ಮಾನ್ಯ ಸಭಾನಾಯಕರ ಕೋರಿಕೆಯಂತೆ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.)**

ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ. ಮಾಡಬಾರದ ಕೆಲಸಗಳನ್ನು ಮಾಡಿ, ಹೇಳಬಾರದ್ದನ್ನು ಹೇಳಿ, ಇವತ್ತು ಇವರುಗಳು ತಪ್ಪಿಸಿಕೊಂಡು ಹೋಗುತ್ತಿದ್ದಾರೆ. ಇವರುಗಳು ಪಲಾಯಾನವಾದಿ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮ ಆಡಳಿತ ಪಕ್ಷದ ಸದಸ್ಯರುಗಳು ಇವತ್ತು ಈ ವಿಚಾರವಾಗಿ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಇವತ್ತು ಈ ಒಂದು ಪೀಠಕ್ಕೆ ಅವಮಾನವಾಗಿದೆ ಎನ್ನುವುದನ್ನು ಎಲ್ಲರೂ ಗಮನಿಸಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಮಾತನಾಡಲಿಕ್ಕೆ ಎದ್ದು ನಿಂತಿದ್ದಾರೆ. ದಯವಿಟ್ಟು ಅವರಿಗೆ ತಾವು ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಅವರು ಮಾತನಾಡಿದ ಮೇಲೆ ವಿರೋಧ ಪಕ್ಷದ ನಾಯಕರು ಏನಾದರೂ clarification ಕೊಡುವುದಿದ್ದರೆ ಕೊಡಲಿ. ವಿರೋಧ ಪಕ್ಷದವರು ಈಗ ಸಭಾತ್ಯಾಗ ಮಾಡಿದರು. ಪಾಪ, ಇದು ಅವರ ದುರ್ದೈವ. ಬುಧವಾರದ ದಿವಸ ಅಂಗಡಿಯಲ್ಲಿ ಹೆಗ್ಗಣ ಸಿಕ್ಕಿ ಹಾಕಿಕೊಂಡ ಹಾಗೆ ಅವರು ಸಿಕ್ಕಿ ಹಾಕಿಕೊಂಡಿದ್ದಾರೆ. ಈಗ ಅದು ಒಳಗಡೆ ಹೋಗಲಿಕ್ಕೂ ಸಾಧ್ಯವಿಲ್ಲ, ಹೊರಗಡೆ ಬರಲಿಕ್ಕೂ ಸಾಧ್ಯವಾಗುತ್ತಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ,...

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಈ ವಿಚಾರವಾಗಿ ಮಾನ್ಯ ಸಭಾನಾಯಕರಿಗೆ ಮಾತನಾಡಲಿಕ್ಕೆ ದಯವಿಟ್ಟು ಅವಕಾಶವನ್ನು ಕೊಡಬೇಕು. ತದನಂತರ ಮಾತನಾಡಲಿಕ್ಕೆ ವಿರೋಧ ಪಕ್ಷದವರು ಸದನದಲ್ಲಿ ಇಲ್ಲದೇ ಇದ್ದರೆ ಆಡಳಿತ ಪಕ್ಷದ ವತಿಯಿಂದ ನಾವುಗಳು ನಮ್ಮ ಅಭಿಪ್ರಾಯಗಳನ್ನು ಹೇಳುತ್ತೇವೆ. ತದನಂತರ ತಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳಿ. ಏಕೆಂದರೆ, ಇದು ಮೇಲ್ಮನೆ. ವಿರೋಧ ಪಕ್ಷದ ನಾಯಕರು ಮಾತನಾಡಿ, ಈ ಮೇಲ್ಮನೆಗೆ ಒಂದು ಇತಿಹಾಸ ಇದೆ ಎಂದು ಹೇಳಿದರು. ಅವರು ಹೇಳಿದ್ದು ನಿಜ. ಜೊತೆಗೆ ಮಾತನಾಡುವಂತಹ ಸಂದರ್ಭದಲ್ಲಿ ಅವರು ಈ ಸದನದ ಸದಸ್ಯರಲ್ಲ ಎನ್ನುವ ಮಾತನ್ನು ಸಹ ಅವರು ಹೇಳಿದರು. ಆದರೆ, ಇವತ್ತು ಎಲ್ಲಾ ಜನರು ಈ ವಿಚಾರವನ್ನು ನೋಡುತ್ತಿದ್ದಾರೆ. ನಾವುಗಳು ಹೊರಗಡೆ ಹೋದಂತಹ ಸಂದರ್ಭದಲ್ಲಿ ನೀನು ಎಂಎಲ್‌ಸಿ ಅಥವಾ ಎಂಎಲ್‌ಎ ಎಂದವರು ನಮ್ಮನ್ನು ಕೇಳುವುದಿಲ್ಲ. 25 ಕೋಟಿ ತೆಗೆದುಕೊಂಡಿದ್ದೀರಾ 10 ಕೋಟಿ ತೆಗೆದುಕೊಂಡಿದ್ದೀರಾ ಎಂದು ಕೇಳುತ್ತಾರೆ. ಇವತ್ತು ಏನಾಗಿದೆ ಎಂದರೆ ಬಸ್ ಸ್ಟ್ಯಾಂಡ್ ಬಸವಿಯರ ರೀತಿಯಲ್ಲಿ ನಾವು ಹರಾಜು ಆಗುತ್ತಿದ್ದೇವೆ. ಅದಕ್ಕೋಸ್ಕರ ಮಾನ್ಯ ಸಭಾನಾಯಕರು ಮೊದಲು ಮಾತನಾಡಲಿ. ನಂತರ ನಮ್ಮ ಅಭಿಪ್ರಾಯಗಳನ್ನು ಕೇಳಿದ ಮೇಲೆ ತಾವು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೆಳಮನೆ ಯಲ್ಲಿಯೂ ಸಹ ಇದೇ ವಿಚಾರ ಚರ್ಚೆಯಾಗುತ್ತಿದೆ. ಅಲ್ಲಿಯೂ ಸಹ ಇನ್ನೂ ಪ್ರಶ್ನೋತ್ತರ ಪ್ರಾರಂಭವಾಗಿರುವುದಿಲ್ಲ.

**ಡಾ|| ಜಯಮಾಲ ರಾಮಚಂದ್ರ(ಸಭಾನಾಯಕರು)–** ಮಾನ್ಯ ಸಭಾಪತಿಯವರೇ, ಇಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವದ ಪ್ರಶ್ನೆ ಬಂದಿರುವುದರಿಂದ ಆಡಳಿತ ಪಕ್ಷದವರೆಲ್ಲರೂ ಬಾವಿಗೆ ಬಂದು ನಿಂತಿದ್ದಾರೆ. ನಾನು ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಮನವಿ ಮಾಡುವುದೇನೆಂದರೆ ತಾವು ಬಾವಿಯಿಂದ ಹೊರಗಡೆ ಬರಬೇಕು. ಯಾವ ಕಾರಣಕ್ಕೋಸ್ಕರ ಈ ವಿಷಯವಾಗಿ ಚರ್ಚೆ ಆಗಬೇಕೆನ್ನುವುದರ ಬಗ್ಗೆಯೂ ಸಹ ನಾನು ಮಾನ್ಯ ಸಭಾಪತಿಯವರಲ್ಲಿ ಮನವಿ ಮಾಡುತ್ತೇನೆ. ನಿಜಕ್ಕೂ ಸಹ ಇದು ದಾರಿಯಲ್ಲಿ ಹೋಗುವವರ ಬಗ್ಗೆ ಮಾತನಾಡಿರುವಂತಹದ್ದಲ್ಲ. ಇದು ಪ್ರಜಾಪ್ರಭುತ್ವದ ಅಸ್ತಿತ್ವದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಶ್ನೆಯಾಗಿದ್ದು, ಈ ವಿಚಾರದಿಂದ ಇವತ್ತು ನಮಗೆ ಘಾಸಿಯಾಗಿದೆ. ಈ ವಿಚಾರವನ್ನು ಇಡೀ ಪ್ರಪಂಚ ನೋಡುತ್ತಿದೆ. ಇಡೀ ಪ್ರಪಂಚ ಈ ಬಗ್ಗೆ ಮಾತನಾಡಿಕೊಳ್ಳುತ್ತಿದೆ. ಈ ರೀತಿ ಇರುವಾಗ ಇದರ ಬಗ್ಗೆ ನಾವು ಸುದೀರ್ಘವಾಗಿ ಚರ್ಚೆ ಮಾಡಬೇಕಾಗುತ್ತದೆ. ಕೆಳಮನೆ ಪೀಠದ ವಿಚಾರವಾಗಿ ಮಾತನಾಡಿದ್ದಾರೆ. ಅದು ಕೆಳಮನೆ ಪೀಠ ಇರಬಹುದು, ಮೇಲ್ಮನೆ ಪೀಠ ಇರಬಹುದು. ಈ ಪೀಠಗಳ ಗೌರವವನ್ನು ನಾವುಗಳು ಕಾಪಾಡಿಕೊಂಡು ಬಂದವರಾಗಿದ್ದೇವೆ. ಆದರೆ, ಆ ಪೀಠದ ಬಗ್ಗೆ ಇವತ್ತು ಪ್ರಶ್ನೆ ಮಾಡಿದ್ದಾರೆ. ಅಲ್ಲಿ ಬೇರೆ ಬೇರೆ ಅಮಿಷಗಳ ವಿಚಾರ ಇದೆ. ಈ ಬಗ್ಗೆ ಸುದೀರ್ಘ ತನ್ನಿಖೆಗಳ ಬಗ್ಗೆ ನಾವು ಮಾತನಾಡಬೇಕಾಗಿದೆ. ಇದರ ಬಗ್ಗೆ ನಾವು ಸತ್ಯಾಂಶವನ್ನು ಹೊರತೆಗೆಯಬೇಕಾಗುತ್ತದೆ. ತಪ್ಪುಗಳನ್ನು ಮಾಡಿದವರು ಹೌದು, ತಪ್ಪಾಗಿದೆ ಎಂದು ಹೇಳಿದ್ದಾರೆ. ಹಿಂದೆ ಅವರು ನಾನು ಮಾತನಾಡಿಲ್ಲವೆಂದು ಹೇಳಿದ್ದರು, ತದನಂತರ ನಾನು ಮಾತನಾಡಿದ್ದೇನೆಂದು ಹೇಳಿದ್ದಾರೆ. ಆದ್ದರಿಂದ, ಈ ವಿಚಾರವಾಗಿ ಸತ್ಯಾಸತ್ಯತೆಯನ್ನು ನಾವು ಪರೀಕ್ಷೆ ಮಾಡದೇ ಹೋದರೆ ನಮ್ಮ ಸದಸ್ಯರುಗಳು ಇಲ್ಲಿ ಹೇಗೆ ಕುಳಿತುಕೊಳ್ಳಲಿಕ್ಕೆ ಸಾಧ್ಯ? ಹೀಗಾಗಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಬಗ್ಗೆ ಪ್ರತಿಯೊಬ್ಬ ಸದಸ್ಯರಿಗೂ ಸಹ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕು. ಈ ವಿಚಾರವನ್ನು ಇಡೀ ಪ್ರಪಂಚ ನೋಡುತ್ತಿದ್ದು, ಇದರ ಬಗ್ಗೆ ನಾವು ನಗೆಪಾಟಲಿಗೆ ಗುರಿಯಾಗಬಾರದು. ಇದು ಪೀಠದ ಪ್ರಶ್ನೆಯಾಗಿರುವುದರಿಂದ, ಅದರ ಘನತೆಯನ್ನು ಸದಸ್ಯರುಗಳು ಉಳಿಸಿಕೊಂಡು ಬಂದಿದ್ದು, ಇದಕ್ಕೆ ಇತಿಹಾಸ ಇದೆ. ಸರ್ಕಾರದ ಮಟ್ಟದಲ್ಲಿ ಮತ್ತು ಜನತೆಯ ಮಟ್ಟದಲ್ಲಿ ಇವೆರಡರ ನಂಬಿಕೆಯ ತಳಮಟ್ಟದಲ್ಲಿ ನಾವುಗಳು ಇದ್ದೇವೆ. ಆದ್ದರಿಂದ, ಈ ವಿಚಾರವಾಗಿ ಚರ್ಚಿಸಲು ಮಾನ್ಯ ಸದಸ್ಯರುಗಳು ಮನವಿಯನ್ನು ಸಲ್ಲಿಸುತ್ತಾರೆ. ಈ ವಿಚಾರವಾಗಿ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಈ ಬಗ್ಗೆ ಮೊದಲು ನೋಟೀಸ್ ಕೊಡಿ, ಪರಿಶೀಲನೆ ಮಾಡೋಣ. ಜೊತೆಗೆ ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಳ್ಳಲಿಕ್ಕೆ ಸದನದಲ್ಲಿ ಬೇರೆ ಯಾರೂ ಸಹ ಸಚಿವರು ಹಾಜರಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಕ್ಷಮಿಸಬೇಕು. ಇದಕ್ಕೆ ನೋಟೀಸ್‌ನ ಅವಶ್ಯಕತೆ ಕಂಡು ಬರುವುದಿಲ್ಲ. Prima facie ಆಧಾರದ ಮೇಲೆ ಇದನ್ನು ಪರಿಗಣಿಸಿ ಹಾಗೂ ಮಾನ್ಯ ಸದಸ್ಯರುಗಳ cognizance ತೆಗೆದುಕೊಂಡು ನಮಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬಹುದು.

**(17) 11.02.2019 01.30 ಎಸ್‌ವಿ–ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಅವಕಾಶವನ್ನು ಮಾಡಿಕೊಡಲಾಗಿದೆ. ಅದೇ ರೀತಿ ಮೇಲ್ಮನೆಯಲ್ಲಿಯೂ ಹಿರಿಯ ಸದಸ್ಯರಿದ್ದು, ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ವಿಧಾನ ಮಂಡಲದ ಇತಿಹಾಸದಲ್ಲಿ ಮೊನ್ನೆ ನಡೆದಿರತಕ್ಕಂತಹ ಘಟನೆಯು ನಮ್ಮನ್ನು ನಾವು ವಿಮರ್ಶೆ ಮಾಡಿಕೊಳ್ಳಬೇಕಾದಂತಹ ಸಂದರ್ಭಕ್ಕೆ ದೂಡಿದೆ. ಎರಡೂ ಸದನಗಳ ಪೀಠಗಳ ಮತ್ತು ಸದಸ್ಯರ ಘನತೆ ಹಾಗೂ ಗೌರವಗಳ ವಿಚಾರ ಇದರಲ್ಲಿ ಅಡಕವಾಗಿದೆ. ಪೀಠದ ಗೌರವದ ಬಗ್ಗೆ, ಸದನದ ಸದಸ್ಯರ ಗೌರವದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ಸೂಚನೆಯನ್ನು ಕೊಡಬೇಕೆ? ಇಂದು ಕೆಳಮನೆಯಲ್ಲಿ ಮಾನ್ಯ ಸಭಾಧ್ಯಕ್ಷರು ತಾವೇ ಸ್ವತಃ ಈ ವಿಚಾರದ ಬಗ್ಗೆ ಚರ್ಚೆಗೆ ಚಾಲನೆಯನ್ನು ಕೊಟ್ಟು, ಅಲ್ಲಿ ಗಂಭೀರವಾದ ಚರ್ಚೆ ನಡೆಯುತ್ತಿದೆ. ಬಹುಶಃ ಇಡೀ ರಾಜ್ಯದಲ್ಲಿ ನಾವೆಲ್ಲಾ ತಲೆತಗ್ಗಿಸುವಂತಹ ವಿಚಾರಗಳು, ನಡವಳಿಕೆಗಳು ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಡೆಯುತ್ತಿದೆ. ಇಡೀ ಘಟನೆಯು ಒಂದು ದೊಡ್ಡ ಕಪ್ಪು ಚುಕ್ಕೆಯಾಗಿದೆ. ಎಲ್ಲೋ ಒಂದು ಕಡೆ ಶಾಸಕರ ಖರೀದಿ, ಮಾನ್ಯ ಸಭಾಧ್ಯಕ್ಷರನ್ನೇ ಬುಕ್ ಮಾಡಿಕೊಂಡಿದ್ದೇವೆ ಎನ್ನುವಂತಹ ಮಾತುಗಳಿಂದ ಪ್ರಜಾಪ್ರಭುತ್ವಕ್ಕೆ ದೊಡ್ಡ ಅಪಚಾರವೆಸಗಿದಂತಾಗಿದೆ ಎಂದು ನಾನು ಭಾವಿಸುತ್ತೇನೆ. ಹೇಗೆ ಕೆಳಮನೆಯಲ್ಲಿ ಪೀಠದ ವತಿಯಿಂದಲೇ ಚರ್ಚೆಗೆ ಅನುವು ಮಾಡಿಕೊಟ್ಟು, ವಿಸ್ತೃತವಾದ ಚರ್ಚೆ ನಡೆಸಲಾಗುತ್ತಿದೆಯೋ ಅದೇ ರೀತಿ ಇಲ್ಲಿಯೂ ನಡೆಯಬೇಕು. ಇದು ವಿಧಾನ ಮಂಡಲದ ಮತ್ತೊಂದು ಸದನ. ಹೇಳಿ–ಕೇಳಿ ಹಿರಿಯರ ಸದನ. ನಾವು ಈ ಕುರಿತು ಹೆಚ್ಚು ಚರ್ಚೆ ಮಾಡಬೇಕಾಗಿದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿಷ್ಠಾಪನೆ ಮಾಡುವಲ್ಲಿ ನಮ್ಮ ಕರ್ತವ್ಯಗಳು ಜಾಸ್ತಿ ಇದೆ. ಆ ಕಾರಣಕ್ಕಾಗಿ ತಾವು ಇದರ ವಿಸ್ತೃತವಾದ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಆಗ್ರಹಿಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಮ್ಮ ಸದನದ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ಇಲ್ಲಿದ್ದು, ನಾವು ಅವರ ಅಭಿಪ್ರಾಯವನ್ನು ಕೇಳಬಹುದು.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಷಯ. ಇದರ ಬಗ್ಗೆ ಮಾನ್ಯ ಸಭಾನಾಯಕರು ಮತ್ತು ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಪ್ರಸ್ತಾಪ ಮಾಡಿದ್ದಾರೆ. ತಾವು ನೋಟಿಸ್ ಕೊಡುವಂತೆ ಹೇಳಿದಿರಿ. ಇದನ್ನು ತಾವೇ suo-moto ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಈ ವಿಷಯ ಪತ್ರಿಕೆಗಳಲ್ಲಿ ಜಾಹೀರಾಗಿದೆ ಮತ್ತು ಅವರೂ ಸಹ "ಹೌದು, ಇದನ್ನು ನಾನು ಹೇಳಿದ್ದೇನೆ" ಎಂದು ಒಪ್ಪಿಕೊಂಡಿದ್ದಾರೆ. ಇದರಲ್ಲಿ ಕೇವಲ ಸಭಾಧ್ಯಕ್ಷರಷ್ಟೇ ಅಲ್ಲ, ಸುಪ್ರೀಂ ಕೋರ್ಟ್, ಪ್ರಧಾನಮಂತ್ರಿಗಳು ಈ ರೀತಿ ಇದು ದೊಡ್ಡ Pandora's box ಇದೆ. ಹಿಂದೆ "ಇದು ನನ್ನ ಧ್ವನಿಯಲ್ಲ" ಎಂದು ಹೇಳಿದ್ದವರು ಇಂದು ಒಪ್ಪಿಕೊಂಡಿರುವುದರಿಂದ ಈ ಸದನದಲ್ಲಿ ಒಂದು ದೊಡ್ಡ ಸತ್ಸಂಪ್ರದಾಯವಿದ್ದು, ಇಲ್ಲಿ ನಾವು ಚರ್ಚೆ ಮಾಡಿ ಸರ್ಕಾರಕ್ಕೆ ನಾವು ಸೂಚನೆಯನ್ನು ನೀಡಬೇಕಾಗುತ್ತದೆ. ತಾವು ಇದರ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡುತ್ತೀರೋ ಅಥವಾ audio-video visuals ನ್ನು ಪರಿಶೀಲನೆ ಮಾಡಿ ಸರಿಯಾದ voice records ಇದೆಯೋ ಅದನ್ನು ದೃಢೀಕರಿಸುವಿರೋ ಅದು ತಮಗೆ ಬಿಟ್ಟ ವಿಷಯವಾಗಿದೆ. ಏಕೆಂದರೆ 70 ವರ್ಷಗಳ ಇತಿಹಾಸದಲ್ಲಿ ನಾವು ಹೊರಗೆ ಮುಖ ತೋರಿಸುವಂತಹ ಸ್ಥಿತಿ ಇಲ್ಲ. ಇವತ್ತು ರಾಜಕಾರಣಿಗಳಿಗೆ ಮೂರು

ಕಾಸಿನ ಮರ್ಯಾದೆ ಉಳಿದಿಲ್ಲ. ಒಬ್ಬ ಚುನಾಯಿತ ಶಾಸಕರನ್ನು ಒಬ್ಬ ನಾಯಕರು 10 ಕೋಟಿ ರೂಪಾಯಿಗಳನ್ನು ಕೊಟ್ಟು ಖರೀದಿಸಿದ್ದೇನೆಂದು ಹೇಳಿದರೆ ನಮ್ಮ ಮರ್ಯಾದೆ ಎಲ್ಲಿಗೆ ಬಂದಿತು? ಆದ್ದರಿಂದ ತಾವು ನೋಟಿಸ್ ಕೇಳದೆ suo-moto ಇದನ್ನು ತೆಗೆದುಕೊಂಡು ಮೊದಲು ಇದರ ಬಗ್ಗೆ ಚರ್ಚೆ ಆಗಬೇಕು. ತಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದಕ್ಕಿಂತ ಮೊದಲು ಮಧ್ಯಾಹ್ನ 3.00 ಗಂಟೆಗೆ ಇದನ್ನು ತೆಗೆದುಕೊಂಡು ಇದರ ಬಗ್ಗೆ ಚರ್ಚೆಯಾಗಬೇಕು. ಮುಂದೆ ಇಲ್ಲಿಂದ ಒಂದು ತೀರ್ಮಾನವನ್ನು, ಅಭಿಪ್ರಾಯವನ್ನು ಸರ್ಕಾರಕ್ಕೆ ಕೊಡಬೇಕು ಎಂದು ತಮ್ಮನ್ನು ಕೋರುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ತಿಳುವಳಿಕೆಯ ಪ್ರಕಾರ ನಮ್ಮ ರಾಜ್ಯದಲ್ಲಿ ಇಂತಹ ಪ್ರಸ್ತಾಪ ಆಗಿದ್ದು ಬಹಳ ಕಡಿಮೆ. ಆಗಿಯೇ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆಗಿದ್ದು ಕಡಿಮೆ, ಆಗಿಲ್ಲ ಎಂದು ತಿಳಿದುಕೊಳ್ಳೋಣ. ಇಂದು ಉದ್ಭವವಾಗಿರುವ ಪ್ರಶ್ನೆ ಏನೆಂದರೆ ಅದು ಕೆಳಮನೆಯೇ ಇರಲಿ, ಮೇಲ್ಮನೆಯೇ ಇರಲಿ, ಇದು ವಿಧಾನ ಮಂಡಲದ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಮಾನ್ಯ ಇಬ್ರಾಹಿಂ ಅವರು ಹಾಗೂ ಇತರ ಮಾನ್ಯ ಸದಸ್ಯರು ಹೇಳಿದಂತೆ ರಾಜ್ಯದಲ್ಲಿ ಶಾಸಕರ ಬಗ್ಗೆ ಸಾಕಷ್ಟು ಅಗೌರವ ನಡೆಯುತ್ತಿದೆ ಎಂಬುದನ್ನು ನಾವೆಲ್ಲಾ ಮನಗಂಡಿದ್ದೇವೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರ ಮೇಲೆಯೂ ಸಂಶಯ ಮೂಡಿಸುವಂತಹ ಕೆಲಸ ನಡೆಯುತ್ತಿದೆ. ನಿನ್ನೆ ನಾನು ಹುಬ್ಬಳ್ಳಿಯಿಂದ ಬೆಂಗಳೂರಿಗೆ ರೈಲಿನ ಮೂಲಕ ಪ್ರಯಾಣಿಸುತ್ತಿದ್ದಾಗ ಅಲ್ಲಿ ಶ್ರೀ ಆರ್.ವಿ.ದೇಶಪಾಂಡೆಯವರು, ಶ್ರೀ ಹೆಚ್.ಕೆ.ಪಾಟೀಲ್ ಅವರು ಹೀಗೆ ಬಹಳಷ್ಟು ಮಂದಿ ಇದ್ದರು. ಅಲ್ಲಿ ಮಾತನಾಡುವಾಗ ಜನರು ಯಾರ್‍ಯಾರಿಗೆ ಎಷ್ಟೆಷ್ಟು ರೇಟ್ ಎಂದು ಹೇಳುತ್ತಿದ್ದರು. ಎಂ.ಎಲ್.ಸಿ.ಗಳಿಗೆ ರೇಟ್ ಇಲ್ಲ, ಇವರಿಗೆ ಇಷ್ಟು ಇದೆ ಎಂದೆಲ್ಲಾ ಮಾತನಾಡಿಕೊಳ್ಳುತ್ತಿದ್ದರು. ಹೊರಗಡೆ ಈ ರೀತಿಯಾಗಿ ಮಾತನಾಡುವುದರಿಂದ ಸದನದ ಗೌರವಕ್ಕೆ ಧಕ್ಕೆ ಬರುತ್ತಿದೆ. ಈ ಹಿನ್ನೆಲೆಯಲ್ಲಿ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಜನರಿಗೆ ಇದರ ಸತ್ಯಾಸತ್ಯತೆ ತಿಳಿಯಬೇಕು. ಮಾನ್ಯ ಇಬ್ರಾಹಿಂ ಅವರು ಹೇಳಿದಂತೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಾರೆ ಇದು ಕೇವಲ ಕರ್ನಾಟಕಕ್ಕೆ ಸೀಮಿತವಾಗಿಲ್ಲ; ಇಡೀ ಭಾರತ ದೇಶದ ಎಲ್ಲಾ ರಾಜ್ಯಗಳಲ್ಲಿ ಮಾಧ್ಯಮಗಳ ಮುಖಾಂತರ, ಟಿ.ವಿ.ಗಳ ಮುಖಾಂತರ ಬರುತ್ತಿದೆ. ಹೊರದೇಶಗಳಲ್ಲಿರುವ ನಮ್ಮ ರಾಜ್ಯದವರೂ ಸಹ ನೋಡುತ್ತಿದ್ದಾರೆ. ವಿಧಾನ ಮಂಡಲದ ಗೌರವವನ್ನು ಎತ್ತಿ ಹಿಡಿಯಬೇಕಾದುದು ನಮ್ಮೆಲ್ಲರ ಕರ್ತವ್ಯ. ವಿರೋಧ ಪಕ್ಷದವರು ಆಪಾದನೆಯನ್ನು ಮಾಡುವುದು, ನಾವು ಸಮರ್ಥಿಸಿಕೊಳ್ಳುವುದು ಅಷ್ಟೇನೂ ಪ್ರಮುಖವಾದುದಲ್ಲ. ಇದು ಈ ಸದನವು ನಡೆದುಕೊಂಡು ಬಂದಿರುವಂತಹ ದಾರಿ, ದೇಶದಲ್ಲಿ ಮಾದರಿಯಾಗಿರುವ ಇತಿಹಾಸವುಳ್ಳ ಎರಡೂ ಸದನಗಳ ಘನತೆ – ಗೌರವದ ಪ್ರಶ್ನೆಯಾಗಿದೆ. ಪೀಠಾಸೀನಾಧಿಕಾರಿಗಳ ಸಮ್ಮೇಳನ ನಡೆಯುವ ಸಂದರ್ಭದಲ್ಲಿ ಕರ್ನಾಟಕದವರ ಅಭಿಪ್ರಾಯವನ್ನು ಕೇಳುವ ಸತ್ಸಂಪ್ರದಾಯ ಈ ದೇಶದಲ್ಲಿದೆ. ಇಂತಹ ಒಂದು ಸಮಸ್ಯೆ ಇಂದು ಬಂದಿದೆ. ಪ್ರಶ್ನೋತ್ತರವನ್ನು ಮುಂದೆ ಹಾಕಿ ಇದರ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಬಹಳಷ್ಟು ಮಂದಿ ಕೇಳಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಪ್ರಶ್ನೋತ್ತರವನ್ನು ಮುಂದೆ ಹಾಕಿರುವಂತಹ ಉದಾಹರಣೆಗಳು ಇಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮಸ್ಯೆಗಳ ಮೇಲೆ depend ಆಗುತ್ತದೆ. ಈ ಸಮಸ್ಯೆಯಿಂದ ನಮ್ಮ ಸದನದ ಅಸ್ತಿತ್ವಕ್ಕೆ ಗೌರವ ಇಲ್ಲವೆಂದು ಆದಾಗ ನನಗನ್ನಿಸಿದ ಮಟ್ಟಿಗೆ ಇದು ಸ್ಪಷ್ಟವಾಗಬೇಕು. ಇದರ ಸತ್ಯಾಸತ್ಯತೆಯು ಜನರಿಗೆ ತಿಳಿಯಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಎಲ್ಲರನ್ನೂ ಹಳದಿ ಕಣ್ಣಿನಿಂದಲೇ ನೋಡುವಂತಾಗಬಾರದು. ಈ ಹಿನ್ನೆಲೆಯಲ್ಲಿ ಇದೊಂದು ವಿಶಿಷ್ಟವಾದ ಪ್ರಕರಣವೆಂದು ಪರಿಗಣಿಸಬೇಕು. ತಾವು ನೋಟಿಸ್ ಅನ್ನು ಕೇಳಿದಿರಿ. ತಮಗೆ ಸಂಪೂರ್ಣವಾದಂತಹ ಅಧಿಕಾರವಿದೆ. It depends upon the circumstances of the House. ನಮ್ಮ ಸದನದ ಅಸ್ತಿತ್ವಕ್ಕೆ ಧಕ್ಕೆ ಬಂದಾಗ ಎಲ್ಲವನ್ನೂ ಮುಂದೆ ಹಾಕಿ ಚರ್ಚೆ ಮಾಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ನಾನು ಬಹಳಷ್ಟು ಬಾರಿ ಈ ರೀತಿ ಪ್ರಶ್ನೋತ್ತರವನ್ನು ಮುಂದೆ ಹಾಕಲು ಒಪ್ಪಿರುವುದಿಲ್ಲ. ಆದರೆ ಈಗ ಇಡೀ ವಿಧಾನ ಮಂಡಲದ ಗೌರವಕ್ಕೆ ಧಕ್ಕೆ ಹಾಗೂ ಕಳಂಕ ಬರುವಂತಹ ಸಂದರ್ಭದಲ್ಲಿ ಪ್ರಶ್ನೋತ್ತರಕ್ಕಿಂತ ಇದು ಬಹಳ ಮುಖ್ಯವಾದ ವಿಷಯವೆಂದು ನಾನು ಭಾವಿಸುತ್ತೇನೆ. ತಮಗೆ ಅಧಿಕಾರವಿದೆ. You are the custodian of the House. ನೋಟಿಸ್ ಕೊಡಲಿ, ಕೊಡದೆ ಇರಲಿ; ತಾವು ಎಲ್ಲರ ಭಾವನೆಗಳನ್ನು ಅರ್ಥ ಮಾಡಿಕೊಂಡು ಇದರ ಮೇಲಿನ ಚರ್ಚೆಗೆ ಅವಕಾಶ ಕೊಡುವುದು ಸೂಕ್ತ ಎಂದು ಹೇಳಬಯಸುತ್ತೇನೆ. ಏಕೆಂದರೆ ಈ ಚರ್ಚೆಯಿಂದ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಬಹುದು. ಈ ಎಲ್ಲಾ ಕಳಂಕಗಳಿಂದ ಮುಕ್ತರಾಗಬೇಕೆಂದರೆ ತಾವು ಎಲ್ಲಾ ಕಲಾಪಗಳನ್ನು ಮುಂದೂಡಿ ಚರ್ಚೆಗೆ ಅನುಮತಿಯನ್ನು ಕೊಡುವುದು ಸೂಕ್ತ ಎಂಬುದಾಗಿ ನನ್ನ ಭಾವನೆಯನ್ನು ತಮ್ಮ ಮುಂದೆ ವ್ಯಕ್ತಪಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಹೊರಟ್ಟಿಯವರು ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಅವರು ಸಾಕಷ್ಟು ಸಮಯ ಈ ಪೀಠದಲ್ಲಿ ಕುಳಿತಿದ್ದವರು. ಯಾವುದೇ ಒಂದು ನೋಟಿಸ್ ಕೊಡದೆ ಹೋದರೆ, ಅದಕ್ಕೆ ಉತ್ತರ ಕೊಡಬೇಕಾದವರು ಯಾರು? ಕೊನೆಯದಾಗಿ ಉತ್ತರವನ್ನು ಸರ್ಕಾರವೇ ಕೊಡಬೇಕಾಗಿದೆ. ಆದ್ದರಿಂದ ಯಾವುದೇ ನೋಟಿಸ್ ಇಲ್ಲದೆ ಯಾವುದೇ ವಿಚಾರಗಳ ಬಗ್ಗೆ ಪ್ರಸ್ತಾಪವಾಗುವ ಪೂರ್ವದಲ್ಲಿ ನೋಟಿಸ್ ಅನ್ನು ಕೊಟ್ಟು, ಆ ನೋಟಿಸ್‌ಗೆ ಉತ್ತರವನ್ನು ಕೊಡಬೇಕಾಗಿರುವುದು ಸರ್ಕಾರವೇ ಆಗಿರುವ ಹಿನ್ನೆಲೆಯಲ್ಲಿ ನೋಟಿಸ್ ಕೊಡುವುದು ಸೂಕ್ತ. Suo-moto ನಾವು ಇಲ್ಲಿ ತೆಗೆದುಕೊಂಡು ನಮ್ಮಷ್ಟಕ್ಕೆ ನಾವು ಇಲ್ಲಿ ಚರ್ಚೆ ಮಾಡಿಕೊಳ್ಳಬಹುದೇ ಹೊರತು ಅದಕ್ಕೆ ಒಂದು ಪರ್ಯಾಯ ವ್ಯವಸ್ಥೆ ಆಗುವುದಿಲ್ಲ. ನೋಟಿಸ್ ಅನ್ನು ಕೊಡಿ. ಅದನ್ನು ಪರಿಶೀಲನೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಸರ್ಕಾರವೇ ನೋಟಿಸ್ ಕೊಟ್ಟು ಸರ್ಕಾರವೇ ಉತ್ತರವನ್ನು ಕೊಡಲಾಗುವುದಿಲ್ಲ. ನೋಟಿಸ್ ಕೊಟ್ಟ ಮೇಲೆ ತಾವು ತೀರ್ಪು ಕೊಡಬೇಕಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ವಿಷಯವನ್ನು ಗಮನಿಸಬೇಕು. ಇದು ಸಾರ್ವಜನಿಕ ಹಿತಾಸಕ್ತಿಯ ವಿಷಯವಾಗಿದೆ. ಇಡೀ ರಾಜ್ಯ ಮತ್ತು ರಾಷ್ಟ್ರದಲ್ಲಿ ನಮ್ಮನ್ನೆಲ್ಲಾ ಅನುಮಾನದಿಂದ ನೋಡುತ್ತಿರುವ ಸಂದರ್ಭದಲ್ಲಿ it's a constitutional post. ತಾವು ಸಾಂವಿಧಾನಿಕ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹುದ್ದೆಯನ್ನು ಅಲಂಕರಿಸಿರುವಂತಹ ಸಂದರ್ಭದಲ್ಲಿ ದಿನಪತ್ರಿಕೆಯಲ್ಲಿ ಬಂದರೆ ಸುಪ್ರೀಂ ಕೋರ್ಟ್ cognizance ತೆಗೆದುಕೊಳ್ಳುತ್ತದೆ. ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳು cognizance ತೆಗೆದುಕೊಳ್ಳುತ್ತಾರೆ. ಹಾಗಾಗಿ ಸಾರ್ವಜನಿಕ ಹಿತಾಸಕ್ತಿ ಇರುವುದರಿಂದ ನೋಟಿಸ್‌ನ ಅವಶ್ಯಕತೆಯಿಲ್ಲವೆಂದು ನಾನು ಭಾವಿಸುತ್ತೇನೆ. ನೋಟಿಸ್ ಕೊಡುವುದಕ್ಕೆ ಏನೂ ತೊಂದರೆ ಇಲ್ಲ. ಈಗಲೇ ಒಂದಷ್ಟು ಜನ ಸದಸ್ಯರು ಸಹಿ ಮಾಡಿ ನೋಟಿಸ್ ಅನ್ನು ಕೊಡುತ್ತೇವೆ. ಆದರೆ ತಾವು cognizance ಅನ್ನು ತೆಗೆದುಕೊಂಡು ಇದನ್ನು ತಕ್ಷಣವೇ ವಿಚಾರಣೆಗೆ ಒಳಪಡಿಸುವುದಕ್ಕೆ ಯಾವುದೇ ತರಹದ ತೊಂದರೆಯಿಲ್ಲ. ಆತಂಕವೂ ಇಲ್ಲ. ಕಾಯಿದೆಯಲ್ಲಿ ಯಾವುದೇ ರೀತಿಯಾಗಿ ತಮಗೆ ತೊಂದರೆಯಿಲ್ಲ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನೋಟಿಸ್ ಕೊಡುವ ಬಗ್ಗೆ ತಾವು ಹೇಳಿದುದನ್ನು ನಾವು ಒಪ್ಪುತ್ತೇವೆ. ಸರ್ಕಾರವೇ ನೋಟಿಸ್ ಕೊಡುವ ಪ್ರಶ್ನೆ ಬರುವುದಿಲ್ಲ. ಸದಸ್ಯರಾದ ನಾವು ನೋಟಿಸ್ ಅನ್ನು ಕೊಡುತ್ತೇವೆ. ಊಟದ ನಂತರ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನೀಡುವುದರಲ್ಲಿ ತಪ್ಪೇನಿಲ್ಲ. As Members of this House ನೋಟಿಸ್ ಅನ್ನು ಕೊಡುತ್ತೇವೆ. ತಾವು ಅದನ್ನು ಪರಿಗಣಿಸಿ ಚರ್ಚೆಗೆ ಅವಕಾಶ ಮಾಡಿಕೊಡಬಹುದು.

(18) 11.02.2019 KG.AK 1.40

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ನೋಟಿಸ್ ಕೊಡಿ ಎಂದು ಹೇಳಿದ ಮೇಲೆ, ನಾವೆಲ್ಲರೂ ನೋಟಿಸ್ ಕೊಡುವುದಕ್ಕೆ ತಯಾರಿದ್ದೇವೆ. ತಾವು ಪುನಃ ಕಾನೂನಿನ ತೊಡಕನ್ನು ತೆಗೆದುಕೊಂಡು ಬೆಳಿಗ್ಗೆ ಕೊಡಬೇಕಾಗಿತ್ತು, ಮೊದಲೇ ಕೊಡಬೇಕಾಗಿತ್ತು ಎಂದು ಈ ವಿಷಯವನ್ನು ನಾಳೆಗೆ ದಯವಿಟ್ಟು ಹಾಕಬೇಡಿ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಈ ವಿಷಯವನ್ನು ನಾಳೆ ತೆಗೆದುಕೊಳ್ಳುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಈ ವಿಷಯ ಇವತ್ತು clarification ಆಗಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಇವತ್ತು ಆಗುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಇವತ್ತು ಆಗಬೇಕು. ನಾವು ಆಡಳಿತ ಪಕ್ಷದಲ್ಲಿ ಇದ್ದು, ನಮಗೂ ಸಹ ನೋವು ಆಗುತ್ತಿದೆ. ನಮಗೆ ಬಾವಿಗೆ ಹೋಗಬೇಕಾದಂತಹ ಪರಿಸ್ಥಿತಿ ಬರಬಾರದಾಗಿತ್ತು, ಈಗ ಆ ಪರಿಸ್ಥಿತಿ ಬಂದಿರುವುದರಿಂದ ನಾವೂ ಸಹ ಅದನ್ನು ಒಪ್ಪುವುದಿಲ್ಲ. ಆದರೆ, ಪರಿಸ್ಥಿತಿ ಆ ರೀತಿ ನಿರ್ಮಾಣವಾಗಿರುವುದರಿಂದ ನಮ್ಮ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

consciousಗೆ ವಿರುದ್ಧವಾಗಿದ್ದರೂ ಸಹ, ನಾವು ಅದನ್ನು ಮಾಡಬೇಕಾಗಿರುತ್ತದೆ. ಏಕೆಂದರೆ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅತ್ಯುನ್ನತ ಸ್ಥಾನಕ್ಕೆ ಅಗೌರವ ಬಂದಿರುವಂತಹ ಸಂದರ್ಭದಲ್ಲಿ ಅದನ್ನು ಕಾಪಾಡುವಂತಹ ವ್ಯವಸ್ಥೆ ಆಗಬೇಕು. ಇದು ಕೇವಲ ಅವರೊಬ್ಬರಿಗೆ ಮಾತ್ರ ಆಗಿರುವುದಿಲ್ಲ. ಇಲ್ಲಿ ಕೆಳಮನೆ ಮತ್ತು ಮೇಲ್ಮನೆ ಪ್ರಶ್ನೆ ಅಲ್ಲ. ಸದನ ಎಂದರೆ, ವಿಧಾನಮಂಡಲ. ಆದ್ದರಿಂದ, ಇವತ್ತು ಮಧ್ಯಾಹ್ನ ಊಟದ ಸಮಯವಾದ ನಂತರ ಚರ್ಚೆಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಆಗ್ರಹಿಸುತ್ತೇನೆ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ನಾವು ನೋಟಿಸ್ ಕೊಡುತ್ತೇವೆ. ಇವತ್ತು ಮಧ್ಯಾಹ್ನ ಊಟದ ಸಮಯದ ನಂತರ ನಮಗೆ ಚರ್ಚೆಗೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನೋಟಿಸ್ ಕೊಡಿ. ಅದನ್ನು ಪರಿಶೀಲನೆ ಮಾಡೋಣ. ಮೊದಲು Question Hour ಮುಗಿಯಲಿ. ಏಕೆಂದರೆ, ನಾಳೆಯೂ ಸಹ ಚರ್ಚೆ ಮಾಡಬಹುದು.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾವು Question Hour ನಡೆಯುವುದಕ್ಕೆ ಬಿಡುವುದಿಲ್ಲ.

(ಗೊಂದಲ)

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮನ್ನು ಇಡೀ ರಾಷ್ಟ್ರ ನೋಡುತ್ತಿದೆ. ನಮ್ಮನ್ನು ಜನರು ಅನುಮಾನಾಸ್ಪದವಾಗಿ ನೋಡುತ್ತಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿರವರು ಮತ್ತು ಶ್ರೀ ಸಿ.ಎಂ.ಇಬ್ರಾಹಿಂರವರು ಹೇಳಿದಂತೆ ತಾವು ಚರ್ಚೆಗೆ ಅವಕಾಶ ಮಾಡಿಕೊಡಿ. ನಾವೆಲ್ಲರೂ ಆಡಳಿತ ಪಕ್ಷದ ಸದಸ್ಯರಾಗಿದ್ದರೂ ಸಹ, ಇವತ್ತು ಮನನೊಂದು ಮೊದಲ ಬಾರಿ ಬಾವಿಯೊಳಗೆ ಹೋಗಿದ್ದೇವೆ. ಆದ್ದರಿಂದ, ತಾವು ಇದನ್ನು ಅರ್ಥಮಾಡಿಕೊಂಡು ವಿಶೇಷವಾಗಿ ಚರ್ಚೆಗೆ ಅವಕಾಶ ಮಾಡಿಕೊಡಿ. ನಾವು ತಮ್ಮ ರಕ್ಷಣೆ ಎಷ್ಟು ಮುಖ್ಯ ಎಂಬುದನ್ನು ತಿಳಿದುಕೊಂಡಿದ್ದೇವೆ. ತಮ್ಮ ಪೀಠದ ಬಗ್ಗೆ ಪ್ರಶ್ನೆ ಬಂದಿರುವಂತಹ ಸಂದರ್ಭದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೈಜೋಡಿಸಿ ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನೋಟಿಸ್ ಕೊಡಿ. ಪರಿಶೀಲನೆ ಮಾಡೋಣ.

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ನಮ್ಮ ಅಸ್ತಿತ್ವವೇ ಉಳಿದಿಲ್ಲ. ಇನ್ನೂ Question Hour ಪ್ರಶ್ನೆ ಏನು ಬಂತು. ಇದು ನಮ್ಮ ಮರ್ಯಾದೆ ಪ್ರಶ್ನೆ. ತಮಗೆ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಿ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, Question Hour ಮುಖ್ಯವಾಗಿದೆಯೋ ಅಥವಾ ಈಗ ಬಂದಿರುವಂತಹ ಆಪಾದನೆ ಮುಖ್ಯವಾಗಿದೆಯೋ ಎಂಬುದು ಇಲ್ಲಿ ಬಹಳ ಗಂಭೀರವಾಗಿದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ರಾಥೋಡ್‌ರವರೇ ತಾವೀಗ ಮಾತನಾಡಿ.

**ಶ್ರೀ ಪ್ರಕಾಶ್ ಕೆ ರಾಥೋಡ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಬಾವಿಗೆ ಬರಲಿಲ್ಲ. ಏಕೆ ಬರಲಿಲ್ಲವೆಂದರೆ, it's a matter of utmost public importance. ನಮ್ಮ ಘನತೆ, ಗೌರವ ಹರಾಜು ಆಗುತ್ತಿದೆ. ನಾವು ಹೊರಗಡೆ ಹೋಗಿ ಶಾಸಕರು ಎಂದು ಹೇಳಿಕೊಳ್ಳುವುದಕ್ಕೆ ನಾಚಿಕೆ ಆಗುತ್ತಿದೆ. ನಮ್ಮ ಮೇಲೆ ಆಪಾದನೆ ಮಾಡುತ್ತಾರೆ. ಪೀಠದ ಮೇಲೆ ಆಪಾದನೆ ಮಾಡುತ್ತಿದ್ದಾರೆ. We are House of Elders. ಇದನ್ನು ನಾವು ಚರ್ಚೆ ಮಾಡಲಿಲ್ಲವೆಂದರೆ, ಇದನ್ನು ಬೇರೆ ಯಾರು ಮಾಡುತ್ತಾರೆ? ಇದರ ಬಗ್ಗೆ ಕೆಳಮನೆಯಲ್ಲಿ ಚರ್ಚೆ ನಡೆಯುತ್ತಿದೆ. ಅದು ಈ ಸದನಕ್ಕೂ ಚರ್ಚೆಗೆ ಬಂದೇ ಬರುತ್ತದೆ. ನಾವು ಇವತ್ತು ನೋಟಿಸ್ ಕೊಡುತ್ತೇವೆ. ಅದರ ಚರ್ಚೆಗೆ ನಾಳೆ ಎಂದು ದಯವಿಟ್ಟು ಹೇಳಬೇಡಿ. It's not only a matter of utmost public importance but it's a matter of urgency also. ತಾವು ಇದನ್ನು ದಯವಿಟ್ಟು ಪರಿಗಣಿಸಿ. ಇದಕ್ಕೆ ಇವತ್ತೇ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಈಗ ಸದನವನ್ನು 3.00 ಗಂಟೆಯವರೆಗೆ ಮುಂದೂಡಿದ್ದೇನೆ.

**(ಭೋಜನ ವಿರಾಮಕ್ಕಾಗಿ ಸದನವು ಮಧ್ಯಾಹ್ನ 1 ಗಂಟೆ 44 ನಿಮಿಷಗಳಿಗೆ ಮುಂದೂಡಲ್ಪಟ್ಟಿತು. ಪುನಃ ಮಧ್ಯಾಹ್ನ 3 ಗಂಟೆಗೆ ಸದನವು ಸಮಾವೇಶಗೊಳ್ಳಲು ನಿಶ್ಚಯಿಸಿತು)**

(19)11.02.2019–3.40–ಟಿಸಿಹೆಚ್–ಬಿಎನ್‌ಎಸ್,

**(ಸದನವು ಭೋಜನ ವಿರಾಮದ ನಂತರ ಮಧ್ಯಾಹ್ನ 3 ಗಂಟೆ 46 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಾನು ಮತ್ತು 7–8 ಸದಸ್ಯರು ಸೇರಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳಲ್ಲಿನ ನಿಯಮ 342ರ ಅಡಿಯಲ್ಲಿ ಅರ್ಜಿಯನ್ನು ತಮಗೆ ಕೊಟ್ಟಿದ್ದೇವೆ. ಆ ಅರ್ಜಿಯಲ್ಲಿ ನಾವು ಇವತ್ತು ಹೇಳಿರತಕ್ಕಂಥ ವಿಚಾರ ಇಷ್ಟೆ. 'ಆಡಿಯೋದಲ್ಲಿರುವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಧ್ವನಿ ನನ್ನದೇ, ಶಾಸಕರ ಪುತ್ರನೊಂದಿಗೆ ಮಾತನಾಡಿದ್ದನ್ನು ಒಪ್ಪಿಕೊಂಡ ಯಡಿಯೂರಪ್ಪ' ಎಂದು ಪತ್ರಿಕೆಯಲ್ಲಿ ವರದಿಯಾಗಿದೆ.

**ಸಭಾಪತಿಯವರು:–** ತಾವು ಯಾವ ನಿಯಮದಲ್ಲಿ ಕೊಟ್ಟಿದ್ದೀರಿ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಬೇರೆ ಯಾವುದೇ provision ನ ಅಡಿಯಲ್ಲಿ ಕೊಟ್ಟರೂ ಪ್ರಯೋಜನವಿಲ್ಲವೆಂದು ನಿಯಮ 342 ರ ಅಡಿಯಲ್ಲಿ ಅರ್ಜಿ ಕೊಟ್ಟಿದ್ದೇನೆ. ನಿಯಮ 342 ಏನು ಹೇಳುತ್ತವೆ ಎಂದರೆ, ಈ ಪುಸ್ತಕದ ಅಡಿಯಲ್ಲಿ ಏನೆಲ್ಲಾ ಈ ಸದನದ ನಿಯಮಗಳಿವೆ, ಈ ನಿಯಮಗಳನ್ನು ಮೀರಿ ಚರ್ಚೆಗೆ ಅವಕಾಶ ಕೊಡಬೇಕು ಅಥವಾ ನಾವು ಯಾವುದೇ ವಿಷಯವನ್ನು ಚರ್ಚೆ ಮಾಡಬೇಕೆಂದರೆ, that power lies with the Chair. ಅಲ್ಲಿ ಕುಳಿತುಕೊಳ್ಳತಕ್ಕಂಥ ತಮಗೆ ಆ ಅಧಿಕಾರವಿದೆ. ಹಾಗಾಗಿ, ನಿಯಮ 342 ರಲ್ಲಿ **"ಉಳಿದ ಅಧಿಕಾರಗಳು:–** ಈ ನಿಯಮಗಳಲ್ಲಿ ನಿರ್ದಿಷ್ಟವಾಗಿ ವಿಧಾಯಕ ಮಾಡದೇ ಇರುವ ಎಲ್ಲಾ ವಿಷಯಗಳನ್ನೂ ಮತ್ತು ಈ ನಿಯಮಗಳಿಗನುಸಾರವಾಗಿ ಕೆಲಸ ನಡೆಯುವುದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಸಭಾಪತಿಯವರು ಆಗಿಂದಾಗ್ಗೆ ನಿರ್ದೇಶಿಸುವಂತೆ ಕ್ರಮಗೊಳಿಸಬೇಕು" ಎಂದು ಹೇಳಲಾಗಿದೆ. ಮಾನ್ಯ ಸಭಾಪತಿಯವರೆ, ನಿಯಮ 59ರಲ್ಲಿ ಅವಕಾಶ ಕೊಡಬೇಕೆಂದರೆ, ಸದನ ಪ್ರಾರಂಭವಾಗುವುದಕ್ಕೆ ಒಂದು ಗಂಟೆ ಮುಂಚಿತವಾಗಿ ತಮಗೆ ಅರ್ಜಿ ಕೊಡಬೇಕು ಮತ್ತು ಅದು ಸಾರ್ವಜನಿಕ ಮಹತ್ವವುಳ್ಳದ್ದಾಗಿರಬೇಕು. ಅದಕ್ಕೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ ಎಂಬುದು ನನಗೂ ಕೂಡ ಗೊತ್ತಿದೆ. ಹಾಗಾಗಿ, ನಾನು ಈ ವಿಚಾರವನ್ನು ನಿಯಮ 342ರ ಅಡಿಯಲ್ಲಿ ಏಕೆ ತೆಗೆದುಕೊಳ್ಳಬೇಕೆಂದರೆ, ಈ ಸದನದಲ್ಲಿ ಯಾವುದೆಲ್ಲಾ ವಿಚಾರಗಳು ಇದರಲ್ಲಿ ಅಡಕವಾಗಿಲ್ಲವೋ, ಅಂತಹ ವಿಚಾರಗಳನ್ನು ಮಾನ್ಯ ಸಭಾಪತಿಯವರು ತಮ್ಮ discretionary power ನಲ್ಲಿ ತೆಗೆದುಕೊಳ್ಳಬಹುದು. ಅದಕ್ಕಾಗಿ ಈ ವಿಚಾರವಾಗಿ ನಿನ್ನೆ ನಡೆದಂತಹ ಧ್ವನಿ ಸುರುಳಿ ಘಟನೆ ಏನಿದೆ. . .

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ. . .**

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾ ರವರು ನಿಯಮಾವಳಿಗಳ ಬಗ್ಗೆ ಕೇಳುತ್ತಿದ್ದಾರೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, Business Advisory Committeeಯಲ್ಲಿ ಚರ್ಚೆ ಮಾಡಿರುವಂತೆ ಪ್ರಶ್ನೋತ್ತರ ಅವಧಿಗೆ ಮೊದಲು ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇವೆಂದು ವಿರೋಧಪಕ್ಷದವರು ಎಷ್ಟೇ ಬಾರಿ ಕೇಳಿದರೂ ತಾವು ಅವಕಾಶ ಕೊಟ್ಟಿಲ್ಲ. ಆದರೆ, ಇವತ್ತು ಪ್ರಶ್ನೋತ್ತರ ಅವಧಿಗೆ ಮುಂಚಿತವಾಗಿ ಈ ವಿಚಾರವನ್ನು ಚರ್ಚೆ ಮಾಡಬೇಕೆಂದು ಹೇಳುತ್ತಿದ್ದಾರೆ. ತಾವು ದಯವಿಟ್ಟು ಪ್ರಶ್ನೋತ್ತರ ಅವಧಿ ಮುಗಿದ ನಂತರ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಮಾನ್ಯ ಸಭಾಪತಿಯವರೇ, ತಾವೇ ತೆಗೆದುಕೊಂಡಿರತಕ್ಕಂಥ



"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಿರ್ಣಯ ಮತ್ತು ನಾವೇ ಮಾಡಿರತಕ್ಕಂಥ ನಿಯಮಾವಳಿಗಳು. ತಾವು ಈ ರೀತಿ ಪ್ರಶ್ನೋತ್ತರಕ್ಕಿಂತ ಮುಂಚಿತವಾಗಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ, ಮುಂದೆ ಮಾನ್ಯ ವಿರೋಧಪಕ್ಷದವರು ಕೇಳಿದಾಗಲೂ ಸಹ ಅವಕಾಶ ಮಾಡಿಕೊಡಬೇಕಾಗುತ್ತದೆ. ಮೊದಲು ಪ್ರಶ್ನೋತ್ತರ ನಡೆಯದೇ ಯಾವುದೇ ಚರ್ಚೆಗೆ ಅವಕಾಶ ಮಾಡಿಕೊಡಬಾರದು.

**ಸಭಾಪತಿಯವರು:–** ಸರಿ. ಇದೇ ರೀತಿ 365 ದಿವಸವೂ ಇದನ್ನೇ ಹೇಳುತ್ತಿದ್ದೀರಿ. ಬಾವಿಯಲ್ಲಿ ಧರಣಿ ಕುಳಿತುಕೊಳ್ಳುತ್ತೀರಿ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಈ ವಿಚಾರವು ಸದನದ ಗೌರವದ ಪ್ರಶ್ನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಈಗ ಏನಾಯಿತು ಎಂದು ಹೇಳಿ. ಮಾನ್ಯ ವಿರೋಧ ಪಕ್ಷಕ್ಕೆ ಬುದ್ದಿ ಹೇಳುವಂತಹ ಸರ್ಕಾರ ಪ್ರತಿ ಬಾರಿ ನಿಯಮಾವಳಿಗಳನ್ವಯ ಬಗೆಹರಿಸಿಕೊಳ್ಳುವಂತಹ ಸರ್ಕಾರ ಎಲ್ಲಿಗೆ ಬಂತು ಎಂದು ನಾವು ನೋಡುತ್ತಿದ್ದೇವೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಇಂತಹ ಸನ್ನಿವೇಶ ಯಾವತ್ತೂ ನಿರ್ಮಾಣವಾಗಿರಲಿಲ್ಲ. ಇವತ್ತಿನ ದಿವಸ ನಿಯಮಾವಳಿಗಳನ್ವಯ ಚರ್ಚೆ ಮಾಡಬೇಕಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ನಾನು ನಿಯಮ 342ರ ಅಡಿಯಲ್ಲಿ ಏಕೆ ಈ ವಿಚಾರವನ್ನು ತಂದಿದ್ದೇವೆಂದರೆ, ಈ ವಿಚಾರ ಇಡೀ ರಾಜ್ಯದ ಪ್ರತಿಯೊಬ್ಬ ಶಾಸಕರ ಘನತೆ ಮತ್ತು ಗೌರವದ ಪ್ರಶ್ನೆ ಹಾಗೂ ಈ ಸದನದ ಗೌರವದ ಪ್ರಶ್ನೆಯಾಗಿದೆ. ಈ ವಿಚಾರದಲ್ಲಿ we can go for the privilege motion. ನಾನು ಈ ಸದನದ ಒಬ್ಬ ಸದಸ್ಯನಾಗಿ ನನ್ನ ಹಕ್ಕಿಗೆ ಚ್ಯುತಿ ಬಂದಿದೆ. ವಿಧಾನಮಂಡಲಗಳ ಸದನದ ವಿರೋಧ ಪಕ್ಷದ ನಾಯಕರು ಈ ರೀತಿ. . .

**(ಗೊಂದಲ)**

(20)11.2.2019/3.50/ಎಂ.ಎಂ–ಬಿ.ಎನ್.ಎಸ್

(ಸಭಾಪತಿಯವರ ಉಪಸ್ಥಿತಿ)

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** (ಗೊಂದಲ) ಲಕ್ಷಗಟ್ಟಲೆ, ಕೋಟಿಗಟ್ಟಲೆ ಲೆಕ್ಕ ಹಾಕುತ್ತಾರೆ. (ಗೊಂದಲ) ಈ ವಿಚಾರದಲ್ಲಿ ವಿಧಾನ ಪರಿಷತ್ತನ್ನು ಇವತ್ತು . . .

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಹಾಕುವುದಕ್ಕೆ ಅವರು ಯಾರು ಎಂಬುದನ್ನು ದಯವಿಟ್ಟು ತಿಳಿಸಿ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರು . . .

**ಸಭಾಪತಿಯವರು:–** ಯಾವ ನಿಯಮಾವಳಿ ಎಂಬುದನ್ನು ತಿಳಿಸಿ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರು ನಿಯಮ 342ನ್ನು ಪ್ರಸ್ತಾಪ ಮಾಡಿದ್ದಾರೆ. ನಿಯಮ 342 ಏನು ಹೇಳುತ್ತದೆ ಎಂದರೆ, ಈಗಿರುವ ನಿಯಮಾವಳಿಗಳಲ್ಲಿ ಯಾವುದು ಬಿಟ್ಟುಹೋಗಿದೆಯೋ ಈ ನಿಯಮಗಳಲ್ಲಿ ನಿರ್ದಿಷ್ಟವಾಗಿ ವಿಧೇಯಕ ಮಾಡದೇ ಇರುವ ಎಲ್ಲಾ ವಿಷಯಗಳನ್ನು ಯಾವುದರಲ್ಲಿ ವಿಧೇಯಕಗಳಿಲ್ಲ, ನಿಯಮಗಳಿಲ್ಲ ಮತ್ತು ಈ ನಿಯಮಗಳಿಗನುಸಾರವಾಗಿ ಕೆಲಸ ನಡೆಯುವುದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಸಭಾಪತಿಯವರು ಆಗಿಂದಾಗ್ಗೆ ನಿರ್ದೇಶಿಸುವಂತೆ ಕ್ರಮಗೊಳಿಸುವುದಾಗಿದೆ ಇಷ್ಟೇ, ಇದರ ವ್ಯಾಪ್ತಿ ಬಹಳ ದೊಡ್ಡದಾಗಿಲ್ಲ. ಈಗ ಅವರು ಏನು ಪ್ರಸ್ತಾಪ ಮಾಡುವುದಕ್ಕೆ ಮಾತನಾಡಿದರು ಅದಕ್ಕೆ ಸಂಬಂಧಪಟ್ಟಂತೆ ತಾವು ಬೆಳಿಗ್ಗೆ ನೋಟಿಸನ್ನು ಕೊಡಿ ಎಂದು ಹೇಳಿದ್ದೀರಿ. ನೋಟಿಸ್ ಕೊಡುವುದಕ್ಕೆ ಕೂಡ ಇಲ್ಲಿ ಅವಕಾಶವಿದೆ. ನಿಯಮ 286ರಲ್ಲಿ ತಮಗೆ ನೋಟಿಸ್ ಕೊಡಬೇಕು. ನೋಟಿಸ್ ಕೊಡುವಾಗಲೂ ಕೂಡ ಕೆಲವು ನಿಯಮಾವಳಿಗಳಿವೆ. ನೋಟಿಸನ್ನು ಹೇಗೆ ಕೊಡಬೇಕು ಎನ್ನುವಂತಹದ್ದು. ಹಕ್ಕುಚ್ಯುತಿ, ಶೂನ್ಯವೇಳೆ, ಇಂತಹ ಒಂದೆರಡನ್ನು ಬಿಟ್ಟರೆ ನಮ್ಮ ಈ ಸದನಗಳಲ್ಲಾಗಲೀ ಅಥವಾ ಪಾರ್ಲಿಮೆಂಟ್‌ನಲ್ಲಾಗಲೀ ಎಲ್ಲಿಯೇ ಆಗಲಿ ಸಭಾಪತಿಗಳಿಗೆ ಅರ್ಜಿಯನ್ನು ಸಲ್ಲಿಸುವಾಗ ಒಂದು format ಇದೆ. ನಿಯಮ 286ರಡಿಯಲ್ಲಿ ಸೂಚನೆಯನ್ನು ಕಳುಹಿಸಿ ಕೊಡದೇ ನಿಯಮ 342 ರಡಿಯಲ್ಲಿ ಏಕೆ ಸೂಚನೆಯನ್ನು ತಂದಿದ್ದಾರೆ ಎಂದರೆ, ಆ format ನಲ್ಲಿ ಯಾರು ಉತ್ತರಿಸಬೇಕು, ಯಾವ ವಿಷಯ ಎಂದು ಹೇಳಬೇಕಾಗುತ್ತದೆ. ನಿಯಮ 342ರಡಿ ಒಂದು ವಾದಕ್ಕಾಗಿ ಮಾತನಾಡಲು ಅವಕಾಶವನ್ನು ಕೊಟ್ಟರಿ ಎಂದು ಭಾವಿಸಿದರೆ ಹೇಳತಕ್ಕಂತಹ ವಿಷಯಕ್ಕೆ ಯಾರು ಉತ್ತರಿಸಬೇಕು? ಸಭಾಪತಿಯವರು ಉತ್ತರಿಸಬೇಕೇ? ನಿರ್ದೇಶನ ಕೊಡುವ ಅಂಶ ಬೇರೆ. ಯಾವುದೋ ಒಂದು ಪ್ರಕರಣವನ್ನು ಪ್ರಸ್ತಾವ ಮಾಡಿದಾಗ, ಅವರು ಇನ್ನೂ ಉಲ್ಲೇಖ ಮಾಡಲು ಬಯಸುತ್ತಿದ್ದಾರೆ, ಒಂದೆರಡು ಮಾತುಗಳನ್ನು ಆಡಿದ್ದನ್ನು ಕೇಳಿದ್ದೇವೆ. ಅದಕ್ಕೆ ಉತ್ತರಿಸುವವರು ಯಾರು? ನಾವು ನಿಮಗೆ ಏನು ಸೂಚನೆ ಕೊಡುತ್ತೇವೆಯೋ ಆ ಸೂಚನೆಗಳಿಗೆ specific ಆಗಿ ಯಾವ ವಿಷಯವನ್ನು ಮಾತನಾಡುತ್ತೇನೆ ಯಾರಿಗೆ ಸಂಬಂಧಪಟ್ಟಂತೆ ಮಾತನಾಡುತ್ತೇನೆ, ಉತ್ತರವನ್ನು ಯಾರಿಂದ ನಿರೀಕ್ಷೆ ಮಾಡುತ್ತೇನೆ ಎಂದು ಇರುತ್ತದೆ. ಆ ರೀತಿ ತಮಗೆ ಕೋರಿಕೆ ಬಂದಿದ್ದರೆ ಅದರ ಆಧಾರದ ಮೇಲೆ ತಾವು ಅಧಿಕಾರವನ್ನು ಚಲಾಯಿಸಬಹುದು. ಅದೇ ಸಂದರ್ಭದಲ್ಲಿ ತಮ್ಮ ಗಮನಕ್ಕೆ ನಿಯಮ 307 ಮತ್ತು 308;

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಆಯನೂರು ಮಂಜುನಾಥರವರೇ, . . .

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನ್ನ ಮಾತು ಇನ್ನೂ ಮುಗಿದಿಲ್ಲ, ದಯಮಾಡಿ ಮಾನ್ಯ ಹಿರಿಯ ಸದಸ್ಯರು ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ಅವರು ಸಚಿವರಾಗಿದ್ದಂತಹವರು, ನನಗಿಂತ ಹೆಚ್ಚು ಅವರಿಗೆ ಗೊತ್ತಿರುತ್ತದೆ, ಆದ್ದರಿಂದ ನನಗೆ ಒಮ್ಮೆ ಮಾತನಾಡಲು ತಾವು ಅವಕಾಶ ಕೊಡಬೇಕು. ನಿಯಮ 307 ಮತ್ತು 308 ರಡಿಯಲ್ಲಿ ಪ್ರಸ್ತಾಪ ಮಾಡುವ ವಿಷಯದಲ್ಲಿ ನಿಯಮಾವಳಿ ಇದೆ. ನಿಯಮ 307ರಲ್ಲಿ ಒಬ್ಬ ವ್ಯಕ್ತಿಯನ್ನು ಕುರಿತು ಆಪಾದನೆ ಮಾಡುವಾಗ ಏನೇನು ಇರಬೇಕು ಎನ್ನುವುದು ತಮ್ಮ ಮಾಹಿತಿಗೆ; ಅದರ ವ್ಯಾಪ್ತಿಯಲ್ಲಿ ಸದನದಲ್ಲಿರುವಂತಹ ಎಲ್ಲಾ ಸದಸ್ಯರಿಗೂ ವಿಷಯವನ್ನು ಮಂಡನೆ ಮಾಡುವಂತಹ ಸರ್ವ ಹಕ್ಕು ಅವರಿಗೆ ಇದೆ. ಆದರೆ ಒಬ್ಬ ವ್ಯಕ್ತಿ ಅಥವಾ ವಿಷಯವನ್ನು ಇಟ್ಟುಕೊಂಡು ಮಾತನಾಡುವಾಗ ನಿಯಮ 307ರೊಳಗೆ ನಿಯಮಾವಳಿ ಏನೇನು ಹೇಳುತ್ತದೆ ಎಂದರೆ;

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ವ್ಯಕ್ತಿಯ ಹೆಸರು ಇಲ್ಲ. ನಿರ್ದಿಷ್ಟವಾಗಿ ವ್ಯಕ್ತಿಯ ಹೆಸರು ಇದ್ದರೆ ಹೇಳಬಹುದು. ಆದರೆ ಇಲ್ಲಿ ವ್ಯಕ್ತಿಯ ಪ್ರಶ್ನೆ ಬಂದಿಲ್ಲ.

**ಶ್ರೀ ಆಯನೂರು ಮಂಜುನಾಥ್:–** ಆಗಬಹುದು, ನಿಯಮ 307 ಮತ್ತು 308ರಲ್ಲಿ ಏನು ಹೇಳುತ್ತದೆ ಎಂಬುದನ್ನು ಪರಿಶೀಲಿಸಿ ಇವೆರಡನ್ನೂ ಪರಿಗಣನೆಗೆ ತೆಗೆದುಕೊಂಡು ತಾವು ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ವಿಧಾನ ಪರಿಷತ್ತು ಎಲ್ಲಕ್ಕಿಂತ ಪುರಾತನವಾದುದು. ಈ ಸದನದಲ್ಲಿ ನೂರಾರು ರೂಲಿಂಗ್ಸ್ ಇವೆ. ಕೆಳಮನೆಯ ವಿಷಯಗಳನ್ನು ಅಥವಾ ಇತರ ಯಾವುದೇ ಮನೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಇಲ್ಲಿ ಪ್ರಸ್ತಾವ ಮಾಡುವುದಕ್ಕೆ ಬರುತ್ತದೋ ಇಲ್ಲವೋ ಎಂಬ ಬಗ್ಗೆ ಹಲವಾರು ರೂಲಿಂಗ್ಸ್ ಇದೇ ತಮ್ಮ ಪೀಠದಿಂದ ಹಿಂದೆ ಇದ್ದಂತಹ ಸಭಾಪತಿಗಳು ಕೊಟ್ಟಂತಹ ನೂರಾರು ಪ್ರಕರಣಗಳು ಇವೆ. ಚರ್ಚೆಗೆ ಹೋದರೆ ಇದರ ಬಗ್ಗೆ ದೀರ್ಘವಾಗಿ ಮಾತನಾಡಲು ಆಮೇಲೆ ಬಯಸುತ್ತೇನೆ. ಆ ರೀತಿ ಯಾವ ಯಾವ ಸಂದರ್ಭಗಳಲ್ಲಿ ಸಭಾಪತಿಯವರು ರೂಲಿಂಗ್ ಕೊಟ್ಟಿದ್ದಾರೆ ಎಂಬುದನ್ನು ಇಸವಿ, ದಿನಾಂಕಗಳ ಸಹಿತ . . .

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಆಯನೂರು ಮಂಜುನಾಥ್‌ರವರೇ, . . .

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಶರಣಪ್ಪ ಮಟ್ಟೂರವರೇ, ಒಂದು ನಿಮಿಷ ಇದನ್ನು ಮುಗಿಸಿಬಿಡುತ್ತೇನೆ.

**Sri SHARANAPPA MATTUR** :- Interruption. ನಾನು ಬೇರೆ ಏನನ್ನೂ ಹೇಳುವುದಿಲ್ಲ, ತಮ್ಮ submission ಸರಿಯಾಗಿದೆ. With regard to Rule 342 of Rules of Procedure and Conduct of Business in the Karnataka Legislative Council ಅವರು ಏನು ಹೇಳಿದರು, when the Rules of Procedure is silent about making an application before this House, he has a provision to make this application ಎಂದು ಅವರು ಹೇಳಿದ ಮೇಲೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಾವು ಇದಕ್ಕೆ ಸೀಮಿತವಾಗಿ ತಮ್ಮ submission ನ ಸ್ವೀಕಾರಕ್ಕೆ ಹೇಳಿದ್ದಾರೆ. ಆದರೆ ಆ ರೂಲಿಂಗ್ ಬಗ್ಗೆ next point ಗೆ ಬರುತ್ತದೆ ಅದನ್ನು ಇಲ್ಲಿ ಹೇಳಬಾರದು. ತಾವು ಈಗ ಅದನ್ನು ಹೇಳಿದರೆ ಬೇರೆ ಆಗುತ್ತದೆ.

**ಶ್ರೀ ಆಯನೂರು ಮಂಜುನಾಥ್:-** ಆಗಬಹುದು. ಅದಕ್ಕೆ ಸೀಮಿತಗೊಳಿಸಿಕೊಂಡೇ, over hearing, ತಾವು ಇನ್ನೂ ಪೂರ್ತಿ ಅವಕಾಶ ಕೊಟ್ಟಿಲ್ಲ. ಕೆಳ ಮನೆಯ ಒಂದು ವಿಷಯವನ್ನು ಮಾತನಾಡಿದ್ದಾರೆ. ನಡೆದಿರುವಂತಹ ಪ್ರಕರಣ ಅದು ಎಲ್ಲಿಯೇ ನಡೆದಿರಲಿ, ಹಕ್ಕುಚ್ಯುತಿ ಉಂಟಾದಾಗ ಅಥವಾ ಸದನದ ವ್ಯಾಪ್ತಿಗೆ, ಅದರ ಘನತೆ-ಗೌರವಗಳಿಗೆ ಧಕ್ಕೆ ಬಂದಾಗ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಆದರೆ ಬಂದಂತಹ ವಿಷಯವನ್ನು ಇಂದು ಬೆಳಿಗ್ಗೆ ಕೆಳಮನೆಯಲ್ಲಿ ನಡೆದ ಚರ್ಚೆಯನ್ನು ನಾನು ಗಮನಿಸಿದ್ದೇನೆ. ಅಲ್ಲಿರುವಂತಹ ಸಭಾಧ್ಯಕ್ಷರ ಬಗ್ಗೆ ಒಂದು ಉಲ್ಲೇಖ ಚರ್ಚೆಯಾಗಿದೆ, ಅದು ಬೇರೆ ಕಡೆ ಹೋಗುವುದಕ್ಕೆ ಮಾನ್ಯ ಸಭಾಧ್ಯಕ್ಷರು ಬಿಟ್ಟುಕೊಡಲಿಲ್ಲ. ಅಲ್ಲಿರುವಂತಹ ಆಡಳಿತ ಪಕ್ಷದ ಶ್ರೀ ಕೃಷ್ಣ ಭೈರೇಗೌಡರು ಮಾತನಾಡುವಾಗ ಯಾವುದೇ ಹೆಸರನ್ನು ಉಲ್ಲೇಖ ಮಾಡದೇ ಒಂದು ಚೌಕಟ್ಟಿನಲ್ಲಿ ಪ್ರಸ್ತಾಪವಾಯಿತು. ಅಲ್ಲಿ ಸ್ವತಃ ಸಭಾಧ್ಯಕ್ಷರು ಮೂವ್ ಮಾಡಿದರು. ನನ್ನ ಪೀಠದ ಬಗ್ಗೆ ಇಂತಹ ಒಂದು ಮಾತು ಬಂದಿದೆ, ಪೀಠ ಸಂಶಯಕ್ಕೊಳಗಾಗಿದೆ ಎನ್ನುವಂತಹ ವಿಷಯವನ್ನು ಮಂಡನೆ ಮಾಡಿದ್ದಾರೆ ಮಾನ್ಯ ಸಭಾಧ್ಯಕ್ಷರು. ಅದಾದ ಮೇಲೆ ಅಭಿಪ್ರಾಯಗಳನ್ನು ಸರ್ಕಾರ, ಸದಸ್ಯರು ಮತ್ತು ಎಲ್ಲರೂ ಮಾಡಿದ್ದಾರೆ. ಅಲ್ಲಿ ಸಭಾಧ್ಯಕ್ಷರು ಮಾಡಿದ ವಿಷಯವನ್ನು ಇಲ್ಲಿ ಯಾರು ಪ್ರಸ್ತಾವ ಮಾಡುತ್ತಾರೆ? ಅಲ್ಲಿ ಸಭಾಧ್ಯಕ್ಷರ ಮೇಲೆ ಬಂದಿರುವಂತಹ ಆಪಾದನೆ ವಿಷಯ ಮಾಡಿದಂತಹವರು ಶಾಸಕರಾಗಿದ್ದಾರೆ, ಇನ್ನಾರೋ ಆಗಿದ್ದಾರೆ. ಆ ಕಾರಣಕ್ಕಾಗಿ ಆ ಸದನಕ್ಕೆ ಸಂಬಂಧಪಟ್ಟವರು ಅಲ್ಲಿ ಪ್ರಸ್ತಾವವನ್ನು ಮಾಡಿದ್ದಾರೆ. ಅಲ್ಲಿ confined discussion ಆಗಿರುವಂತಹದ್ದು. S.I.T. (Special Investigation Team) ಯಲ್ಲಿ ಕೂಡ ಮಾಡುವುದಕ್ಕೆ ತೀರ್ಮಾನವನ್ನು ಮಾನ್ಯ ಸಭಾಧ್ಯಕ್ಷರು ಆದೇಶ ಮಾಡಿದ್ದಾರೆ. Point of reference ಏನಾಗಿದೆ ಎನ್ನುವಂತಹ ಬಾಕಿ ವಿಚಾರಗಳೆಲ್ಲಾ ನನಗೆ ಗೊತ್ತಿಲ್ಲ. ಆದರೆ ಕೆಳಮನೆಗೆ ಸಂಬಂಧಪಟ್ಟ ನೇರ ವಿಷಯ ಅಲ್ಲಿ ಕುಳಿತಿರುವಂತಹ ಗೌರವಾನ್ವಿತ ಪೀಠದ ಸಭಾಧ್ಯಕ್ಷರು ತಮ್ಮ ಸ್ಥಾನದ ಪ್ರಶ್ನೆಯನ್ನು ಎತ್ತಿಕೊಂಡಿದ್ದಾರೆ, ಇಲ್ಲಿ ಯಾರು ಎತ್ತಿಕೊಳ್ಳಬೇಕು? ಅಕಸ್ಮಾತ್ ನಮ್ಮ ಸದಸ್ಯರು ವಾದಕ್ಕಾಗಿ, it is not my allegation. ಇದನ್ನು ಆಪಾದನೆಯಾಗಿ ಪರಿಗಣಿಸಬಾರದು.

ಮಾನ್ಯ ಸಭಾಪತಿಯವರೇ, ಯಾರೋ ಒಬ್ಬ ಸದಸ್ಯರು ಯಾರೋ ಹಣದ ವ್ಯವಹಾರವನ್ನು ಮಾಡುವುದಕ್ಕೆ ಹೋಗಿದ್ದಾರೆ, ಅಂತಹವರು ಇಂತಹವರಿಗೆ ಹಣ ಕೊಡಬೇಕೆಂಬ ಬಗ್ಗೆ ಪ್ರಸ್ತಾವ ಬಂದಿದೆ ಎಂದು ಹೇಳಿದಂತಹ ಸಂದರ್ಭದಲ್ಲಿ ಆ ಆಪಾದನೆಗೆ double edge ಇದೆ. ಹೆಸರು ಹೇಳಿದವರನ್ನು ಇಟ್ಟುಕೊಂಡು ಸಭಾಧ್ಯಕ್ಷರ ಬಗ್ಗೆ ಸಂಶಯ ಬಂದಿದೆ, ಅವರು ರಾಜೀನಾಮೆ ಕೊಡಬೇಕೆಂದು ಇಲ್ಲಿ ಯಾರಾದರೂ ಮಾತನಾಡಿದರೆ, whether is it

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

valid? ಈ ಸದನದಲ್ಲಿ ಮಾತನಾಡಬಹುದೇ? ತಾವು ಚರ್ಚೆಗೆ ಕೊಟ್ಟರೆ ಇನ್ನೊಂದು ಸದನದ ಪೀಠದ ಅಧ್ಯಕ್ಷರ ಪ್ರಸ್ತಾಪ ಇಲ್ಲಿ ಆಗಿಯೇ ಆಗುತ್ತದೆ. ಒಮ್ಮೆ ಅದು ಕಾನೂನುಬದ್ಧವಾಗಿ ನಿಯಮಾವಳಿಯೊಳಗೆ ಇದೆ ಎಂದಾದರೆ ಚರ್ಚೆಯನ್ನು ಒಮ್ಮೆ ಪ್ರಾರಂಭ ಮಾಡಿದ ಮೇಲೆ ನನ್ನಂತಹ ಯಾರಾದರೂ ಸದಸ್ಯರು ಕೆಳಮನೆಯಲ್ಲಿಯೇ ಇರಬಹುದು; ಸಭಾಧ್ಯಕ್ಷರ ಮೇಲೆ ಇಂತಹ ಆಪಾದನೆ, ಸಂಶಯ ಬಂದಿದೆ, ತಾವು ತುಂಬಾ ಒಳ್ಳೆಯವರು, ಅದು ಸಾಬೀತಾಗುವವರೆಗೆ ತಾವು ದಯಮಾಡಿ ಆ ಸ್ಥಾನದಲ್ಲಿ ಕೂರಬಾರದು ಎಂದು ಅವರಿಗೆ ನಿರ್ದೇಶನ ಕೊಡಿ ಎಂದು ಈ ಸದನದಲ್ಲಿ ನಾವು ನಿಮಗೆ ಕೇಳುವುದಕ್ಕೆ ಸಾಧ್ಯವಿದೆಯೇ? ಆದ್ದರಿಂದ ಈ ಸದನದಲ್ಲಿ ಚರ್ಚೆ ಪ್ರಾರಂಭವಾಗುವುದಕ್ಕೆ ಮುಂಚೆಯೇ ನಿಯಮ 342ರಡಿ ಕೊಟ್ಟರೆ ಇದರ ವ್ಯಾಪ್ತಿ ಹೇಗೆ ವಿಶಾಲವಾಗಿದೆಯೋ ಆ ನಿಯಮಾವಳಿಗೆ ಚರ್ಚೆ ಕೂಡ ನಿಯಮ ಮೀರಿ ಹೋಗಬಹುದು, ಅನಗತ್ಯವಾದಂತಹ ಕೆಟ್ಟ ಸಂಪ್ರದಾಯವನ್ನು, ತಪ್ಪು ಸಂದೇಶಗಳನ್ನು ಕೊಡಬಾರದು. ಆ ಸದನದಲ್ಲಿ ಚರ್ಚೆಯಾಗಿದೆ, ಅಲ್ಲಿಂದ ಸಾಕಷ್ಟು ಉತ್ತರಗಳನ್ನು ಮಾನ್ಯ ಮುಖ್ಯಮಂತ್ರಿಯವರು, ಸದಸ್ಯರು ಎಲ್ಲರೂ ಕೊಟ್ಟಿದ್ದಾರೆ. ಎಲ್ಲಿಯೋ ಒಂದು ಕಡೆ ಆ ಸ್ಥಾನದ ಗೌರವವನ್ನು, ಸತ್ಸಂಪ್ರದಾಯವನ್ನು ಗಮನದಲ್ಲಿಟ್ಟುಕೊಂಡು ವ್ಯಕ್ತಿ ಯಾರು ಎಂಬುದು ಪ್ರಶ್ನೆಯಲ್ಲ, ಇಲ್ಲಿ ಅದನ್ನು ಮಾಡುವುದಕ್ಕೆ . . .

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇವರು ಸದನವನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಇರಲಿ, ಇರಲಿ . . .

**Sri IVAN D'SOUZA** :- Hon'ble Member is misleading the House.

(ಗೊಂದಲ)

(21) 11–02–2019/4–00/ಕೆಹೆಚ್–ಕೆವಿಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಯಾವ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಅನುಮತಿ ಕೊಡುತ್ತಾರೆಂಬುದನ್ನು ತಿಳಿಸಿ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಬೆಳಿಗ್ಗೆಯಿಂದ ಅಧ್ಯಕ್ಷರ ಬಗ್ಗೆ ಚರ್ಚೆ ನಡೆಯುತ್ತಿದೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಸದನವನ್ನು ತಪ್ಪು ದಾರಿಗೆ ಎಳೆಯುವುದು ಬೇಡ.

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಐವನ್ ಡಿ'ಸೋಜಾರವರೇ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯನ್ನು ತೆಗೆದುಕೊಂಡು ಚರ್ಚೆ ಪ್ರಾರಂಭ ಮಾಡುವುದಕ್ಕೆ ತಾವು ಮತ್ತು ಸದನ ಒಪ್ಪುತ್ತದೆಯೇ ಎಂಬುದು ನಮ್ಮ ಪ್ರಶ್ನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಂತಿಮವಾಗಿ ಅದು ತಮ್ಮ ವಿವೇಚನೆಗೆ ಬಿಟ್ಟಿರುವ ವಿಚಾರ. ಒಮ್ಮೆ ತಾವು ಚರ್ಚೆಗೆ ಅವಕಾಶ ಕೊಟ್ಟರೆ ಅದಕ್ಕೆ ಎಲ್ಲೆಯೇ ಇಲ್ಲ. ಆಡಳಿತ ಪಕ್ಷದ ಸದಸ್ಯರು ಮಾಡುವ ಆಪಾದನೆಗೆ ವಿರೋಧ ಪಕ್ಷದವರು ಕೌಂಟರ್ ಮಾಡುತ್ತಾರೆ. ಹಾಗೆಯೇ ವಿರೋಧ ಪಕ್ಷದವರು ಮಾಡುವ ಆಪಾದನೆಗೆ ಆಡಳಿತ ಪಕ್ಷದವರು ಕೌಂಟರ್ ಮಾಡುತ್ತಾರೆ. ಇದನ್ನು ಮಾಡಲೇಬೇಕಾಗುತ್ತದೆ. ಅದು ಆಯಾಯ ಸ್ಥಾನದ ಕೆಲಸವಾಗಿದೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸದಸ್ಯರೇ, ತಾವು ಪ್ರತಿಕ್ರಿಯಿಸಲೇ ಬೇಕಾಗುತ್ತದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಆಪಾದನೆ ಮಾಡಿದಾಗ ಆಡಳಿತ ಪಕ್ಷದವರು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾರೆ. ಅದು ಆಡಳಿತ ಪಕ್ಷದವರ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ ಎರಡು ಹಲಗಿನ ಕತ್ತಿ ಇದು. ಈ ಸದನದಲ್ಲಿ ಹಲವು ಸತ್ಸಂಪ್ರದಾಯಗಳಿವೆ. ಕೆಳಮನೆಯ ಬಗ್ಗೆ ಇಲ್ಲಿ ಚರ್ಚೆ ಮಾಡಬಾರದು ಎನ್ನುವುದಕ್ಕೆ ಬಹಳಷ್ಟು rulings ಗಳಿವೆ. ಆದ್ದರಿಂದ ಆ ನಿಯಮಾವಳಿ ಅಡಿಯಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಮತ್ತು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬಾರದೆಂದು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಆಯನೂರು ಮಂಜುನಾಥ್‌ರವರು ಹೇಳಿರುವಂತಹ ವಿಚಾರದ ಬಗ್ಗೆ cognizance ತೆಗೆದುಕೊಂಡು ತಾವೇ ಸ್ವತ: ಮಾಡಬಹುದೇ ಅಥವಾ ಯಾರಾದರೂ ನೋಟಿಸ್‌ನ್ನು ಕೊಟ್ಟಿದ್ದಾರೆಯೇ, ಏನಾದರೂ ನೋಟಿಸ್‌ನ್ನು ಕೊಟ್ಟರೆ ಮಾಡಬಹುದೇ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ದಯಮಾಡಿ ಮಾನ್ಯ ಹಿರಿಯ ಸದಸ್ಯರು ಒಂದು ವಿಚಾರದ ಬಗ್ಗೆ ಗಮನವನ್ನು ಕೊಡಬೇಕು. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಗೊತ್ತಿದೆಯೋ, ಇಲ್ಲವೋ ಗೊತ್ತಿಲ್ಲ. ಕೆಳಮನೆಯಲ್ಲಿ ದೂರು ಕೊಟ್ಟಿರುವುದೇನೆಂದರೆ, ಈ ರೀತಿಯ ಒಂದು ವಿಷಯ ಬಂದಿದ್ದು, ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದು ಮಾನ್ಯ ಮುಖ್ಯಮಂತ್ರಿಯವರು ಸಭಾಧ್ಯಕ್ಷರಿಗೆ ಪತ್ರವನ್ನು ಕೊಟ್ಟಿದ್ದಾರೆ. Based on that letter, ಇವತ್ತಿನ ದಿವಸ ಅವರು cognizance ತೆಗೆದುಕೊಂಡು, ಈ ವಿಚಾರದ ಬಗ್ಗೆ ಕಾಳಜಿಯನ್ನು ತೆಗೆದುಕೊಂಡು ಚರ್ಚೆ

ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಹಾಗಾಗಿ ಇವತ್ತಿನ ದಿವಸ ನಿಯಮ 342 ರಡಿಯಲ್ಲಿ ಮಾನ್ಯ ಸದಸ್ಯರೆಲ್ಲರೂ ಸಹಿ ಮಾಡಿ ಮನವಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸ್ಪಷ್ಟನೆಯನ್ನು ನೀಡಿದ್ದೇನೆ. ಹಾಗಾಗಿ ಇದು ತಮ್ಮ ವಿವೇಚನೆಗೆ ಬಿಟ್ಟಿರುವ ವಿಚಾರವಾಗಿದೆ. ಇನ್ನೊಂದು ವಿಚಾರವೇನೆಂದರೆ, ಈಗಾಗಲೇ ಕೆಳಮನೆಯಲ್ಲಿ ಎಲ್ಲಾ ವಿಚಾರಗಳ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಿದೆ. ಚರ್ಚೆಯಾದ ನಂತರ SIT (Special Investigation Team) ಗೆ ಕೊಡಬೇಕೆಂಬ ವಿಚಾರದಲ್ಲಿ ಸಭಾಧ್ಯಕ್ಷರು ಸೂಚನೆಯನ್ನು ನೀಡಿದ್ದಾರೆ. ಹಾಗಾಗಿ ಮಾನ್ಯ ಸದಸ್ಯರಿಗೆ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳುವ ವಿಚಾರ ಒಂದು ಕಡೆಯಾದರೆ, ಇನ್ನೊಂದು ಕಡೆ ಈಗಾಗಲೇ ಈ ವಿಚಾರ ಚರ್ಚೆಯಾಗಿ SIT ಗೆ ಕೊಡಬೇಕೆಂದು ಸಭಾಧ್ಯಕ್ಷರು ಮಾನ್ಯ ಮುಖ್ಯಮಂತ್ರಿಯವರಿಗೆ ಸೂಚನೆಯನ್ನು ನೀಡಿದ್ದಾರೆ. ಹಾಗಾಗಿ ಇದಕ್ಕೆ ಮಾನ್ಯ ಸದಸ್ಯರುಗಳ ಸಹಮತಿ ಇದೆ ಎನ್ನುವ ವಿಚಾರವನ್ನು ರೆಕಾರ್ಡ್ ಮಾಡಿ, ಮುಕ್ತಾಯ ಮಾಡುವಂತಹ ಅವಕಾಶ ಕೂಡ ತಮಗೆ ಇದೆ. ದಯಮಾಡಿ, ತಾವು ಆ ರೀತಿ ಮಾಡಬೇಕೆಂದು ಕೇಳುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ***'Procedure regarding allegation against a person'*** *ಬಗ್ಗೆ* ***'RULES OF PROCEDURE AND CONDUCT OF BUSINESS IN THE KARNATAKA LEGISLATIVE COUNCIL'*** ನ ನಿಯಮ 307 ನ್ನು ಉಲ್ಲೇಖ ಮಾಡಿದ್ದಾರೆ.

*The second para of 'Rule: 307' reads as follows;*

> *"….Provided that the Chairman, may, at any time, prohibit any member from making any such allegation, if he is of opinion that such allegation is derogatory to the dignity of the Council or that no public interest is served by making such allegation."*

ಮಾನ್ಯ ಸಭಾಪತಿಯವರೇ, *Public interest is paramount in our minds.* ಇದರಲ್ಲಿ *Public interest* ಏಕೆ ಇದೆಯೆಂದರೆ, ಇವತ್ತಿನ ದಿವಸ ಇಡೀ ರಾಜ್ಯ ಮತ್ತು ದೇಶದಲ್ಲಿ ಚರ್ಚೆಗೆ ಒಳಗಾಗಿದ್ದೇವೆ. ನಾವೆಲ್ಲಾ ಶಾಸಕರುಗಳು ಮತ್ತು ಪ್ರತಿನಿಧಿಗಳು ತಲೆಬಾಗುವಂತಹ ಸ್ಥಿತಿಯಲ್ಲಿದ್ದೇವೆ. ಇವತ್ತಿನ ದಿವಸ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಕ್ಕೆ ಅಗೌರವ ಬಂದಿದ್ದು, ಇವತ್ತಿನ ದಿವಸ ಇದರ ಬಗ್ಗೆ ಚರ್ಚೆ ಏಕೆ ಮಾಡಬೇಕೆಂದರೆ, *it is a matter of public importance. Why it is a matter of public importance?... we are losing our dignity.* ಇದರಲ್ಲಿ ನಮ್ಮ ಮರ್ಯಾದೆ ಹಾಳಾಗುತ್ತಿದೆ. ನಾವು ಪ್ರತಿನಿಧಿಗಳಾಗಿದ್ದು, ಜನಸೇವೆಯನ್ನು ಮಾಡುವುದಕ್ಕೆ ಬಂದಿದ್ದೇವೆ. ಆದರೆ ಇವತ್ತಿನ ದಿವಸ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಮೇಲೆ ಆಪಾದನೆ ಬರುತ್ತಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂಬುದು ನನ್ನ ಮೊದಲನೆಯ ವಿನಂತಿಯಾಗಿದೆ. ಇನ್ನೊಂದು ವಿಚಾರವೇನೆಂದರೆ, ನಿಯಮ 342 ರಡಿ ತಮ್ಮ ಹತ್ತಿರ *'Residuary Powers'* ಇದೆ. ಕೆಳಮನೆಯಲ್ಲಿರುವ ಸದಸ್ಯರು ಮಾಡಿರುವ ಚರ್ಚೆಯ ಬಗ್ಗೆ ನಾವು ಪ್ರಸ್ತಾಪ ಮಾಡುತ್ತಿಲ್ಲ. ನಮ್ಮ ಸದನ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಕ್ಕೆ ಅಗೌರವ ಬಂದಿದ್ದು, ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕಾಗಿದೆ. ಇವತ್ತಿನ ದಿವಸ ಇದರ ಬಗ್ಗೆ ಅಂತಿಮ ನಿರ್ಣಯವಾಗಬೇಕಾಗಿದೆ. ಇವತ್ತಿನ ದಿವಸ ಇದರ ಬಗ್ಗೆ ಕೆಳಮನೆಯಲ್ಲಿ ನಿರ್ಣಯವನ್ನು ತೆಗೆದುಕೊಂಡಿರಬಹುದು. ಉತ್ತರವನ್ನು ಸರ್ಕಾರ ಕೊಡುತ್ತದೆ. ಸರ್ಕಾರ ಏನು ನಿರ್ಣಯವನ್ನು ತೆಗೆದುಕೊಂಡಿದೆ, ಅದರ ಬಗ್ಗೆ ಉತ್ತರವನ್ನು ಕೊಡುತ್ತದೆ. ಆದರೆ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಸದಸ್ಯರುಗಳಿಗೆ ಅವಕಾಶ ಮಾಡಿಕೊಡಬೇಕು. ತಾವು ಸಮಯವನ್ನು ಕೊಟ್ಟಾಗ ಅದಕ್ಕೆ ಸಹಿಯನ್ನು ಹಾಕಿದ್ದೇವೆ. ತಾವು ಆ ಸಮಯದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಏಕೆ ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಬಗ್ಗೆ ಹಲವಾರು ಪ್ರಕರಣಗಳನ್ನು ಉಲ್ಲೇಖಿಸಿದ್ದೇನೆ ಹಾಗೂ ಸಂವಿಧಾನ ಮತ್ತು *Practice and Procedure of Parliament by Kaul and Shakdher* ನ ಪ್ರಕಾರ ಉಲ್ಲೇಖ ಮಾಡಿ ಮಾತನಾಡುತ್ತಿದ್ದೇನೆ. ಇದರ ಬಗ್ಗೆ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾನು ಪಕ್ಷಾತೀತವಾಗಿ ಹೇಳುತ್ತೇನೆ. ಇದು ನಮ್ಮ ಎಲ್ಲಾ ಮಾನ್ಯ ಸದಸ್ಯರುಗಳ ಗೌರವದ ಪ್ರಶ್ನೆಯಾಗಿದ್ದು, ನಾವು ರಾಜ್ಯದ ಜನರಿಗೆ ಸೇವೆ ಮಾಡುವುದಕ್ಕೆ ಸಮಾಜ ಸೇವಕರಾಗಿ ಈ ಸದನಕ್ಕೆ ಬಂದಿದ್ದೇವೆ. ನಾವೆಲ್ಲಾ ಈ ರಾಜ್ಯಕ್ಕೆ ಒಳ್ಳೆಯದಾಗುವ ಕೆಲಸವನ್ನು ಮಾಡಬೇಕು. ಆದರೆ ಇದು ನಮಗೆ ಅಗೌರವವನ್ನು ಉಂಟು ಮಾಡುತ್ತಿದೆ. ನಾವು 50 ಕೋಟಿ ರೂಪಾಯಿಗಳ ಹಣವನ್ನು ತೆಗೆದುಕೊಂಡಿದ್ದೇವೆ ಮತ್ತು ಕೊಟ್ಟಿದ್ದೇವೆ ಎಂಬ ಬಗ್ಗೆ ಆಪಾದನೆ ಬರುತ್ತಿದೆ. Supreme Court Judges ಮೇಲೆ ಮತ್ತು ಸಭಾಧ್ಯಕ್ಷರ ಮೇಲೆ ದುಡ್ಡು ಕೊಡುತ್ತಿದ್ದೇವೆಂದು ಆಪಾದನೆ ಬರುತ್ತಿದೆ. ನಾವು ಇದರ ಬಗ್ಗೆ ಚರ್ಚೆ ಮಾಡಬೇಕು ಮತ್ತು ಇದು ನಮ್ಮ ಮರ್ಯಾದೆ ಪ್ರಶ್ನೆ ಎಂದು ಭಾವಿಸುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಅಲ್ಲಂ ವೀರಭದ್ರಪ್ಪರವರೇ ತಾವು ಮಾತನಾಡಿ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಿಯಮ 342 ರ ಪ್ರಕಾರ ನಾನು ಮಾತನಾಡಿದ್ದೇನೆ. ಬೇರೆ ಚರ್ಚೆಯ ಬಗ್ಗೆ ಮಾತನಾಡಿಲ್ಲ. ನಿಯಮಾವಳಿ ರೀತಿಯಲ್ಲಿ ಚರ್ಚೆ ನಡೆಯುತ್ತಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸದಸ್ಯರೇ, ನಾನು ನಿಯಮಾವಳಿ ಬಗ್ಗೆ ಅಷ್ಟೇ ಮಾತನಾಡಿರುತ್ತೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅದರಲ್ಲಿ ಸರ್ವೋಚ್ಚ ನ್ಯಾಯಾಲಯದ ಜಡ್ಜ್‌ಗಳ ಬಗ್ಗೆ ಏನು ಇಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, but he has gone beyond that.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಹಿರಿಯ ಶಾಸಕರಾದಂತಹ ಮಾನ್ಯ ಆಯನೂರು ಮಂಜುನಾಥ್‌ರವರು ಇಲ್ಲಿ ಸಭಾಧ್ಯಕ್ಷರಿಗೆ ಸಂಬಂಧಪಟ್ಟ ವಿಷಯವಾಗಿದ್ದು, ಇದಕ್ಕೆ ಸಭಾಧ್ಯಕ್ಷರೇ ಅನುಮತಿಯನ್ನು ಕೊಟ್ಟಿದ್ದು, ಶಾಸಕರು ಮಾತನಾಡಿದ್ದಾರೆ. ಆದರೆ ಇಲ್ಲಿ ಯಾರು ಮಾಡಿದ್ದಾರೆ ಮತ್ತು ಯಾವ ವಿಷಯದ ಮೇಲೆ ಮಾತನಾಡುತ್ತಾರೆ ಎಂಬ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ನಮ್ಮ ಗೌಡರು ಹೇಳಿದ ಹಾಗೆ ಕೆಳಮನೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. Final decision ಅನ್ನು ತೆಗೆದುಕೊಂಡಿದ್ದಾರೆ. SIT ಕೊಡಬಹುದೆಂದು ಆ ನಡವಳಿಯಲ್ಲಿ ಇದೆ ಎಂದು ಹೇಳಿದರು. ಇವತ್ತಿನ ದಿವಸ ಈ ಮನೆಯಲ್ಲಿ ಇದರ ಬಗ್ಗೆ ಮಾತನಾಡಬೇಕೋ, ಬೇಡವೋ ಎನ್ನುವ ಬಗ್ಗೆ ಚರ್ಚೆ ನಡೆಯುತ್ತಿದೆ. Whether it is under Rule 342 or 307, ಇವತ್ತಿನ ದಿವಸ ಮಾತನಾಡಬೇಕೋ, ಬೇಡವೋ ಎನ್ನುವ ಬಗ್ಗೆ ಪ್ರಶ್ನೆಯಲ್ಲ. ಇವತ್ತಿನ ದಿವಸ ಇಡೀ ರಾಜ್ಯ ಮತ್ತು ದೇಶದಲ್ಲಿರುವ ಜನರು ಈ ಸದನದಲ್ಲಿ ನಡೆಯುವ ಚರ್ಚೆಗಳನ್ನು ನೋಡುತ್ತಿದ್ದಾರೆ. ಇವತ್ತಿನ ದಿವಸ ವಿಧಾನಸಭೆಯಲ್ಲಿ ಇದರ ಬಗ್ಗೆ ಎಲ್ಲಾ ಶಾಸಕರುಗಳು ಮಾತನಾಡಿದ್ದಾರೆ. ನಾಳೆ ಬೆಳಿಗ್ಗೆಯಾದರೆ ಪ್ರಜೆಗಳು ಏನಪ್ಪಾ, ಇದರ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡಿದರು, ವಿಧಾನ ಪರಿಷತ್ತಿನಲ್ಲಿ ಏನೂ ಚರ್ಚೆಯೇ ಮಾಡಲಿಲ್ಲ. ಇದಕ್ಕೆ ಗೌರವವೇ ಇಲ್ಲವೇ ಎನ್ನುವ ಪ್ರಶ್ನೆಯನ್ನು ಕೇಳುತ್ತಾರೆ. ಇಂತಹ ಗಂಭೀರವಾದ ಘಟನೆ ನಡೆದಾಗ ವಿಧಾನ ಪರಿಷತ್ತಿನಲ್ಲಿ ಮಾನ್ಯ ಸದಸ್ಯರುಗಳಿಗೆ ಇದರ ಬಗ್ಗೆ ಮಾತನಾಡುವ ಆಸಕ್ತಿಯೇ ಇಲ್ಲವೇ ಎಂದು ಕೇಳುತ್ತಾರೆ. ಇದರ ಬಗ್ಗೆ ಮಾತನಾಡದೇ ಇದ್ದರೆ, ಇವರೇನಾದರೂ ಇದರ ಜೊತೆಗೆ ಶಾಮೀಲಾಗಿದ್ದಾರೆಯೇ ಎಂಬ ಬಗ್ಗೆ ಪ್ರಶ್ನೆ ಕೂಡ ಬರುತ್ತದೆ. ಇವತ್ತಿನ ದಿವಸ ಇದು ವಿಧಾನ ಪರಿಷತ್ತಿನ ಪ್ರಶ್ನೆಯಲ್ಲ, ವಿಧಾನ ಮಂಡಲದ ಗೌರವವಾಗಿದ್ದು, ಎಲ್ಲಾ ಸಮಯದಲ್ಲೂ ಎಲ್ಲಾ ವಿಷಯದ ಬಗ್ಗೆ ಸದನವು ಈ ಗೌರವವನ್ನು ಎತ್ತಿ ಹಿಡಿದಿದೆ. ಇವತ್ತಿನ ದಿವಸ ಇಂತಹ ಗಂಭೀರವಾದ ಘಟನೆ ನಡೆದಿರುವುದರಿಂದ, ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಆಯನೂರು ಮಂಜುನಾಥ್‌ರವರು, ಮಾನ್ಯ ಪ್ರಕಾಶ್ ರಾಥೋಡ್‌ರವರು ಮತ್ತು ಮಾನ್ಯ ಅಲ್ಲಂ ವೀರಭದ್ರಪ್ಪನವರು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗ ತಮ್ಮ ಮುಂದೆ ಇರುವಂತಹ ವಿಷಯ ಯಾವ ನಿಯಮಾವಳಿಯ ಪ್ರಕಾರ ಇದಕ್ಕೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬಹುದು ಎನ್ನುವುದು. ನಾನು ಸ್ವಲ್ಪ ನಿಯಮಾವಳಿಯನ್ನು ಬಿಟ್ಟು ಮಾತನಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಇವತ್ತಿನ ದಿವಸ ರಾಜ್ಯದಲ್ಲಿ ಇಂತಹ ಒಂದು ಘಟನೆ ನಡೆದಿದೆ. ಸಂಸತ್‌ನಲ್ಲೂ ಸಹ ನೋಡಿದ್ದೇವೆ, ಮಾನ್ಯ ಸೋಮನಾಥ್ ಚಟರ್ಜಿಯವರು ಲೋಕಸಭೆಯ ಸಭಾಧ್ಯಕ್ಷರಾಗಿದ್ದಾಗ ಕೆಲವು 11 ಜನ M.P. (Member of Parliament) ಗಳು ಸದನದಲ್ಲಿ ಪ್ರಶ್ನೆ ಕೇಳುವ ಸಲುವಾಗಿ ಹೊರಗಡೆ ದುಡ್ಡು ತೆಗೆದುಕೊಂಡು ಪ್ರಶ್ನೆಯನ್ನು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೇಳುತ್ತಿದ್ದರು ಎನ್ನುವ ಘಟನೆಯಾಗಿದೆ. ಆಗ ಆ 11 ಜನ M.P. ಗಳನ್ನು ಮಾನ್ಯ ಸೋಮನಾಥ್ ಚಟರ್ಜಿಯವರು expulsion ಮಾಡಿದ್ದರು.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸದಸ್ಯರೇ, ತಮಗೆ ಇದು ಮಾತ್ರ ನೆನಪಿದೆಯೇ? ತಮಗೆ ಜೆ.ಎಂ.ಎಂ.ನ ಘಟನೆಯ ನೆನಪಿಲ್ಲವೇ?

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಆಯನೂರು ಮಂಜುನಾಥ್‌ರವರಿಗೆ ನೆನಪಿರಲಿ, ಅದರಲ್ಲಿ ಸುಮಾರು ಬಿ.ಜೆ.ಪಿ ಪಕ್ಷದಿಂದ 6 ಜನ ಸದಸ್ಯರು ಎಂ.ಪಿ.ಯಾಗಿದ್ದರು. BSP (Bahujan Samaj Party) ಯಿಂದ 3 ಜನ ಸದಸ್ಯರು M.P.,ಯಾಗಿದ್ದರು. ಹಾಗಾಗಿ ನಾವು ಇವತ್ತಿನ ದಿವಸ . . .

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ರಘುನಾಥ ರಾವ್ ಮಲ್ಕಾಪೂರೆರವರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ನಾವು ಕೂಡ ನೂರಾರು ವಿಷಯಗಳ ಬಗ್ಗೆ ಹೇಳುತ್ತೇವೆ. ಅವರು ಮಾತನಾಡಲಿ, ಮಧ್ಯ ಬಾಯಿ ಹಾಕಬೇಡಿ.

**ಶ್ರೀ ಎನ್. ರವಿಕುಮಾರ್:–** ವಾಜಪೇಯಿ ಸರ್ಕಾರವನ್ನು ಬೀಳಿಸಿರುವುದು ಇವರಿಗೆ ನೆನಪಾಗುವುದಿಲ್ಲವೇ?

**(22) 11/02/2019/4:10/ಎಸ್‌ಪಿಆರ್/ಕೆಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಸೀರ್ ಅಹ್ಮದ್:–** ವಿಧಾನಸಭೆಯಲ್ಲಿ ಇದರ ಬಗ್ಗೆ ಇವತ್ತಿನ ದಿವಸ ಚರ್ಚೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿಯಮಾವಳಿಗೆ ತಕ್ಕಂತೆ ಮಾತ್ರವೇ ಮಾತನಾಡಲಿ.

**ಶ್ರೀ ಹೆಚ್.ಎಂ.ರೇವಣ್ಣ:–** ಪ್ರಶ್ನೆಯನ್ನು ಕೇಳುವುದಕ್ಕಾಗಿ ಮಾನ್ಯ ಸದಸ್ಯರುಗಳು ಹಣದ ಬೇಡಿಕೆಯನ್ನಿಟ್ಟಿದ್ದರು ಎಂಬುದಾಗಿ ಮಾತ್ರವೇ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಬೇರೆ ಇನ್ನೇನೂ ಇಲ್ಲ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಲ್ಲಿ ಇವತ್ತಿನ ದಿವಸ ಚರ್ಚೆಯಾಗಿದೆ. ಅದು ವಿಧಾನಸಭಾ ಅಧ್ಯಕ್ಷರ ಬಗ್ಗೆಯೂ ಸಹ ಆಗಿರಬಹುದು. ಆದರೆ ನಾಳೆಯ ದಿನ ನಿಮ್ಮ ಬಗ್ಗೆಯೂ ಸಹ ಚರ್ಚೆಯಾಗುವುದಿಲ್ಲ, ಆ ರೀತಿಯ ಆತಂಕ ವಾತಾವರಣ ಸೃಷ್ಟಿಯಾಗುವುದಿಲ್ಲವೆಂಬ ಯಾವ ಖಾತ್ರಿ ಇದೆ?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಘಟನೆ ನಡೆಯುವ ಮುನ್ನವೇ ಅದನ್ನು anticipate ಮಾಡುವುದು.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ನಾಳೆಯ ದಿನ ನಿಮ್ಮ ಬಗ್ಗೆಯೂ ಸಹ ಆಪಾದನೆ ಬರಬಹುದೆಂಬ ಘಟನೆಯನ್ನು ನಿರೀಕ್ಷೆ ಮಾಡಿ ಇವತ್ತಿನ ದಿವಸ ಚರ್ಚೆಗೆ ಅವಕಾಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ॥ ತೇಜಸ್ವಿನಿ ಗೌಡ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ***'VOLUME-II'*** OF ***'RULINGS AND OBSERVATIONS OF THE CHAIR (1956-1976)'*** OF ***'KARNATAKA LEGISLATIVE COUNCIL'*** *with respect to* ***'Allegation'*** *reads as follows;*

> ***"....The allegation made by the members are generally against three categories of individuals. The first is against Members of this House and Ministers who are entitled to participate in the proceedings of this House. The second is against public servants and the third is against members of the public. I will deal with each of these separately.***
>
> ***Rule 261 can be invoked only if allegations are made against persons who are not members of this House...." [Page-10]***
>
> ***"...I have said many times it is wrong and it is not fair that any Member of this House should refer to names of individuals who are not present in the House and who have no opportunity,..." [Page-11]***

ಸಮಯವನ್ನು ಉಳಿಸುವ ದೃಷ್ಟಿಯಿಂದ ನಾನು ನೇರವಾಗಿ ವಿಷಯವನ್ನು ಪ್ರಸ್ತಾಪಿಸುತ್ತೇನೆ. ಯಾವ ವ್ಯಕ್ತಿಗಳ ಮೇಲೆ ಚರ್ಚೆ ಆಗುತ್ತದೆಯೋ ಅವರಿಗೆ ಈ ಸದನದಲ್ಲಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಅವಕಾಶ ಇಲ್ಲ ಎಂಬುದನ್ನು ಇಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಲಾಗಿದೆ. ಇದನ್ನು prevent ಮಾಡುತ್ತದೆ. ಇಲ್ಲಿ ವಿಧಾನ ಮಂಡಲದ ವಿಷಯವು ಪ್ರಸ್ತಾಪವಾಗಿದ್ದು, ಎರಡೂ ಸದನಗಳ ಘನತೆ ಮತ್ತು ಗೌರವದ ಬಗ್ಗೆ ಎಲ್ಲಾ ಸದಸ್ಯರು ಬಹಳ ಕಳಕಳಿಯಿಂದ ಮಾತನಾಡಿದ್ದಾರೆ. ನಾವು ಚರ್ಚೆಯನ್ನು ಬಯಸುವ ವಿಷಯದಲ್ಲಿ ಸಂವಿಧಾನದ ಅತೀ ಎತ್ತರದ ಮೂರು ಸ್ಥಾನಗಳು ಇದರಲ್ಲಿ ಒಳಗೊಂಡಿವೆ. ಮೊದಲನೆಯದು, ವಿಧಾನಸಭಾಧ್ಯಕ್ಷರ ಸ್ಥಾನದ ಬಗ್ಗೆ ಪ್ರಮುಖವಾದ ಆರೋಪಗಳಿವೆ. ಸದರಿ ಆರೋಪವನ್ನು ಮಾಡಿದ್ದಾರೆ, ಹೇಳಲಾಗಿದೆ ಎನ್ನಲಾದ ಧ್ವನಿಯ ಬಗ್ಗೆ ಸಿ.ಡಿ. ಅಥವಾ ಯಾವುದೇ ಧ್ವನಿಸುರುಳಿಯ ಬಗ್ಗೆ including the Chair, ನಮಗೆ ಹಾಗೂ ಯಾರಿಗೂ ಸಹ ಯಾವುದೇ ದೃಢೀಕರಣ ಇಲ್ಲ. ನಿಯಮಾವಳಿಗಳ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಗ್ಗೆ ಚರ್ಚೆ ಮಾಡಬೇಕಾದರೆ ... ಮಾನ್ಯ ಭೋಜೇಗೌಡರೇ, ದಯಮಾಡಿ ಅಡಚಣೆ ಮಾಡಬೇಡಿ, ನಾನು ಮಾನ್ಯ ಸಭಾಪತಿಯವರಿಗೆ ಹೇಳುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಯಾವ ವಿಷಯದ ಬಗ್ಗೆ ಮಾತನಾಡಲಾಗಿದೆ, ಅದರ ಬಗ್ಗೆ ಮಾತ್ರವೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಲು ತಾವು ಅನುಮತಿ ನೀಡಬೇಕು. **(ಗೊಂದಲ)** ಮಾನ್ಯ ಸಭಾಪತಿಯವರು ರೂಲಿಂಗ್‌ನ್ನು ನೀಡಿದ ನಂತರ ಮಾನ್ಯ ಸದಸ್ಯರು ಮಾತನಾಡಲಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳಬೇಕೆಂದು ಬಯಸಿದ್ದಾರೆಯೋ ಅದನ್ನು ಹೇಳಲಿ. ಆ ಬಗ್ಗೆ ನಾವೂ ಸಹ ಮಾತನಾಡುತ್ತೇವೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸದರಿ ವಿಷಯದ ಬಗ್ಗೆ ನ್ಯಾಯಯುತವಾದ ಚರ್ಚೆಯಾಗಬೇಕು. ಸಭಾಧ್ಯಕ್ಷರ ಸ್ಥಾನವನ್ನು ಕಳಂಕ ಹಾಗೂ ಅನುಮಾನಗಳಿಂದ ಮುಕ್ತ ಮಾಡಬೇಕೆಂದು ಹೇಳುವಾಗ, ಸದರಿ ವಿಷಯದ ಬಗ್ಗೆ ತನಿಖೆಯಾಗಬೇಕು ಎಂದು ವಹಿಸಲಾಗಿರುವ ಹಾಗೂ ಇನ್ನೂ ಕೆಳಮನೆಯಲ್ಲಿ ಚರ್ಚೆಯಲ್ಲಿರುವ ವಿಷಯದಲ್ಲಿ ನ್ಯಾಯ ಕೊಡಬೇಕಾದ ವ್ಯಕ್ತಿ ಹಾಗೂ ಸರ್ಕಾರದ ಮುಖ್ಯಸ್ಥರು ಕೂಡ ಈ ಘಟನೆಯಲ್ಲಿ ಭಾಗಿಯಾಗಿದ್ದಾರೆ ಹಾಗೂ instigate ಮಾಡಿದ್ದಾರೆ ಎಂಬ ಆಪಾದನೆಯಾಗಿದೆ. ನ್ಯಾಯ ಕೊಡಬೇಕಾದವರೇ...

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸುತ್ತಿರುವ ವಿಷಯವು ವ್ಯಕ್ತಿಗೆ ಸಂಬಂಧಪಡುವುದಿಲ್ಲವೇ?

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮೂರು ಸ್ಥಾನಗಳು ...

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಷಯಾಂತರ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಸದರಿ ವಿಷಯದ ಬಗ್ಗೆ ನಾವು ದಿನಪತ್ರಿಕೆಗಳಲ್ಲಿ ಓದಿದ್ದೇವೆ... ಆ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಹೀಗಾಗಿ ಇಂತಹ ಕೆಟ್ಟ ಪರಂಪರೆಗೆ ಮೇಲ್ಮನೆ ಸಾಕ್ಷಿಯಾಗುವುದು ಬೇಡ ಎನ್ನುವುದು ನನ್ನ ಕಳಕಳಿಯಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸದ ಪೂರ್ವಾಹ್ನದಲ್ಲಿ ನಾವು ವಿರೋಧ ಪಕ್ಷದ ಸದಸ್ಯರುಗಳ ಗೈರು ಹಾಜರಿಯಲ್ಲಿ ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀಯುತ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ಸಲಹೆಯೊಂದನ್ನು ನೀಡಿದ್ದರು. ಪ್ರಾಯಶಃ ನಾಡಿನ ವಿಧಾನಮಂಡಲದ ಇತಿಹಾಸದಲ್ಲಿ ಇಂದು ಕಂಡರಿಯದ ಹಾಗೂ ಕೇಳರಿಯದ ಘಟನೆ ನಡೆದಿದೆ. ಇದು ವಿಧಾನ ಮಂಡಲದ ಇತಿಹಾಸದಲ್ಲಿ ದೊಡ್ಡ ಕಪ್ಪು ಚುಕ್ಕೆಯಾಗಿದೆ. ಯಾವ ನಿಯಮಾವಳಿಗಳಲ್ಲಿ ಅವಕಾಶವಿಲ್ಲದಿದ್ದರೂ ಸಹ ಈ ವಿಷಯದ ಬಗ್ಗೆ ನಾವು ಚರ್ಚೆಯನ್ನು ಮಾಡಬೇಕಾದಂತಹ ಅನಿವಾರ್ಯ ಸಂದರ್ಭದಲ್ಲಿ ನಾವು ಬಂದು ನಿಂತಿದ್ದೇವೆ. ವಿಧಾನ ಮಂಡಲದ ಸದಸ್ಯರ ಹಾಗೂ ಪೀಠಗಳ ಘನತೆ ಹಾಗೂ ಗೌರವಗಳ ಪ್ರಶ್ನೆಯೂ ಇದರಲ್ಲಿ ಅಡಕವಾಗಿದೆ. ಮೇಲ್ಮನೆ, ಹಿರಿಯರ ಸದನ, ಬುದ್ಧಿಜೀವಿಗಳ ಸದನ ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡದಿದ್ದರೆ ದೊಡ್ಡ ಲೋಪವಾದೀತು ಎನ್ನುವ ಹಿನ್ನೆಲೆಯಲ್ಲಿ ಪೂರ್ವಾಹ್ನದ ಅವಧಿಯಲ್ಲಿ ಒಂದು ತೀರ್ಮಾನಕ್ಕೆ ಬಂದು, ನಿಯಮ 342ರಡಿ ಸೂಚನೆಯನ್ನು ನೀಡಿದ್ದೇವೆ. ಪ್ರಾಯಶಃ ಇವತ್ತಿನ ದಿವಸ ಒಂದು ದೊಡ್ಡ ಕಳಂಕ ವಿಧಾನಮಂಡಲದ ಮೇಲೆ ಬಂದಿರುವಂತಹ ಸಂದರ್ಭದಲ್ಲಿ ಇಡೀ ರಾಷ್ಟ್ರ, ಜಗತ್ತು ಈ ಕಡೆಗೆ ದೃಷ್ಟಿಯನ್ನಿಟ್ಟು ನೋಡುವ ಸಂದರ್ಭದಲ್ಲಿ ಈ ವಿಷಯವಾಗಿ ನಾವು ಚರ್ಚೆಯನ್ನು ಮಾಡದಿದ್ದರೆ ಅದು ಖಂಡಿತವಾಗಿಯೂ ಸಹ ಲೋಪವಾಗುತ್ತದೆ. ಹೀಗಾಗಿ ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಮಂಡಿಸಿರುವ ಪ್ರಸ್ತಾಪಕ್ಕೆ ನಾವು ಹತ್ತು ಜನ ಸದಸ್ಯರು ನಮ್ಮ ಸಹಿಯನ್ನು ಹಾಕಿದ್ದೇವೆ. ಈ ವಿಷಯದಲ್ಲಿ ನಾವು ಆಗ್ರಹಿಸುವುದೇನೆಂದರೆ, ಪ್ರಜಾಪ್ರಭುತ್ವದ ರಕ್ಷಣೆಯ ನಿಟ್ಟಿನಲ್ಲಿ ನಾವುಗಳೆಲ್ಲರೂ ರಾಜಕಾರಣವನ್ನು ಮರೆತು ಈ ವಿಷಯದ ಬಗ್ಗೆ ಸ್ವಲ್ಪ ಹೊತ್ತು ಗಂಭೀರವಾದ ಚರ್ಚೆಯನ್ನು ಮಾಡೋಣ. ಇಂತಹ ಘಟನೆಗಳು ಮರುಕಳಿಸದಂತೆ ಹಾಗೂ ಪುನರಾವರ್ತನೆಯಾಗದಂತೆ ನಾವು ಯಾವ ರೀತಿಯಾಗಿ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಚರ್ಚೆಯನ್ನು ಮಾಡೋಣ. ಶಾಸಕರು ತಮ್ಮ ಮುಖವನ್ನು ತೋರಿಸುವುದಕ್ಕೆ ಸಾಧ್ಯವಾಗಂತಹ ಸ್ಥಿತಿ, ಸನ್ನಿವೇಶ ಹಾಗೂ ಸಂದರ್ಭಗಳಿಗೆ ನಾವು ತಲುಪಿದ್ದೇವೆ. ಇಂತಹ ಘಟನೆಗಳು ಮರುಕಳಿಸಬಾರದು. ಈ ವಿಷಯದ ಬಗ್ಗೆ ಗಂಭೀರವಾದ ಚಿಂತನೆಯನ್ನು ಈ ಸದನದಲ್ಲಿ ಮಾಡಬೇಕು. ಆ ಕಾರಣಕ್ಕಾಗಿ ಈ ವಿಷಯವನ್ನು ನಾವು ಪ್ರಸ್ತಾಪಿಸಬೇಕು. ದಯಮಾಡಿ ತಾವು ವಿಷಯದ ಬಗ್ಗೆ ಚರ್ಚೆಯನ್ನು ಮಾಡಲು ಅನುವು ಮಾಡಿಕೊಡಬೇಕೆಂದು ನಾನು ಕೋರುತ್ತೇನೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ನಿಯಮ 342 ರಡಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಪ್ರಾಯಶಃ ಇವತ್ತಿನ ದಿವಸ ಇಡೀ ದೇಶದಲ್ಲಿ ನಮ್ಮ ಶಾಸಕರು.... ಮಾನ್ಯ ಅರುಣ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಶಹಾಪುರ ರವರೇ ದಯಮಾಡಿ ಮಧ್ಯದಲ್ಲಿ ಅಡಚಣೆ ಮಾಡಬೇಡಿ. ವಿರೋಧ ಪಕ್ಷದವರು ಪ್ರಶ್ನೆ ಮಾಡುತ್ತಾರೆ. (ಗೊಂದಲ) ನಿಯಮ 342 ರಡಿ ಇರುವ ಅವಕಾಶದನುಸಾರವಾಗಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ರೂಲಿಂಗ್‌ನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಅದನ್ನು ಸರಿಪಡಿಸಿಕೊಳ್ಳಬೇಕು.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಾವು ನಿಯಮಾವಳಿಗಳನ್ನು ಹೊರತು ಪಡಿಸಿ ಏನೂ ಮಾಡುತ್ತಿಲ್ಲ. ಪ್ರಾಯಶಃ ಇವತ್ತಿನ ದಿವಸ ಇಡೀ ರಾಷ್ಟ್ರ ನಮ್ಮ ವಿಧಾನ ಮಂಡಲದ ಬಗ್ಗೆ ಚರ್ಚೆಯನ್ನು ಮಾಡುತ್ತಿದೆ. ಇಲ್ಲಿ ಎಲ್ಲಿಯೋ ಒಂದು ಕಡೆ ಸಂವಿಧಾನ, ನ್ಯಾಯ ಹಾಗೂ ಕಾನೂನು ಬದ್ಧವಾಗಿ ರಚಿತವಾದ ಸರ್ಕಾರವನ್ನು ಕೆಡುವ ರೀತಿಯಲ್ಲಿ ಇಂತಹ ಘಟನೆಗಳು ನಡೆಯುತ್ತಿವೆ. ಅದನ್ನು ಸಾಮಾನ್ಯ ಪ್ರಜೆಯಾಗಿ ಪ್ರಶ್ನೆ ಮಾಡಬೇಕು. ಚುನಾವಣಾ ಸಂದರ್ಭದಲ್ಲಿ ನಾವು ರಾಜಕಾರಣವನ್ನು ಮಾಡೋಣ ಹೊರತು ಈ ಸಂದರ್ಭದಲ್ಲಿ ರಾಜಕೀಯ ಮಾಡುವುದು ಬೇಡ. ನಾವು ಜನರಿಗೆ ಉತ್ತರವನ್ನು ಕೊಡಬೇಕು. ಆದ್ದರಿಂದ ಪ್ರಸ್ತುತ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

**ಶ್ರೀ ಸಾ.ರಾ.ಮಹೇಶ್(ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಷಯದ ಬಗ್ಗೆ ಅನೇಕ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಪ್ರಸ್ತುತ ಕೆಳಮನೆಯಲ್ಲಿ ಈ ವಿಷಯದಲ್ಲಿ ತೀರ್ಮಾನಕ್ಕೆ ಬಂದಿರುವಂತಹ ಸಂದರ್ಭದಲ್ಲಿ ಬಿ.ಜೆ.ಪಿ ಪಕ್ಷದ ಕೆಲವು ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ನೀಡುತ್ತಿದ್ದಾರೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, Point of order ಮಾನ್ಯ ಸಚಿವರು ಈ ಸಂದರ್ಭದಲ್ಲಿ ಇಲ್ಲಿ ಮಾತನಾಡಲು ನನ್ನ ಯಾವುದೇ ತಕರಾರು ಇಲ್ಲ. ನಿಯಮಾವಳಿಗಳ ಬಗ್ಗೆ ಈಗ ಪ್ರಸ್ತಾಪ ಮಾಡಲಾಗುತ್ತಿದೆ. ಇದರ ಬಗ್ಗೆ ಚರ್ಚೆಯನ್ನು ಮಾಡುವ ಸರ್ವ ಹಕ್ಕು ಈ ಮನೆಯ ಸದಸ್ಯರದ್ದಾಗಿದೆ. ಅವರು ಕೇವಲ ಸಚಿವರು ಮಾತ್ರವೇ ಹೊರತು ಈ ಮನೆಯ ಸದಸ್ಯರು ಅಲ್ಲ. ಸರ್ಕಾರದ ಪರವಾಗಿ ಮಾನ್ಯ ಸಚಿವರು ಉತ್ತರ ನೀಡುತ್ತಿದ್ದಾರೆ. ಅದನ್ನು ಸರ್ಕಾರ ಉತ್ತರ ಅಥವಾ ಅಭಿಪ್ರಾಯವೆಂದು ನಾವು ಪರಿಗಣಿಸಬೇಕೇ? (ಗೊಂದಲ) ನಾನು ಪೀಠವನ್ನು ಕೇಳುತ್ತಿದ್ದೇನೆ. ಪೀಠವು ನನಗೆ ಈ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು. ಪ್ರಸ್ತುತ ಚರ್ಚೆಯು ಸದನಕ್ಕೆ ಸಂಬಂಧಪಟ್ಟಿದ್ದಾಗಿದ್ದು, ಇದು ಸರ್ಕಾರದ ವಿಷಯವಾಗಿಲ್ಲ. ನಾವು ಸರ್ಕಾರದ ವಿಷಯವನ್ನು ಮಾತನಾಡುವಾಗ ಮಾತ್ರವೇ ಮಾನ್ಯ ಸಚಿವರು ಮಾತನಾಡಬೇಕು. ನಾವು ಈ ಸದನದ ನಿಯಮಾವಳಿಗಳ ಬಗ್ಗೆ ಮಾತನಾಡುತ್ತಿದ್ದೇವೆ. ಮಾನ್ಯ ಸಚಿವರು ಈ ಮನೆಯ ಸದಸ್ಯರಲ್ಲ ಹೀಗಾಗಿ ಇಲ್ಲಿನ ಚರ್ಚೆಯಲ್ಲಿ ಅವರು ಪಾಲ್ಗೊಳ್ಳುವುದಕ್ಕೆ ಸಾಧ್ಯವಿಲ್ಲ.



“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಸರ್ಕಾರದ ವಿಷಯ ಬಂದಾಗ, ಸರ್ಕಾರದ ಪ್ರತಿನಿಧಿಯಾಗಿ, ಮಂತ್ರಿಯಾಗಿ ಮಾತನಾಡಬಹುದೇ ಹೊರತು ಈ ಮನೆಯ ಸದಸ್ಯರಾಗಿ ಅಲ್ಲ. ಈ ಕಾರಣಕ್ಕಾಗಿ ಮಾನ್ಯ ಮಂತ್ರಿಗಳು ಈ ಸಂದರ್ಭದಲ್ಲಿ ಮಾತನಾಡಲು ಅವಕಾಶವಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಸರ್ಕಾರದ ವಿಚಾರಗಳಲ್ಲಿ ಅವರು interfere ಆಗಬಹುದು. As a Minister, he can interfere and give his suggestions in respect of Government matters.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಮನೆಯ ಸದಸ್ಯರು ಅಲ್ಲ ಎಂದು ಹೇಳಿದರೆ, ಅವರು ಸರ್ಕಾರದ ಮಂತ್ರಿಗಳಾಗಿದ್ದಾರೆ. ಅವರು ಯಾವುದೇ ಸಲಹೆಗಳನ್ನು ನೀಡಬಹುದು, ಆದರೆ ಮತದಾನ ಮಾಡುವಂತಿಲ್ಲ. ಅವರ ಯಾವುದೇ ವಿಚಾರಗಳನ್ನು ಪ್ರಸ್ತಾಪಿಸಬಹುದು ಹಾಗೂ ವ್ಯಕ್ತಪಡಿಸಬಹುದು. ಆದರೆ ಅವರು ಸರ್ಕಾರವನ್ನು ಸಮರ್ಥನೆ ಮಾಡಿಕೊಳ್ಳಲು ಬರುವುದಿಲ್ಲ ಎಂಬುದಾಗಿ ಹೇಳುವುದು ತಪ್ಪು. ಯಾವುದೇ ರೀತಿಯಲ್ಲಾದರೂ ಸರ್ಕಾರದ ಪರವಾಗಿ ಸಮರ್ಥನೆ ಮಾಡಿಕೊಳ್ಳಬಹುದು. ಸಚಿವರು ಈ ಮನೆಯ ಸದಸ್ಯರು ಅಲ್ಲದಿದ್ದರೂ ಸಹ ತಮಗೆ ತಿಳಿದ ವಿಷಯವನ್ನು ಇಲ್ಲಿ ಹೇಳಬಹುದು. ಅವರಿಗೆ ಎಲ್ಲಾ ರೀತಿಯ ಅಧಿಕಾರವಿದೆ. ಹೀಗೆ ನಿಯಂತ್ರಣ ಮಾಡಿದರೆ ಸದನವನ್ನು ನಡೆಸುವುದಕ್ಕಾಗುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಆದರೆ, ನನ್ನ point ಏನಿದೆ ಏನೆಂದರೆ, ಈ ಸದನದ ನಿಯಮಾವಳಿಗಳ ಚರ್ಚೆಯಲ್ಲಿ ನಾವು ಈ ಮನೆಯ ಸದಸ್ಯರು ಪಾಲ್ಗೊಂಡಿದ್ದೇವೆ. ಪ್ರಸ್ತುತ ಸಂದರ್ಭದಲ್ಲಿ ನಾವು ಸರ್ಕಾರದ ಅಭಿಪ್ರಾಯವನ್ನು ಕೇಳುತ್ತಿಲ್ಲ.

(23) 4–20 11–02–2019 ಸಿಎಸ್/ಜಿಆರ್

**ಸಭಾಪತಿಯವರು:–** ಈ ಮನೆ ಸದಸ್ಯರಲ್ಲದಿದ್ದರೂ ಸಹ ಅವರಿಗೆ ನಿಯಮಾವಳಿಗಳ ಬಗ್ಗೆ ಸ್ಪಷ್ಟೀಕರಣ ನೀಡುವುದಕ್ಕೆ ಹಾಗೂ ಅವರ ಅಭಿಪ್ರಾಯಗಳನ್ನು ನೀಡುವುದಕ್ಕೆ ಮಾನ್ಯ ಸಚಿವರಿಗೆ ಅಧಿಕಾರವಿದೆ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಹಿರಿಯ ಸದಸ್ಯರಾದಂತಹ ಆಯನೂರು ಮಂಜುನಾಥ್‌ರವರು ಬೆಳಿಗ್ಗೆ ಈ ಘಟನೆ ನಡೆದಂತಹ ಸಂದರ್ಭದಲ್ಲಿ ಅವರು ಸದನದಲ್ಲಿ ಇರಲಿಲ್ಲ. ಈ ಸದನದಲ್ಲಿ ನಾನಾಗಲೀ ಅಥವಾ ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರಾಗಲೀ ತಮ್ಮನ್ನು ಕೇಳಿಕೊಂಡಿದ್ದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಏನೆಂದರೆ ಈ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ನಿಯಮಾವಳಿಗಳನ್ನು ಅಡ್ಡ ತರಬಾರದು, ಏಕೆಂದರೆ ಈ ವಿಚಾರ ದೇಶದಾದ್ಯಂತ ಪ್ರಚಾರಗೊಂಡಿದೆ. ಆದ್ದರಿಂದ ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿದೆವು. ಆಗ ತಾವು ಈ ಬಗ್ಗೆ ಚರ್ಚೆಗೆ ಅವಕಾಶ ಕೋರಿ ನೋಟಿಸ್ ನೀಡಿಲ್ಲವೆಂದು ಹೇಳಿದಿರಿ. ಈ ವಿಚಾರ ಚರ್ಚೆಗೆ ತರಬಾರದೆಂದು ಪ್ರಯತ್ನ ಮಾಡಿದ್ದು ರೆಕಾರ್ಡ್‌ನಲ್ಲಿದೆ. ಅದನ್ನು ನಾವೆಲ್ಲರೂ ಕೇಳಿದ್ದೇವೆ. ಹಾಗಾಗಿ ಈಗ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಈ ರೀತಿ ಚರ್ಚೆಗೆ ಅಡ್ಡಿ ಮಾಡುತ್ತಿರುವುದು ಸಮಂಜಸವಲ್ಲ ಎನ್ನುವುದು ನನ್ನ ಅನಿಸಿಕೆ. ಅದನ್ನು ಅವರು ತಿಳಿದುಕೊಳ್ಳಬೇಕು. ಎರಡನೆಯದಾಗಿ ಮಾನ್ಯ ಸದಸ್ಯರಾದ ಡಾ||ತೇಜಸ್ವಿನಿಯವರು ಮಾತನಾಡತಕ್ಕ ಸಂದರ್ಭದಲ್ಲಿ ಇದು ಕೆಳಮನೆ ಸದಸ್ಯರ ವಿಚಾರವಾಗಿದೆ ಎಂದು ಹೇಳಿದ್ದಾರೆ. ಇಲ್ಲಿ ನಾವು ಯಾರ ಹೆಸರನ್ನು ಬಳಕೆ ಮಾಡಿಲ್ಲ, ನಾವಿಲ್ಲಿ ಘಟನೆ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೇಳುತ್ತಿದ್ದೇವೆಯೇ ಹೊರತು ಮತ್ತೇನಿಲ್ಲ.

(ಗೊಂದಲ)

**ಶ್ರೀ ಪ್ರಿಯಾಂಕ ಖರ್ಗೆ(ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಗಳೇ, ಕೆಳಮನೆಯಲ್ಲಿ ಇದೇ ವಿಚಾರದ ಬಗ್ಗೆ ಚರ್ಚೆ ನಡೆದಿದೆ. ಈ ಸದನದ ಸದಸ್ಯರಾದ ಮಾನ್ಯ ಲಹರ್ ಸಿಂಗ್ ಸಿರೋಯಾರವರು ಅಲ್ಲಿಯೇ ಕುಳಿತು ಡಿಬೇಟ್ ಕೇಳಿದ್ದನ್ನು ನಾನು ನೋಡಿದ್ದೇನೆ.

ಮಾನ್ಯ ಸಭಾಪತಿಗಳೇ, ಕೆಳಗಿನ ಮನೆಯಲ್ಲಿ ಈ ವಿಚಾರದ ಬಗ್ಗೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ಅಲ್ಲಿ ನಾನಿದ್ದೆನು. ಅಲ್ಲಿ ಈ ವಿಚಾರದ ಬಗ್ಗೆ 3–4 ಗಂಟೆಗಳ ಕಾಲ ಚರ್ಚೆ ನಡೆದರೂ ಸಹ ಒಬ್ಬರ ಹೆಸರು ಬರಲಿಲ್ಲ. ಇದು ಬಹಳ ಮಹತ್ವವಾದ ವಿಚಾರ ಆಗಿರುವ ಹಿನ್ನೆಲೆಯಲ್ಲಿ ಇಲ್ಲಿಯೂ ಸಹ ಚರ್ಚೆಗೆ ಅವಕಾಶ ಕೇಳುತ್ತಿದ್ದಾರೆ. ಪೀಠದ ಬಗ್ಗೆ ಹಾಗೂ ರಾಜಕಾರಣಿಗಳ ಬಗ್ಗೆಯೇ ಅನುಮಾನ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. Hon'ble Speaker is the custodian of the House. ಇಲ್ಲಿ ಪ್ರಜಾಪ್ರಭುತ್ವದ ವಿಚಾರ ಬಂದಿರುವ ಕಾರಣ ಚರ್ಚೆ ಮಾಡಲು ಎಲ್ಲರೂ ಅವಕಾಶವನ್ನು ಕೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಗಳೇ, ಪ್ಲೆಕಾರ್ಡ್ ಗೂ ಇದಕ್ಕೂ ಸಂಬಂಧವಿಲ್ಲ. ಇರುವ ಪದ್ಧತಿಯನ್ನು ಹಾಳು ಮಾಡುವುದಕ್ಕೆ ಹೋಗಬೇಡಿ. ನಾನು ಯಾರು ಮಾತನಾಡುತ್ತಿದ್ದರೂ ಸಹ ಮಧ್ಯೆದಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ, ಎದ್ದು ಎದ್ದು ನಿಲ್ಲುವುದಿಲ್ಲ. ಈಗ ನಾನು ಯಾರಿಗೂ ಯೀಲ್ಡ್ ಆಗಿಲ್ಲ.

**ಶ್ರೀ ಆಯನೂರು ಮಂಜುನಾಥ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಈಗ ಮಾನ್ಯ ಸಚಿವರು ಸದನಕ್ಕೆ ತಮ್ಮ ಸಲಹೆಗಳನ್ನು ನೀಡಿದ್ದಾರೆ. ನನ್ನ ಕಡೆಯ ಪ್ರಶ್ನೆ ಏನೆಂದರೆ, ಅವರು ಯಾವ ವಿಚಾರವನ್ನು ಪ್ರಸ್ತಾಪಿಸುವುದಕ್ಕೆ



ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಬಯಸುತ್ತಿದ್ದಾರೆ ಅದರ ಬಗ್ಗೆ ನಮಗೆ ಆತಂಕ ಇಲ್ಲ. ಆದರೆ ಚರ್ಚೆಗೆ ಫೇರ್ ಪರ್ಮಿಷನ್ ನೀಡಬೇಕು. ಅಲ್ಲಿ ಯಾವ್ಯಾವ ಹೆಸರಿನ ಉಲ್ಲೇಖ ಆಗಿದೆಯೋ ಅದರ including the name of Hon'ble Speaker ಇವರುಗಳ ಬಗ್ಗೆ ಚರ್ಚೆಗೆ ಅವಕಾಶ ಇದೆಯೇ? ಇಲ್ಲಿ around the bush ಮಾಡುವುದಕ್ಕೆ ಆಗುವುದಿಲ್ಲ. Let us beat around the bush. ಇಲ್ಲಿ ಭ್ರಷ್ಟಾಚಾರದ ಬಗ್ಗೆ ಮಾತನಾಡಬೇಕಾಗಿದೆ. ಎಲ್ಲಾ ವಿಚಾರಗಳ ಬಗ್ಗೆ ಮಾತನಾಡೋಣ. ಇಡೀ ದೇಶದಲ್ಲಿ ವಿಚಾರ ಪ್ರಚಾರಗೊಂಡು ಶಾಸಕರು ನಾವು ತಲೆ ತಗ್ಗಿಸಿದ್ದೇವೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಆಯನೂರು ಮಂಜುನಾಥರವರು ಏಕೆ ಗಾಬರಿ ಆಗಿದ್ದಾರೆ ಎಂದು ನಮಗೆ ಅರ್ಥ ಆಗುತ್ತಿಲ್ಲ.

(ಗೊಂದಲ)

**ಶ್ರೀ ಆಯನೂರು ಮಂಜುನಾಥ:–** ಮಾನ್ಯ ಸಭಾಪತಿಗಳೇ, ಹೊರಗಡೆ ಈ ರೀತಿ ಸುದ್ದಿ ಹಬ್ಬಿರುವುದು ನಮ್ಮ ಸದನಗಳ ಘನತೆ ಗೌರವದ ಪ್ರಶ್ನೆಯಾಗಿದೆ. ಹೊರಗಡೆ ಮಾಧ್ಯಮಗಳಲ್ಲಿ ಏನೇನು ವಿಚಾರ ಹಾಗೂ ಪತ್ರಿಕೆಗಳಲ್ಲಿ ಯಾರ್ಯಾರ ಹೆಸರುಗಳು ಬಂದಿದೆಯೋ ಅದೆಲ್ಲದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೇ? Restriction ಎಲ್ಲಿದೆ? ಮಾನ್ಯ ಸಭಾಧ್ಯಕ್ಷರ ಹೆಸರು ಕೂಡ ಪ್ರಸ್ತಾಪಗೊಂಡಿದೆ.

(ಗೊಂದಲ)

ಕೆಳಮನೆಯಲ್ಲಿ ಸಭಾಧ್ಯಕ್ಷರೆ ಉತ್ತರ ನೀಡಿದ್ದಾರೆ. ಸಭಾಪತಿಗಳ ಅನುಮತಿ ಪಡೆದು ಚರ್ಚೆ ಮಾಡುವಾಗ ಹೆಸರುಗಳನ್ನು ಉಲ್ಲೇಖಿಸುವುದಕ್ಕೆ ಅವಕಾಶ ಇದೆಯೇ?

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಆಯನೂರುರವರು ಚರ್ಚೆ ಮಾಡಬೇಕಾದ ಸಂದರ್ಭದಲ್ಲಿ ಅವಶ್ಯ ಬಂದಲ್ಲಿ ಹೆಸರುಗಳನ್ನು ಉಲ್ಲೇಖಿಸಬಹುದೆ ಎಂದು ಕೇಳಿದ್ದಾರೆ, ಈ ಸದನದಲ್ಲಿ ಕೆಳಮನೆ ಸದಸ್ಯರ ಅಥವಾ ಬಹುಶಃ ಯಾರ ಹೆಸರನ್ನಾದರೂ ಉಲ್ಲೇಖಿಸಿದಲ್ಲಿ ಅದನ್ನು ಕಡತದಿಂದ ತೆಗೆದು ಹಾಕಿಸುವ ಅಧಿಕಾರ ತಮಗೆ ಇದೆ. ಅದಕ್ಕಿಂತ ಹೆಚ್ಚಿಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಸಾ.ರಾ.ಮಹೇಶ(ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಗಳೇ, ನಾನು ಈ ಮನೆಯ ಸದಸ್ಯ ಅಲ್ಲದಿದ್ದರೂ ಸಹ ನನಗೆ ಮಾತನಾಡಲು ಅನುಮತಿಯನ್ನು ನೀಡಲಾಗಿದೆ. ನಾನು ಈ ವಿಚಾರದ ಬಗ್ಗೆ ಚರ್ಚೆ ಮಾಡಲು ಏಕೆ ಬಯಸಿದೆ ಎಂದರೆ ಈ ವಿಚಾರ ಶುಕ್ರವಾರದಂದು ಬೆಳಿಗ್ಗೆ ನಡೆದಂತಹ ಘಟನೆಯಲ್ಲಿ ಇಡೀ ರಾಜ್ಯ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಾಗೂ ದೇಶದಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗ ತಲೆತಗ್ಗಿಸಬೇಕಾದ ವಿಚಾರವಾಗಿದೆ. ಇಲ್ಲಿ ಕೆಳಮನೆ ಅಥವಾ ಮೇಲ್ಮನೆ ಎನ್ನುವ ವಿಚಾರವಲ್ಲ. ನಾವೆಲ್ಲರೂ ಸಹ ಒಂದೇ, ತಪ್ಪು ಯಾರೇ ಮಾಡಿದ್ದರೂ ಸಹ ನಾವು ಯಾವುದಾದರೂ ಸಣ್ಣ ವಿಚಾರದಲ್ಲಿ ಎಡವಿದರೂ ಸಹ ನಮ್ಮ ಮಾಧ್ಯಮ ಮಿತ್ರರು ಅದನ್ನು ಬೆಳಿಗ್ಗೆಯಿಂದ ಸಂಜೆಯವರೆಗೆ ತೋರಿಸಿದ್ದನ್ನೇ ತೋರಿಸಿ, ನಮ್ಮ ತೇಜೋವಧೆಯನ್ನು ಮಾಡತಕ್ಕ ಸ್ನೇಹಿತರು ಇದ್ದಾರೆ. ಅದು ತಮಗೂ ಸಹ ಗೊತ್ತಿದೆ. ನನ್ನ ಮನವಿ ಏನೆಂದರೆ ಕೆಳಮನೆಯಲ್ಲಿ ಈ ವಿಚಾರದ ಬಗ್ಗೆ ಎಲ್ಲರೂ ಕುಳಿತು ಚರ್ಚೆಯನ್ನು ಮಾಡಿ ಈಗಾಗಲೇ ಒಂದು ನಿರ್ಧಾರಕ್ಕೆ ಬರಲಾಗಿದೆ. ಈಗ ಶಾಸಕಾಂಗ ಮತ್ತು ನ್ಯಾಯಾಂಗದ ಮೇಲೆ ಆರೋಪ ಬಂದಿರುವ ಸಂದರ್ಭದಲ್ಲಿ ಈ ಸದನದಲ್ಲಿಯೂ ಸಹ ...

(024)11–02–2019(04–30)ಬಿಎಸ್‌ಡಿ–ಜಿಆರ್

(ಗೊಂದಲ)

**ಶ್ರೀ ಸಾ.ರಾ. ಮಹೇಶ್:–** ಮಾನ್ಯ ಸಭಾಪತಿಯವರೇ, ನಾನು ಯಾರ ಹೆಸರನ್ನು ಸಹ ಉಲ್ಲೇಖ ಮಾಡಿದೇ ಆ ಆಡಿಯೋ ತುಣುಕಿನಲ್ಲಿರುವುದನ್ನು ಹೇಳಿದ್ದೇನೆ. ಅದರಲ್ಲಿ ಎರಡು ವಿಚಾರಗಳಿದ್ದು, ನಾನು ಹೆಸರನ್ನು ಹೇಳುತ್ತಿಲ್ಲ. ನ್ಯಾಯಾಂಗ ಮತ್ತು ರಾಜ್ಯಾಂಗಗಳ ವಿಚಾರವಾಗಿ ಪ್ರಸ್ತಾಪ ಮಾಡಿ ಆರೋಪ ಮಾಡಿರುವುದರಿಂದ ದಯಮಾಡಿ ಆ ವಿಚಾರವನ್ನು ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ,. . . .

**ಶ್ರೀ ಸಾ.ರಾ. ಮಹೇಶ್:–** ನಾನು ಯೀಲ್ಡ್ ಆಗಿಲ್ಲ.

(ಗೊಂದಲ)

**ಶ್ರೀ ಸಾ.ರಾ. ಮಹೇಶ್:–** ನನಗೆ ಮಾತನಾಡಲು ಅವಕಾಶ ಕೊಡದಿದ್ದರೆ ಹೇಗೆ? ಇಷ್ಟು ಸಮಯ ಅವರು ಮಾತನಾಡಿದರು ನಾವು ಆ ರೀತಿ ಮಾತನಾಡಲು ಅವಕಾಶ ಕೊಡುವವರಲ್ಲ ಎಂದು ಇಡೀ ರಾಜ್ಯ ಮತ್ತು ದೇಶದ ಜನತೆ ಎದುರು ಸಾಬೀತು ಮಾಡಬೇಕು. ಆ ವಿಚಾರವಾಗಿ ಸದನದಿಂದ ಮಾಹಿತಿಗಳು ಹೊರಗೆ ಹೋಗಬೇಕು. ಆದ್ದರಿಂದ ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,

ಶ್ರೀ ಹೆಚ್.ಎಂ. ರೇವಣ್ಣ:– ಮಾನ್ಯ ಸಭಾಪತಿಯವರೇ, ನನ್ನ ಮಾತುಗಳು ಮುಕ್ತಾಯವಾಗಿರಲಿಲ್ಲ.

**ಸಭಾಪತಿಯವರು:–** ನಂತರ ತಮಗೆ ಅವಕಾಶ ಕೊಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಭಾಪತಿಯವರ ವಿಶೇಷ ಅಧಿಕಾರದಡಿ ವಿಷಯವನ್ನು ಪ್ರಸ್ತಾಪಿಸಲು ಅನುಮತಿ ಕೇಳಿದ್ದಾರೆ. ನನಗೆ ಅರ್ಥವಾಗದಿರುವ ಸಂಗತಿ ಬಗ್ಗೆ ಪೀಠ ರಕ್ಷಣೆಗೆ ಬರಬೇಕು.

**ಸಭಾಪತಿಯವರು:–** ನನಗೂ ಅರ್ಥವಾಗದೇ ಇರುವುದರಿಂದ ನೀವು ಏನು ಹೇಳುತ್ತಿದ್ದೀರಿ ಎಂಬುದನ್ನು ಕೇಳುತ್ತಿದ್ದೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆಯನ್ನು ಬದಿಗಿಟ್ಟು ಈ ಚರ್ಚೆ ಏಕೆ ಬಂತು ಎಂದು ನನಗೆ ಅರ್ಥವಾಗಿಲ್ಲ. ಎರಡನೆಯದಾಗಿ ನಿಯಮ 68 ಸಾರ್ವಜನಿಕ ವಿಷಯದ ಮಹತ್ವಗಳಿಗಾಗಿಯೇ ಇರುವುದರಿಂದ ಅದರಡಿ ಈ ವಿಷಯವನ್ನು ಪ್ರಸ್ತಾಪಿಸಬಹುದಾಗಿದೆ. ನಿಯಮ 69ರಡಿಯಲ್ಲಿ ಸೂಚನೆ ಕಳುಹಿಸಲು ಅವಕಾಶ ಇದೆ, ನಿಯಮ 72ರಡಿ ಸೂಚನೆ ಕಳುಹಿಸಲು ಅವಕಾಶ ಇದೆ. ಇಷ್ಟೆಲ್ಲಾ ಮಹತ್ವದ ವಿಷಯವನ್ನು ಚರ್ಚೆ ಮಾಡಬೇಕೆಂದು ಆಡಳಿತ ಪಕ್ಷವೇ ಬಾವಿಗೆ ಬಂದು ಆಗ್ರಹಿಸುವಂತಹ ತುಡಿತವೆಲ್ಲವೂ ಇದೆ.

(ಗೊಂದಲ)

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಇದು ಬಹಳ ಕೆಟ್ಟ ಪರಂಪರೆ. ಈ ಪದ್ಧತಿಯನ್ನು ಒಂದು ಬಾರಿ ಆರಂಭ ಮಾಡಿದರೆ ಮುಂದಿನ ಪ್ರಕರಣಗಳಿಗೂ ನಾಂದಿಯಾಗುತ್ತದೆ. ನಮ್ಮ ನಿಯಮಗಳಲ್ಲಿ ಬಹಳ ಸ್ಪಷ್ಟವಾಗಿ ಅವಕಾಶ ಇದೆ. ನಿಯಮ 68, ನಿಯಮ 69 ಮತ್ತು ನಿಯಮ 72 ಈ ಎಲ್ಲಾ ನಿಯಮಗಳಲ್ಲಿಯೂ ಅವಕಾಶ ಇದೆ. ತಾವು ಯಾವ ರೀತಿ ಸೂಚನೆ ಕಳುಹಿಸಬೇಕೆಂದು ಮಾನ್ಯ ಸದಸ್ಯರಿಗೆ ಸೂಚನೆ ಕೊಡಬೇಕು. ಯಾವ ರೀತಿ ಸಾರ್ವಜನಿಕ ವಿಷಯಗಳನ್ನು ಪ್ರಸ್ತಾಪ ಮಾಡಲು ನಿಲುವಳಿ ಸೂಚನೆ ಇದೆ ಎಂಬ ಬಗ್ಗೆ ಮಾನ್ಯ ಹೊರಟ್ಟಿಯವರು ಪ್ರಸ್ತಾಪಿಸಿದರು. ಇದು ಚರ್ಚೆಯಾಗಬೇಕಾದರೆ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಹಾಗಾದರೆ ಚರ್ಚೆ ಎಲ್ಲಿಂದ ಆರಂಭವಾಗಿ ಎಲ್ಲಿಗೆ ಮುಕ್ತಾಯವಾಗಬೇಕು? ಈ ವಿಷಯವನ್ನು ಮುಕ್ತಾಯ ಮಾಡುವಾಗ ಕೊನೆಯ ನಿರ್ಣಯ ಏನೆಂದು ಆಗುತ್ತದೆ? ಕೆಳಮನೆಯಲ್ಲಿ ಆಗಿರುವ ನಿರ್ಣಯಕ್ಕೆ ವ್ಯತಿರಿಕ್ತವಾಗಿ ನಿರ್ಣಯ ಮಾಡಿದಾಗ ಅದರ ಕಾನ್ಸಿಕ್ವೇನ್ಸ್ ಏನು? ನಮ್ಮ ಸದನದಲ್ಲಿ ಈ ರೀತಿಯ ವಿಷಯಗಳ ಬಗ್ಗೆ ಚರ್ಚೆಗೆ ಅವಕಾಶ ಕೊಡುವುದು ಸರಿಯಲ್ಲ. ಕೆಳಮನೆಯಲ್ಲಿ ಈಗಾಗಲೇ ಒಂದು ತೀರ್ಮಾನವಾಗಿರುವುದರಿಂದ ಮತ್ತು ತೀರ್ಮಾನವಾಗಿದೆ ಎಂದು ಸ್ವತ: ಮಾನ್ಯ ಸಚಿವರು ಹೇಳಿರುವುದರಿಂದ ಈ ಸದನದಲ್ಲಿ ವಿಷಯವನ್ನು ಪ್ರಸ್ತಾಪಿಸಿರುವುದರಿಂದ ಅನಗತ್ಯವಾಗಿ ಗೊಂದಲಗಳಿಗೆ ಎಡೆಮಾಡಿಕೊಡುತ್ತದೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಕೆಳಮನೆಯ ಮಾನ್ಯ ಸಭಾಧ್ಯಕ್ಷರ ತೀರ್ಮಾನವನ್ನು ಒಪ್ಪಿಲ್ಲ. ಮಾನ್ಯ ಸಭಾಧ್ಯಕ್ಷರು ಈ ತೀರ್ಮಾನಕ್ಕೆ ಬರಲಾಗಿದೆ ಎಂದು ರೂಲಿಂಗ್ ಕೊಟ್ಟರೂ ಒಪ್ಪಿಲ್ಲ.

(ಗೊಂದಲ)

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, 'ರಾತ್ರಿ ಎಲ್ಲಾ ರಾಮಾಯಣ ಕೇಳಿ, ಬೆಳಿಗ್ಗೆ ಎದ್ದು ರಾಮನಿಗೂ–ಸೀತೆಗೂ ಏನಾಗಬೇಕು?'– ಎಂದು ಕೇಳಿದಂತಹ ಪರಿಸ್ಥಿತಿ ಇದಾಗಿದೆ. ಇಂತಹ ಪರಿಸ್ಥಿತಿ ಅವರಿಗೆ ಬರಬಾರದಾಗಿತ್ತು. ವಿರೋಧ ಪಕ್ಷದವರು ಮಾಡುವ ಕೆಲಸ ನಾವು ಮಾಡುತ್ತಿದ್ದು, ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಅವರನ್ನು ನೋಡಿ ನನಗೆ ಅಯ್ಯೋ ಅನಿಸುತ್ತಿದೆ. ರಕ್ಷಣೆ ಮಾಡಲು ಒದ್ದಾಡುತ್ತಿರುವ ಅವರ ಪಾಡನ್ನು ನೋಡಿದಾಗ ಕರ್ನಾಟಕ ರಾಜ್ಯದಲ್ಲಿ ವಿರೋಧ ಪಕ್ಷದ ಪರಿಸ್ಥಿತಿ ಇಷ್ಟು ವರ್ಷದಲ್ಲಿ ಆಗಿರಲಿಲ್ಲ. ಇದು ಹೊಸದಾಗ್ಗಿ ಆಗಿರುವ ಪರಿಸ್ಥಿತಿಯಾಗಿದೆ.

**ಶ್ರೀ ಎನ್. ರವಿಕುಮಾರ್:–** ಸಮ್ಮಿಶ್ರ ಸರ್ಕಾರದ ಪರಿಸ್ಥಿತಿ ನೋಡಿ ಅಯ್ಯೋ ಅನಿಸುತ್ತಿದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಾಗ ಅದನ್ನು ಹೇಳಲಿ. ಮತ್ತೆ ಮತ್ತೆ ನಿಯಮಾವಳಿಗಳನ್ನು ಕೇಳುವವರಿಗೆ ಮಾನ್ಯ ಹೊರಟ್ಟಿಯವರು ಮತ್ತು ನಾವೆಲ್ಲರೂ ಸಲಹೆಗಳನ್ನು ಕೊಟ್ಟಿದ್ದೇವೆ. ಇದು ಗಂಭೀರವಾದ ವಿಷಯವಾದ್ದರಿಂದ ಚರ್ಚೆಯಾಗಬೇಕು ಎಂದು ನಾವು ಮನವಿ ಮಾಡಿದಾಗ, ತಾವು ಊಟದ ನಂತರ ತೀರ್ಮಾನ ಮಾಡುವುದಾಗಿ ಹೇಳಿದ್ದಿರಿ. ತಾವು ಅವಕಾಶವಿರುವ ನಿಯಮ, ನಿಯಮ 342 ರಡಿಯಲ್ಲಿ ಚರ್ಚೆಗೆ ಅನುಮತಿ ನೀಡಿದ್ದೀರಿ.

**ಸಭಾಪತಿಯವರು:–** ಮಾನ್ಯ ತೇಜಸ್ವಿನಿಗೌಡರವರು ಪ್ರಸ್ತಾಪಿಸಿದ ವಿಷಯದ ಬಗ್ಗೆ ಹೇಳಿ.

**ಶ್ರೀ ಹೆಚ್.ಎಂ. ರೇವಣ್ಣ:–** ನಾನು ಆಗಲೇ ಹೇಳಿದ್ದೇನೆ. ಈ ಮನೆಯಲ್ಲಿ ಇಲ್ಲದವರ ವಿಷಯವನ್ನು ಪ್ರಸ್ತಾಪ ಮಾಡಬಾರದು ಎಂದು ಹೇಳಿದ್ದಾರೆ. ಅದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹಿಂದೆ ಬೆಳಗಾವಿಯಲ್ಲಿ ಒಬ್ಬರು ಪತ್ರಿಕೆಯಲ್ಲಿ ಬರೆದ ವಿಷಯದ ಬಗ್ಗೆ ಅವರನ್ನು ಕರೆಸಿ, ವಿಧಾನ ಸಭೆಯಲ್ಲಿ ಚರ್ಚೆಯಾಗಿರುವ ಹಕ್ಕುಚ್ಯುತಿ ಇದೆ. ಇದಲ್ಲದೇ ಸದನದ ಕಟಕಟೆಯಲ್ಲಿ ನಿಲ್ಲಿಸಿರುವ ಉದಾಹರಣೆಗಳು ಇವೆ. ಈ ಸದನದಲ್ಲಿಯೂ ಅಧಿಕಾರಿಗಳನ್ನು ಕರೆಸಿರುವ ಉದಾಹರಣೆಗಳು ಇವೆ. ನಮ್ಮ ಹಕ್ಕುಗಳನ್ನು ಮೊಟಕು ಮಾಡುವ ಕೆಲಸ ಆಗಬಾರದು. ನಾವು ಹೆಸರನ್ನು ಹೇಳದೇ ಕತೆ ಮಾತ್ರ ಹೇಳುತ್ತಿದ್ದೇವೆ ಎಂದು ನನ್ನ ಸೋದರಿಗೆ ತಮ್ಮ ಮುಖಾಂತರ ತಿಳಿಸಬಯಸುತ್ತೇನೆ. ಈ ಘಟನೆ ಬಗ್ಗೆ ರಾಷ್ಟ್ರದ ಜನತೆ ನಮ್ಮತ್ತ ನೋಡುತ್ತಿದ್ದಾರೆ. ಪದೇ ಪದೇ ರಾಜಕಾರಣಿಗಳ ಬಗ್ಗೆ ಎಲ್ಲರ ಬಾಯಿಂದ ಇದೇ ಬರುತ್ತಿದೆ. ಇದನ್ನು ಕೇಳಿ ಕೇಳಿ ನಮಗೂ ಬೇಜಾರಾಗಿಬಿಟ್ಟಿದೆ. ಆದ್ದರಿಂದ ಇದರ ಬಗ್ಗೆ ಅನುಮಾನಾಸ್ಪದವಾಗಿರದೇ ನ್ಯಾಯ ಹೊರಗೆ ಬರಬೇಕು. ಕೆಳಮನೆಯಲ್ಲಿ ಚರ್ಚೆಯಾಗಿರುವುದರಿಂದ ಈ ಮನೆಯಲ್ಲಿ ಚರ್ಚೆಯಾಗಬಾರದು ಎನ್ನುವುದಕ್ಕೆ ಕಾರಣ ಏನಿದೆ ಎಂಬುದು ನನಗೆ ತಿಳಿಯುತ್ತಿಲ್ಲ. ವಿಧಾನ ಮಂಡಲದ ವಿಷಯವಾದ್ದರಿಂದ ಇದರ ಚರ್ಚೆಗೆ ಅವಕಾಶ ಕೊಡಲೇಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹುಶ: ಸಾಕಷ್ಟು ವಿಚಾರಗಳು ಚರ್ಚೆಯಾಗಿದ್ದು, ಇದು ಬಹಳ ಗಂಭೀರವಾದ ವಿಚಾರವಾಗಿದೆ. ಇದು ಸದನದ ಮರ್ಯಾದೆಯ ಪ್ರಶ್ನೆಯಾಗಿದೆ. ಹಾಗಾಗಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾದ ಅವಶ್ಯಕತೆಗಳಿವೆ. ಆದರೆ ಕೆಳಮನೆಯಲ್ಲಿ ಈಗಾಗಲೇ ಚರ್ಚೆಯಾಗಿ ತನಿಖೆ ಆಗಬೇಕೆಂದು ತೀರ್ಮಾನವಾಗಿದೆ. ಆದರೆ ಇಲ್ಲಿ ನಮ್ಮನ್ನು ಗುರುತಿಸಬೇಕೆಂದು ಚರ್ಚೆಯಾಗುವ ಅವಶ್ಯಕತೆ ಇದೆ ಎಂದು ನನಗೆ ಅನಿಸುವುದಿಲ್ಲ. ಆದರೆ ಅದಕ್ಕೂ ನನ್ನ ಸಹಮತ ಇದೆ. ಖಂಡಿತವಾಗಿ ತಪ್ಪು ಮಾಡಿರುವವರಿಗೆ ಶಿಕ್ಷೆಯಾಗಿ ಅವರು ಶಿಕ್ಷೆ ಅನುಭವಿಸಬೇಕೆಂದು ಕೆಳಮನೆಯಲ್ಲಿ ಚರ್ಚೆಯಾಗಿ, ಮಾನ್ಯ ಸಭಾಧ್ಯಕ್ಷರು 'ಇದು ನನಗೆ ಸಂಬಂಧಪಟ್ಟಿರುವ ವಿಚಾರವಾದ್ದರಿಂದ ಸಭೆಯಲ್ಲಿ ಇಟ್ಟಿದ್ದೇನೆ, ಇದರ ಬಗ್ಗೆ ಚರ್ಚೆಯಾಗಲಿ, ನನ್ನ ಅಭ್ಯಂತರವೇನೂ ಇಲ್ಲ' ಎಂದು ಹೇಳಿದ್ದಾರೆ. ಇಲ್ಲಿ ಯಾರನ್ನೂ ಯಾರೂ ಉಳಿಸಬೇಕಾದ ಪ್ರಶ್ನೆಯಿಲ್ಲ ಎಂಬುದು ಎಲ್ಲರಿಗೂ ಗೊತ್ತಿರಬೇಕಾದ ವಿಚಾರ ಎಂದು ನಾನು ಹೇಳಿದ್ದೇನೆ. ಏಕೆಂದರೆ ನಾವು ಕೋಟ್ಯಂತರ ಜನರನ್ನು ಪ್ರತಿನಿಧಿಸಿ ಇಲ್ಲಿಗೆ ಬಂದಿರುವುದರಿಂದ ಇಲ್ಲಿಯೇ ಆದ್ಯತೆ ಮೇಲೆ ನ್ಯಾಯ ಸಿಗಬೇಕು. ಆದ್ದರಿಂದ ಇಲ್ಲಿಯೇ ವ್ಯತ್ಯಾಸಗಳಾದಾಗ ಹೊರಗಡೆ ಏನು ಮಾಹಿತಿ ಹೋಗುತ್ತದೆ ಎನ್ನುವ ಭಾವನೆಗಳು ನಮಗೆ ಗೊತ್ತಿದೆ. ಹಾಗಾಗಿ ಇಂತಹ ಪರಿಸ್ಥಿತಿಯಲ್ಲಿ ಕಾಲಹರಣ ಮಾಡದೇ ಇರುವ ವಿಚಾರಗಳ ಬಗ್ಗೆ ಕೆಳಮನೆಯಲ್ಲಿ ಮಾಡಿರುವ ನಿರ್ಧಾರಕ್ಕೆ ನಾವು ಸಹಮತ ವ್ಯಕ್ತಪಡಿಸಿ, ಈ ಚರ್ಚೆಯನ್ನು ಇಲ್ಲಿಗೆ ಮೊಟಕುಗೊಳಿಸುವುದು ಸೂಕ್ತ ಎಂದು ನನಗೆ ಅನಿಸುತ್ತಿದೆ. ಹಾಗಾಗಿ ಪ್ರತಿಯೊಬ್ಬರು ಅವರ ಮೂಗಿನ ನೇರಕ್ಕೆ ಮಾತನಾಡುವುದು ಅಥವಾ ಅವರ ಅನಿಸಿಕೆಗಳಿಗೆ ಆದ್ಯತೆ ಸಿಗಬೇಕು ಹಾಗೂ ಯಾರನ್ನೋ ಗುರಿಯಾಗಿಟ್ಟುಕೊಂಡು ಮಾತನಾಡಬೇಕು ಎನ್ನುವ ದೃಷ್ಟಿಯಿಂದ ಮಾತನಾಡುವುದು ಸದನಕ್ಕೆ ಗೌರವ ತರುವ ವಿಷಯ ಅಲ್ಲ ಎಂದು ಹೇಳಬಯಸುತ್ತೇನೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಅವರು ಸಹಮತಿಸುತ್ತಿದ್ದಾರೆ.

**ಶ್ರೀ ಎಂ.ಕೆ. ಪ್ರಾಣೇಶ್:–** ದಯವಿಟ್ಟು ನನಗೆ ಮಾತನಾಡಲು ಅವಕಾಶ ಕೊಡಬೇಕು.

(ಗೊಂದಲ)

**ಶ್ರೀ ಸಾ.ರಾ. ಮಹೇಶ್:–** ಮಾನ್ಯ ಸದಸ್ಯರು ಕೆಳಮನೆಯ ತೀರ್ಪನ್ನು ಒಪ್ಪುವುದಾದರೆ ನಾವು ಒಪ್ಪಿಕೊಳ್ಳಲು ತಯಾರಿದ್ದೇವೆ.

**ಶ್ರೀ ಐವನ್ ಡಿ'ಸೋಜಾ:–** ವಿಶೇಷ ತನಿಖಾ ದಳವನ್ನು ರಚನೆ ಮಾಡಿರುವುದನ್ನು ಮಾನ್ಯ ಪ್ರಾಣೇಶ್‌ರವರು ಸ್ವಾಗತ ಮಾಡಿರುವುದಾದರೆ ನಾವು ಒಪ್ಪುತ್ತೇವೆ.

**(25)11–02–2019(4–40)ಹೆಚ್‌ವಿ–ಎಂಡಿ**

(ಸಭಾಪತಿಯವರ ಉಪಸ್ಥಿತಿ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ(ಮುಂದುವರಿದದ್ದು):–**

ಮಾನ್ಯ ಪ್ರಾಣೇಶ್‌ರವರು ಹೇಳುತ್ತಿರುವಂತೆ ವಿಶೇಷ ತನಿಖಾ ದಳದಿಂದ ತನಿಖೆ ಮಾಡಿಸುವುದನ್ನು ಅವರು ಸ್ವಾಗತಿಸುವುದಾದರೆ, ನಾವು ಸಹ ಅದನ್ನು ಒಪ್ಪುತ್ತೇವೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ನನ್ನ ಮಾತುಗಳನ್ನು ಮುಕ್ತಾಯಗೊಳಿಸುವುದಕ್ಕೆ ಅವರು ಅವಕಾಶ ಮಾಡಿಕೊಡಬೇಕಾಗಿದೆ. ನಾನು ಇನ್ನೂ ನನ್ನ ಮಾತುಗಳನ್ನು ಪೂರ್ಣಗೊಳಿಸಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಪೀಠ ಈ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೂ ಮೊದಲು ಅಂತಿಮವಾಗಿ ವಿರೋಧ ಪಕ್ಷದ ಅಭಿಪ್ರಾಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಅದಕ್ಕೂ ಮೊದಲು ವ್ಯಕ್ತಿಗತವಾಗಿ ಮಾನ್ಯ ಸದಸ್ಯರುಗಳು ತಮ್ಮತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕಾಗಿ ವಿನಂತಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾನ್ಯ ಪ್ರಾಣೇಶ್‌ರವರು ವ್ಯಕ್ತಪಡಿಸಿದ ಅಭಿಪ್ರಾಯದ ಮೇಲೆ ನಂಬಿಕೆ ಇಲ್ಲವೇ? ಅವರ ಪಕ್ಷದ ಸದಸ್ಯರ ಅಭಿಪ್ರಾಯವನ್ನು ಸಹ ಅವರು ಒಪ್ಪುತ್ತಿಲ್ಲವೆಂದರೆ ಹೇಗೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪ್ರಾಣೇಶ್‌ರವರೇ, ತಾವು ತಮ್ಮ ಮಾತುಗಳನ್ನು ಬೇಗನೇ ಮುಕ್ತಾಯಗೊಳಿಸಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "**

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಕೆಳಮನೆಯಲ್ಲಿ ನಡೆದಿರುವ ಚರ್ಚೆಯನ್ನು ನಾನು ನೋಡಿದ್ದೇನೆ. ಅಲ್ಲಿ ಬಹಳ ಆರೋಗ್ಯಕರವಾಗಿರುವ ಚರ್ಚೆ ನಡೆದಿದೆ. ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಕುಳಿತುಕೊಂಡು ತುಂಬ ಚೆನ್ನಾಗಿ ವಿಚಾರಗಳನ್ನು ವಿನಿಮಯ ಮಾಡಿಕೊಂಡಿದ್ದಾರೆ. ಈ ರೀತಿಯ ಘಟನೆಗಳು ಎಲ್ಲಿಯೂ ನಡೆಯಬಾರದೆಂದು ಕೆಳಮನೆಯ ವಿರೋಧ ಪಕ್ಷದ ಸದಸ್ಯರು ಹೇಳಿದ್ದಾರೆ. ವಿರೋಧ ಪಕ್ಷದವರಾಗಿರಬಹುದು ಅಥವಾ ಆಡಳಿತ ಪಕ್ಷದವರಾಗಿರಬಹುದು ಯಾರ್ಯಾರು ಈ ಘಟನೆಯಲ್ಲಿ ಭಾಗಿಗಳಾಗಿದ್ದಾರೆ ಎನ್ನುವುದರ ಬಗ್ಗೆ ತನಿಖೆಗಳಾಗಬೇಕು. ನಂತರ ಅದರಲ್ಲಿ ಭಾಗಿಗಳಾಗಿರುವವರ ಹೆಸರನ್ನು ಉಲ್ಲೇಖ ಮಾಡಬೇಕೆನ್ನುವ ಮಾತುಗಳನ್ನು ಸಹ ಕೆಳಮನೆಯ ವಿರೋಧ ಪಕ್ಷದ ಸದಸ್ಯರು ವ್ಯಕ್ತಪಡಿಸಿದ್ದಾರೆ. ನಮ್ಮ ಪಕ್ಷಗಳು ಬೇರೆಬೇರೆಯಾಗಿದ್ದರೂ, ಈ ವಿಚಾರದಲ್ಲಿ ಎಲ್ಲರು ಸಹಮತದಿಂದ ಒಟ್ಟಿಗೆ ಇರಬೇಕಾಗುತ್ತದೆ. ನಾವು ಜನರಿಂದ ಆಯ್ಕೆಗೊಂಡು ಬಂದಿದ್ದೇವೆ. ಈ ಪ್ರಕರಣದಿಂದಾಗಿ ಜನರು ಗೊಂದಲಕ್ಕೀಡಾಗಿದ್ದಾರೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟಿ ತಮ್ಮ ಸಹಮತವನ್ನು ವ್ಯಕ್ತಪಡಿಸಿದರು.)**

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ನಾನು ಯಾರನ್ನೋ ಖುಷಿಪಡಿಸುವುದಕ್ಕೆ ಈ ಮಾತುಗಳನ್ನು ಹೇಳುತ್ತಿಲ್ಲ.

**(ಗೊಂದಲ)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಸನ್ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ವಿರೋಧ ಪಕ್ಷದ ಸದಸ್ಯರು ಮಾತನಾಡುವುದಕ್ಕೆ ಅವಕಾಶವನ್ನೇ ನೀಡುವುದಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರವಾಗಿದೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹಳ ಹಿಂದಿನಿಂದಲೂ ಒಳ್ಳೆಯ ಮತ್ತು ಕೆಟ್ಟ ಕೆಲಸಗಳು ನಡೆದಿರುವುದನ್ನು ನಾವು ನೋಡಿದ್ದೇವೆ. ಸದನದೊಳಗೆ ನಾವು ನಮ್ಮನಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತೇವೆ. ಸದನದ ಹೊರಗೆ, ನಾವುಗಳು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುತ್ತೇವೆ. ಕೆಲವೊಮ್ಮೆ ಸದನದಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾತ್ರ ಬೇಕಾಗಿಯೇ ಯಾರನ್ನೋ ದೂಷಣೆ ಮಾಡುವುದು, ಯಾರದೋ ಮೇಲೆ ಆರೋಪಗಳನ್ನು ಮತ್ತು ಅಪವಾದಗಳನ್ನು ಹೊರೆಸುವುದನ್ನು ಸಹ ನಾವು ನೋಡಿದ್ದೇವೆ. ಆದರೆ, ಅಪವಾದ ಮಾಡಿರುವಂತಹ ಎಷ್ಟೋ ಜನರು ನಮ್ಮ ಪಕ್ಷದಿಂದ ಆ ಪಕ್ಷಗಳಿಗೆ ಹೋಗಿದ್ದಾರೆ ಮತ್ತು ಆ ಪಕ್ಷಗಳಿಂದ ನಮ್ಮ ಪಕ್ಷಕ್ಕೆ ಬಂದಿದ್ದಾರೆ. ಸಂದರ್ಭಕ್ಕನುಸಾರವಾಗಿ ಮಾತನಾಡುವುದನ್ನು ನಾವು ಬಿಡಬೇಕಾಗಿದೆ, ನಾವು ನ್ಯಾಯವಾಗಿರುವ ವಿಚಾರಗಳನ್ನು ಹೇಳಬೇಕಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರರವರು ಒಂದು ಚೀಟಿಯನ್ನು ಮಾನ್ಯ ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರ ಮೇಜಿನ ಮೇಲಿರಿಸಿ, ಅವರ ಗಮನಸೆಳೆದರು.)**

**ಶ್ರೀ ಹೆಚ್.ಎಂ.ರೇವಣ್ಣ:–** ಸನ್ಮಾನ್ಯ ಸಭಾಪತಿಯವರೇ, ಚೀಟಿ ಬಂದ ಮೇಲೆ ಮಾನ್ಯ ಪ್ರಾಣೇಶ್‌ರವರು ಬೇರೆ ರೀತಿ ಮಾತನಾಡುತ್ತಾರೆ. ಚೀಟಿಯಲ್ಲಿ ಬರೆದಿರುವುದನ್ನು ನೋಡಿಕೊಂಡು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ಆ ಚೀಟಿಯಲ್ಲಿರುವ ವಿಚಾರವನ್ನು ನಾನೇ ಕೊನೆಯಲ್ಲಿ ಮಾತನಾಡಬೇಕೆಂದಿದ್ದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರನ್ನು ಪರಸ್ಪರ ವಿಶ್ವಾಸಕ್ಕೆ ತೆಗೆದುಕೊಂಡು ಈ ತನಿಖೆಯನ್ನು ನಡೆಸಬೇಕಾಗಿದೆ. ಇವತ್ತು ಪೀಠದಲ್ಲಿ ಕುಳಿತಿರುವವರಿಗೆ ಸಂಬಂಧಪಟ್ಟ ವಿಚಾರ ಬಂದಿರುವುದರಿಂದ ಎರಡೂ ಕಡೆಯವರು ಪರಸ್ಪರ ವಿಚಾರ ಮಾಡಿ ತನಿಖೆಗೆ ಒಪ್ಪಿಸಬೇಕಾಗುತ್ತದೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರ್‌ರವರು ಕೊಟ್ಟಿರುವ ಚೀಟಿಯನ್ನು ನೋಡಿಕೊಂಡು ಅವರು ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ಬಂದಿರುವಂತಹ ಚೀಟಿ ನೋಡಿಕೊಂಡು ಮಾತನಾಡುವಂತಹ ವ್ಯಕ್ತಿ ನಾನೆಂದು ಅವರುಗಳು ತಿಳಿದುಕೊಂಡಿದ್ದರೆ, ಅದು ಅವರ ತಪ್ಪು ಅಭಿಪ್ರಾಯವಾಗಿದೆ. ನನಗೆ ನನ್ನದೇ ಆಗಿರುವಂತಹ ಸ್ವಂತಿಕೆಗಳಿವೆ. ಪ್ರತಿಯೊಬ್ಬರಿಗೂ ಅವರದೇ ಆಗಿರುವ ಸ್ವಂತಿಕೆಗಳಿರುತ್ತವೆ. ನನ್ನ ಸ್ವಂತಿಕೆಯ

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅನುಸಾರವಾಗಿ ನಾನು ಮಾತನಾಡುತ್ತಿದ್ದೇನೆ. ಇದರ ಬಗ್ಗೆ ನ್ಯಾಯಯುತವಾಗಿರುವ ತನಿಖೆಯಾಗಬೇಕಾಗಿದೆ. ಸರ್ಕಾರದ ಅಧೀನದಲ್ಲಿರುವ ಸಂಸ್ಥೆಯಿಂದ ಈ ಪ್ರಕರಣದ ತನಿಖೆಯಾದರೆ ನ್ಯಾಯ ಸಿಗುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಸನ್ಮಾನ್ಯ ಸಭಾಪತಿಯವರೇ, ಚೀಟಿಯಲ್ಲಿರುವ ವಿಚಾರವನ್ನು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಪೂರ್ಣಗೊಳಿಸುವುದಕ್ಕೂ ಮೊದಲೇ ಅವರು ತಮ್ಮ ವಿಚಾರಗಳನ್ನು ಮಂಡಿಸುವುದು ಸರಿಯಲ್ಲ. ಈ ವಿಚಾರದಲ್ಲಿ ಎಲ್ಲರ ಸಹಕಾರ ಬೇಕಾಗಿದೆ. ಇಲ್ಲಿ ಎಲ್ಲರೂ ಅಪ್ರಾಮಾಣಿಕರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ನಮ್ಮ ಭಾಗದಲ್ಲಿಯೂ ಬೇಕಾದಷ್ಟು ಜನ ಪ್ರಾಮಾಣಿಕರಿದ್ದೇವೆ, ಆ ಭಾಗದಲ್ಲಿಯೂ ಸಾಕಷ್ಟು ಜನ ಪ್ರಾಮಾಣಿಕರಿದ್ದಾರೆ. ಇಲ್ಲಿ ನಮಗೆ ನ್ಯಾಯಬೇಕಾಗಿದೆ. ಒಂದು ಭಾಗವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ನ್ಯಾಯ ಕೊಡುತ್ತೇವೆಂದರೆ, ನ್ಯಾಯ ಸಿಗುವುದಕ್ಕೆ ಸಾಧ್ಯವಿದೆಯೇ? ಆದ್ದರಿಂದ ಎಸ್.ಐ.ಟಿ. ತನಿಖೆಯಿಂದ ನ್ಯಾಯ ಒದಗಿಸಿಕೊಡುತ್ತೇವೆಂದರೆ ಅದು ತಪ್ಪಾಗುತ್ತದೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಪ್ರಾರಂಭ ಮಾಡಿದಂತಹ ಸಂದರ್ಭದಲ್ಲಿ ಆ ಭಾಗದ ಸದಸ್ಯರು ಮೇಜು ತಟ್ಟಿ ಸ್ವಾಗತಿಸಿದರು. ಈಗ ಇರುವಂತಹ ವಿಚಾರಗಳನ್ನು ನಾನು ಉಲ್ಲೇಖ ಮಾಡಿ ಮಾತನಾಡುತ್ತಿರುವ ಸಂದರ್ಭದಲ್ಲಿ ಅವರು ಅದನ್ನು ವಿರೋಧಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಮುಕ್ತಾಯಗೊಳಿಸುವುದಕ್ಕೂ ಮೊದಲು ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಸರ್ಕಾರದ ಮೇಲೆ ಮತ್ತು ಪೀಠದ ಮೇಲೆ ನಂಬಿಕೆ ಬರಬೇಕಾದರೆ, ಒಂದು ಭಾಗಕ್ಕೆ ಪರವಾದ ತನಿಖೆಗಳು ಆಗಬಾರದು. ನಮ್ಮವರು ಯಾವ ತಪ್ಪು ಮಾಡಿಲ್ಲವೆನ್ನುವ ವಿಶ್ವಾಸ ನಮಗಿದೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ. ನ್ಯಾಯಯುತವಾದ ತನಿಖೆಯಾಗಬೇಕೆನ್ನುವುದು ನಮ್ಮ ಅಭಿಪ್ರಾಯವಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ವೆಂಕಟರಾವ್ ನಾಡಗೌಡ(ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಒಂದು ಸ್ಪಷ್ಟನೆಯನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು, 'ನಾವು ತನಿಖಾ ಸಂಸ್ಥೆಯನ್ನು ನೇಮಿಸುವುದರ ಬಗ್ಗೆ ವಿರೋಧ ಪಕ್ಷದವರಿಗೆ ವಿಶ್ವಾಸವಿಲ್ಲದಿದ್ದರೆ, ಪೀಠವೇ ತನಿಖಾ ಸಂಸ್ಥೆಯನ್ನು ನೇಮಕ ಮಾಡಲಿ' ಎಂದು ಹೇಳಿದ್ದಾರೆ. ಆದರೆ, ಪೀಠ, 'ನಾನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ನೀವೇ ಮಾಡಬೇಕು' ಎಂದು ಹೇಳಿದೆ. ಯಾರು ತನಿಖಾ ಸಂಸ್ಥೆಯನ್ನು ನೇಮಕ ಮಾಡಿದರೂ ಇರುವಂತಹ ಅಧಿಕಾರಿಗಳನ್ನು ಬಳಸಿಕೊಂಡೇ ದಾಖಲೆಗಳನ್ನು ತರಬೇಕಾಗುತ್ತದೆ. ಮಹಾರಾಷ್ಟ್ರ ರಾಜ್ಯದ ಅಧಿಕಾರಿಗಳನ್ನು ಕರೆದುಕೊಂಡು ಬಂದು ದಾಖಲೆಗಳನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ನಮ್ಮ ಸ್ಥಾನದಲ್ಲಿದ್ದರೂ, ಅದೇ ಕೆಲಸವನ್ನು ಮಾಡುತ್ತಿದ್ದರು. ಇರುವಂತಹ ಅಧಿಕಾರಿಗಳನ್ನು ಬಳಸಿಕೊಂಡೇ ದಾಖಲೆಗಳನ್ನು ತರಿಸಿಕೊಳ್ಳಬೇಕಾಗುತ್ತದೆ. ಅವರು ನಮ್ಮ ಸ್ಥಾನದಲ್ಲಿದಿದ್ದರೆ, ಮಹಾರಾಷ್ಟ್ರ ರಾಜ್ಯದ ಅಧಿಕಾರಿಗಳನ್ನು ಬಳಸಿಕೊಂಡು ದಾಖಲೆಗಳನ್ನು ತರಿಸಿಕೊಳ್ಳುತ್ತಿದ್ದರೇ?

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಸನ್ಮಾನ್ಯ ಸಭಾಪತಿಯವರೇ, ನಿಯಮ 342ರಡಿಯಲ್ಲಿ ಚರ್ಚೆ ಪ್ರಾರಂಭವಾಗಿದೆಯೇ?

**(ಗೊಂದಲ)**

**ಶ್ರೀ ವೆಂಕಟರಾವ್ ನಾಡಗೌಡ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಅಧೀನದಲ್ಲಿರುವ ತನಿಖಾ ಸಂಸ್ಥೆಯನ್ನು ಬಳಸಿಕೊಂಡು ತನಿಖೆ ಮಾಡಬೇಕೆನ್ನುವುದು ನಮ್ಮ ಅಭಿಲಾಷೆಯಲ್ಲ. ನಾವು ಈ ಬಗ್ಗೆ ಹಠ ಮಾಡುತ್ತಿಲ್ಲ. ಅದು ಕೆಳಮನೆಯ ಪೀಠದ ಆದೇಶವಾಗಿದೆ. ನಾವು ಯಾವ ಸಂಸ್ಥೆಯನ್ನು ಬಳಸಿಕೊಳ್ಳಬೇಕೆಂದು ತಾವೇ ಹೇಳಬೇಕಾಗಿದೆ.

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಚರ್ಚೆ ಪ್ರಾರಂಭವಾಗಿದ್ದರೆ, ನಾವು ಸಹ ಚರ್ಚೆಯಲ್ಲಿ ಭಾಗವಹಿಸುತ್ತೇವೆ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ವೆಂಕಟರಾವ್ ನಾಡಗೌಡಃ–** ಸನ್ಮಾನ್ಯ ಸಭಾಪತಿಯವರೇ, ಇದು ಚರ್ಚೆಗೆ ಅವಕಾಶ ಕೊಡುವ ಪ್ರಶ್ನೆಯಲ್ಲ. ನಾನು ಲಾಜಿಕ್ ಬಗ್ಗೆ ಮಾತನಾಡುತ್ತಿದ್ದೇನೆ. ನಾನು ಸರ್ಕಾರದ ಬಗ್ಗೆ ಮಾತನಾಡುತ್ತಿದ್ದೇನೆ. ಚರ್ಚೆಗೆ ಸೂಕ್ತ ಅವಕಾಶವನ್ನು ನೀಡಿದರೆ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್ಃ–** ಸನ್ಮಾನ್ಯ ಸಭಾಪತಿಯವರೇ, ನಾನು 'ಪಾಯಿಂಟ್ ಆಫ್ ಆರ್ಡರ್' ಅನ್ನು vaise ಮಾಡುತ್ತಿದ್ದೇನೆ. ಯಾವ ನಿಯಮಾವಳಿಗಳಡಿಯಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವುದು ಈಗ ಸದನದ ಮುಂದೆ ಚರ್ಚೆಗಿರುವ ವಿಷಯವಾಗಿದೆ. ಆದ್ದರಿಂದ, ಯಾವ ಸಂಸ್ಥೆಯ ಮೂಲಕ ತನಿಖೆ ಮಾಡಿಸಬೇಕೆನ್ನುವ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಯಾವ ನಿಯಮಾವಳಿಗಳಡಿಯಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ ಎನ್ನುವುದರ ಬಗ್ಗೆ ಮಾತ್ರ ಅವರು ಮಾತನಾಡಬೇಕಾಗಿದೆ.

**(ಗೊಂದಲ)**

**ಶ್ರೀ ವೆಂಕಟರಾವ್ ನಾಡಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ನವರು ಮಾತನಾಡಿದ ಕಾರಣಕ್ಕೆ ನಾನು ಮಾತನಾಡಿದೆ.

**ಸಭಾಪತಿಯವರುಃ–** ಅವರು ಮಾತನಾಡಬಾರದು, ತಾವು ಮಾತನಾಡಬಾರದು, ಯಾರು ಮಾತನಾಡಬಾರದು.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ನಿಯಮದ ಬಗ್ಗೆ ಮಾನ್ಯ ಆಯನೂರು ಮಂಜುನಾಥ್‌ರವರು ಪ್ರಸ್ತಾಪ ಮಾಡಲಿಲ್ಲ. ಬೇರೆಯವರು ಮಾತನಾಡುವ ಸಂದರ್ಭದಲ್ಲಿ ಮಾತ್ರ ನಿಯಮಗಳ ಬಗ್ಗೆ ಉಲ್ಲೇಖ ಮಾಡುತ್ತಿದ್ದಾರೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಅರುಣ ಶಹಾಪುರಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರಿ ದಾರಿಯಲ್ಲಿ ನಮಗೆ ಮಾರ್ಗದರ್ಶನ ಮಾಡಬೇಕಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡಿದರೆ, ವಿಷಯಕ್ಕೆ ಮಾತ್ರ ಸೀಮಿತವಾಗಿ ಮಾತನಾಡಬೇಕೆಂದು ಹೇಳುತ್ತಾರೆ. ಮಾನ್ಯ ಪ್ರಾಣೇಶ್‌ರವರು ಎಷ್ಟೊಂದು ಸಲಹೆಸ್ಸೂಚನೆಗಳನ್ನು ನೀಡುತ್ತಿದ್ದರು ಆಗ ಮಾನ್ಯ ಸದಸ್ಯರಾದ ಶ್ರೀಯುತ ಆಯನೂರು ಮಂಜುನಾಥ್‌ರವರು ಬಹಳ ಸೌಮ್ಯವಾಗಿ ಕುಳಿತುಕೊಂಡು ಕೇಳುತ್ತಿದ್ದರು. ಮಾನ್ಯ ಅರುಣ ಶಹಾಪುರ್‌ರವರು ಮಾನ್ಯ ಪ್ರಾಣೇಶ್‌ರವರಿಗೆ ಕೊಟ್ಟ ಚೀಟಿ ಸರಿಯಾಗಿ ವರ್ಕ್‌ಔಟ್ ಆಗಲಿಲ್ಲ.

**ಶ್ರೀ ಹೆಚ್.ಎಂ.ರಮೇಶ್‌ಗೌಡ(ವಿಧಾನಸಭಾ ಕ್ಷೇತ್ರ)ಃ–** ಸನ್ಮಾನ್ಯ ಸಭಾಪತಿಯವರೇ, ನಿಯಮಗಳಡಿಯಲ್ಲಿ ಚರ್ಚೆ ನಡೆಯಬೇಕೆನ್ನುವ ತಮ್ಮ ಅಭಿಪ್ರಾಯವನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ವ್ಯಕ್ತಪಡಿಸುತ್ತಿದ್ದಾರೆ. ಅದರ ಬಗ್ಗೆ ನಮ್ಮ ಸಹಮತವಿದೆ. ಈಗ ಅವರಿಗೆ ಈ ಸದನದ ಬಗ್ಗೆ ಕಾಳಜಿ ಬಂದಿದೆ. ಸದನ ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೂ ಸ್ವಾರಸ್ಯಕರವಾದ ಚರ್ಚೆಗಳು ನಡೆದಿಲ್ಲ. ವಿರೋಧ ಪಕ್ಷದವರು ಸುಮ್ಮನೆ ಸದನದ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ. ಇದನ್ನು ಅವರುಗಳು ಅರ್ಥ ಮಾಡಿಕೊಳ್ಳಬೇಕಾಗಿದೆ.

**ಸಭಾಪತಿಯವರುಃ–** ಮಾನ್ಯ ರಮೇಶ್‌ಗೌಡರೇ, ನಿಯಮ 342ರಡಿಯಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುತ್ತದೆಯೋ ಇಲ್ಲವೋ ಎನ್ನುವುದರ ಬಗ್ಗೆ ಮಾತನಾಡಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡಃ–** ಸನ್ಮಾನ್ಯ ಸಭಾಪತಿಯವರೇ, ಈ ದಿನ ಬೆಳಗ್ಗೆ ನಾವು ಒಂದು ನೋಟೀಸ್ ಅನ್ನು ತಮಗೆ ಕೊಟ್ಟಿದ್ದೇವೆ, ತಾವು ಅದರ ಬಗ್ಗೆ ಚರ್ಚೆಗೆ ಅವಕಾಶ ಕೊಡುವುದಾಗಿ ಹೇಳಿ, ಚರ್ಚೆಗೆ ಅವಕಾಶವನ್ನು ನೀಡಿದ್ದೀರಿ.

(26) 11–2–2019 4–50 ಪಿಕೆ–ಎಂಡಿ

**ಶ್ರೀ ಹೆಚ್.ಎಂ.ರಮೇಶ್‌ಗೌಡ (ಮುಂದು):–**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇವತ್ತು ಬೆಳಿಗ್ಗೆಯಿಂದ, Print Media and Electronic Media ಗಳಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳ ಬಗ್ಗೆ ಕೆಟ್ಟ ಅಭಿಪ್ರಾಯ ಬರುವ ಹಾಗೆ, ಎಲ್ಲರೂ ಲೂಟಿಕೋರರು, ಲಂಚಕೋರರು ಎನ್ನುವ ರೀತಿಯಲ್ಲಿ ಬಿಂಬಿಸಲಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಮತ್ತು ಮಾನ್ಯ ಸಭಾಧ್ಯಕ್ಷರ ಬಗ್ಗೆ ವಿರೋಧ ಪಕ್ಷದ ಸದಸ್ಯರು ಕೇವಲವಾಗಿ ಮಾತನಾಡಿರುವುದರ ಬಗ್ಗೆ ಎಲ್ಲಾ ದಿನಪತ್ರಿಕೆಗಳಲ್ಲಿ ಬಂದಿದೆ. ಈ ವಿಚಾರವಾಗಿ ಮಾತನಾಡಲು ನಿಯಮಾವಳಿಗಳಲ್ಲಿ ಅವಕಾಶ ಇಲ್ಲ ಎನ್ನುವುದಾದರೆ, ನಿಯಮಾವಳಿಗಳನ್ನು ಬಿಟ್ಟೇ ಈ ಕುರಿತು ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ; ಇದಕ್ಕೆ ಒಂದು ಅಂತ್ಯ ಹಾಡಬೇಕಾಗುತ್ತದೆ, ಪೀಠ ಉತ್ತರವನ್ನು ಕೊಡಬೇಕಾಗುತ್ತದೆ.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಚರ್ಚೆ ಮಾಡಿದ ಮೇಲೆ ಅದಕ್ಕೆ ಉತ್ತರ ಕೊಡುವವರು ಯಾರು?

(ಗೊಂದಲ)

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಪೀಠವೇ ಉತ್ತರ ಕೊಡಬೇಕಾಗುತ್ತದೆ. ವಿರೋಧ ಪಕ್ಷದ ಸದಸ್ಯರು ಏನು ಕೇವಲವಾಗಿ ಮಾತನಾಡಿದ್ದಾರೋ ಅದರ paper cuttings ನ್ನು ನಾನು ಇಟ್ಟುಕೊಂಡಿದ್ದೇನೆ. ಅದನ್ನು ಓದಿದರೆ ನಿಮಗೆಯೇ ಬೇಜಾರು ಆಗುತ್ತದೆ. ಅವರ ಕಡೆಯವರೇ ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ನಾವುಗಳು ಯಾರೂ ಸಹ ಹೆಸರನ್ನು ಪ್ರಸ್ತಾಪ ಮಾಡಲಿಲ್ಲ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ನಾವು ನಿಯಮ 342ರ ಅಡಿಯಲ್ಲಿ ನೋಟಿಸ್‌ನ್ನು ಕೊಟ್ಟಿದ್ದೇವೆ. ಪ್ರಸ್ತಾಪವಾಗುತ್ತಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಚರ್ಚೆಗೆ ಅವಕಾಶ ಕೊಟ್ಟರೆ ಅಂತಿಮವಾಗಿ ಸರ್ಕಾರವೇ ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. As an individual member, we have got all the right to raise an issue. ಇಂತಹ ವಿಚಾರಗಳನ್ನು ಪ್ರಸ್ತಾಪ ಮಾಡುವುದರಲ್ಲಿ ವಿರೋಧ ಪಕ್ಷದ ಸದಸ್ಯರು ಅಥವಾ ಆಡಳಿತ ಪಕ್ಷದ ಸದಸ್ಯರು ಎನ್ನುವ ವ್ಯತ್ಯಾಸ ಇರುವುದಿಲ್ಲ. ಸದನದ ಒಬ್ಬ ಸದಸ್ಯರಾಗಿ ಎಲ್ಲರೂ ಮಾತನಾಡಬಹುದು. ನಮ್ಮ grievances ಹೇಳಿದ ನಂತರ ಮಾನ್ಯ ಸಭಾನಾಯಕರು ಅದಕ್ಕೆ ಉತ್ತರವನ್ನು ಕೊಡಬೇಕು.

**ಶ್ರೀ ರಘುನಾಥರಾವ್ ಮಲ್ಕಾಪುರೆ:–** ಉತ್ತರವನ್ನು ಕೊಡಲು ಮಾನ್ಯ ಸಭಾನಾಯಕರು ಸದನದಲ್ಲಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಉತ್ತರವನ್ನು ಕೊಡುವವರು ಯಾರು ಎಂದು ಹೇಳಿದರೆ, that is not an issue.

(ಗೊಂದಲ)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೆ, ಅವರು ಹೇಳುತ್ತಿರುವುದರಲ್ಲಿ ಯಾವುದೇ ಒಂದು ಸತ್ಯಾಂಶವಿಲ್ಲ. ಚರ್ಚೆ ಸರಿಯಾದ ದಿಕ್ಕಿನಲ್ಲಿ ಹೋಗುವುದಕ್ಕೆ ಅವಕಾಶವಾಗದೇ ಈಗ ಕೇವಲ ಸಮಯ ವ್ಯರ್ಥವಾಗುತ್ತಿದೆ.

**ಡಾ:ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಸದನಕ್ಕೆ ಬಹಳ ಗೌರವ ಇದೆ, ಹಿರಿತನವಿದೆ. ಚಿಂತಕರ ಛಾವಡಿ ಎನ್ನುವ ಬಿರುದು ಕೂಡ ಇದೆ. ಈ ಸದನದಲ್ಲಿ ನಮ್ಮ ಇತಿಮಿತಿಯೊಳಗೆ ಮಾತನಾಡಬೇಕು ಎನ್ನುವುದರ ಬಗ್ಗೆ ಎಲ್ಲರಿಗೂ ಅರಿವು ಇದೆ. ನಮಗೆ ಸಂಬಂಧಪಟ್ಟ ವಿಚಾರ ಯಾವುದು; ನಮಗೆ ಸಂಬಂಧಪಡದ ವಿಚಾರ ಯಾವುದು; ಯಾವುದು ಚರ್ಚೆ ಮಾಡಬೇಕು; ಯಾವುದನ್ನು ಚರ್ಚೆ ಮಾಡಬಾರದು ಎನ್ನುವುದು ನಮ್ಮ ನಿಯಮಾವಳಿಗಳಲ್ಲಿ ಇದೆ. ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ಆಡಳಿತ ಪಕ್ಷದ ಸದಸ್ಯರು ತಮಗೆ ಒಂದು ಅರ್ಜಿ ಕೊಟ್ಟಿದ್ದಾರೆ. ಆ ಅರ್ಜಿಯಲ್ಲಿ ಏನಿದೆ ಎನ್ನುವುದರ ಬಗ್ಗೆ ನಮಗೆ ಗೊತ್ತಿಲ್ಲ. ಆದರೆ ಅವರು ನಿಯಮ 342ರ ಅಡಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಆಗ್ರಹ ಮಾಡುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ತಾವು ಸೂಕ್ಷ್ಮವಾದ ವಿಚಾರವೊಂದನ್ನು ಪ್ರಸ್ತಾಪ ಮಾಡಿದಿರಿ. ನಮ್ಮ ಸದನದ ಸದಸ್ಯರಲ್ಲದವರ ಬಗ್ಗೆ ಚರ್ಚೆ ಮಾಡಿದಾಗ, ಅಂಥವರು ತಮ್ಮ ವಿಚಾರಗಳನ್ನು ಇಡುವುದಕ್ಕೆ ಅವಕಾಶ ಇರುವುದಿಲ್ಲ, ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ ಮತ್ತು ಅವರ ಪರವಾಗಿ defend ಮಾಡಿಕೊಳ್ಳುವವರು ಯಾರು ಎನ್ನುವುದು ಒಂದು ಕಡೆಯಾದರೆ, ಈಗ ಎತ್ತಿರುವ ವಿಚಾರ ಏನಿದೆ, ಅದು ನೇರವಾಗಿ ವಿಧಾಸಭೆಯ ಸಭಾಧ್ಯಕ್ಷರಿಗೆ ಸಂಬಂಧಪಡುತ್ತದೆ. ಈ ಕುರಿತು ಅಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಚರ್ಚೆಯಾಗುತ್ತಿದೆ. ಈ ಸದನದಲ್ಲಿ ಆ ವಿಚಾರವನ್ನು ಚರ್ಚೆ ಮಾಡುವುದು ಸೂಕ್ತವಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ತಾವು ಈ ಸದನದ ಮುಖಾಂತರ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೆ ಮೊದಲು ಬಹಳ ಗಂಭೀರವಾದ ಒಂದು ವಿಚಾರವನ್ನು ಅರ್ಥ ಮಾಡಿಕೊಳ್ಳಬೇಕಿದೆ. ಅಭಿಮನ್ಯುವಿಗೆ ಚಕ್ರವ್ಯೂಹದೊಳಗೆ ಹೋಗುವುದು ಮಾತ್ರ ಗೊತ್ತಿತ್ತು; ಹೊರಗೆ ಬರುವುದು ಗೊತ್ತಿರಲಿಲ್ಲ. ಪ್ರಶ್ನೆ ಎತ್ತಿದವರಿಗೆ, ಪ್ರಶ್ನೆ ಕೇಳಿದವರಿಗೆ ಉತ್ತರವನ್ನು ಪಡೆದುಕೊಳ್ಳುವ ವ್ಯವಸ್ಥೆ ಇರಬೇಕಾಗುತ್ತದೆ. ಇಲ್ಲಿ ಕೇವಲ "Hit and Run" ಎನ್ನುವ ಹಾಗೆ ಆಗಬಾರದು. ಅಭಿಮನ್ಯು ಒಳಗೆ ಹೋದವನು ಹೊರಗೆ ಬರುವುದಕ್ಕೆ ಆಗಲಿಲ್ಲ. ಇಲ್ಲಿ ವಿಷಯ ಚರ್ಚೆಯಾಗಿ, ಆ ಚರ್ಚೆಯನ್ನು ಸಮರ್ಪಕವಾಗಿ logical end ಗೆ ತೆಗೆದುಕೊಂಡು ಹೋಗದೇ, ಎಲ್ಲೋ ಒಂದು ಕಡೆ ನಮ್ಮ ಘನತೆ–ಗೌರವ ಆಭಾಸಕ್ಕೆ ಒಳಗಾಗುವಂತೆ ಆಗಬಾರದು. ಆದ್ದರಿಂದ, ನಿಯಮ 342ರ ನಿಯಮದ ಅಡಿಯಲ್ಲಿ ಕೊಟ್ಟಿರುವ ಅರ್ಜಿಗೆ validity ಇದೆಯೋ ಇಲ್ಲವೋ, ಚರ್ಚೆಗೆ ಅವಕಾಶ ಕೊಡಬಹುದೋ ಇಲ್ಲವೋ ಎನ್ನುವುದರ ಬಗ್ಗೆ ತಾವು ಸೂಕ್ಷ್ಮವಾಗಿ ಅವಲೋಕನ ಮಾಡಿ ಈ ಸದನದ ಎಲ್ಲಾ ಸದಸ್ಯರನ್ನು ಕಾಪಾಡುವ ನಿಟ್ಟಿನಲ್ಲಿ ಆದೇಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಒಂದು ಗಂಭೀರವಾದಂಥ ಚರ್ಚೆಯಲ್ಲಿ ಸಚಿವರಾದ ಶ್ರೀ ಮಹೇಶ್‌ರವರು, ನಾನೇನು ಈ ಮೇಲ್ಮನೆಯ ಸದಸ್ಯನಲ್ಲ, ಆದರೂ ಕೂಡ ಈ ಒಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಘಟನೆ ರಾಜ್ಯ ಮತ್ತು ದೇಶದ ಗಮನ ಸೆಳೆದಿದೆ, ಸಭಾಪತಿಯವರ ಸ್ಥಾನಕ್ಕೆ ಅಗೌರವವಾಗಿದೆ, ಶಾಸಕಾಂಗಕ್ಕೆ, ನ್ಯಾಯಾಂಗಕ್ಕೆ ಅಗೌರವವಾಗಿದೆ. ಶಾಸಕರು ತಲೆ ಎತ್ತಿ ಹೊರಗೆ ಓಡಾಡುವುದು ಕಷ್ಟವಾಗಿದೆ, ಹಾಗಾಗಿ ಮಾನ್ಯ ಐವನ್ ಡಿ'ಸೋಜಾರವರು ಕೊಟ್ಟಿರುವ ಪ್ರಸ್ತಾವನೆ ಏನಿದೆ, ಆ ಕುರಿತು ಚರ್ಚೆಗೆ ಅವಕಾಶ ಕೊಡಬೇಕು ಎಂಬ ಮಾತನ್ನು ಹೇಳಿದರು. ಒಂದು ವೇಳೆ ತಾವು ಚರ್ಚೆಗೆ ಅವಕಾಶ ಮಾಡಿಕೊಡುವುದು ನಿಜವಾದರೆ, ಆ ನಿಟ್ಟಿನಲ್ಲಿ ನಿರ್ಣಯ ಕೊಡುವುದಾದರೆ, ನಮ್ಮದೂ ಒಂದು ಸಲಹೆ ಇದೆ; ವಿನಂತಿ ಇದೆ. ಇವತ್ತೇನು ಶಾಸಕರಿಗೆ ಅಗೌರವ ತರುವಂತಹ ಏನೆಲ್ಲಾ ಘಟನೆಗಳು ನಡೆದಿವೆಯೋ. . . ಇವತ್ತು ವಿಜುಗೌಡ ಪಾಟೀಲ್‌ರವರು 25 ಕೋಟಿ ರೂಪಾಯಿಗಳನ್ನು ಕೊಡಿ, ಎಂಎಲ್‌ಸಿ ಮಾಡುತ್ತಾರೆಂದು ಹೇಳಿದ್ದಾರೆ. . . .

(ಗೊಂದಲ)

**ಶ್ರೀ ವೆಂಕಟರಾವ್ ನಾಡಗೌಡ (ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು):–** ವಿಜುಗೌಡ ಪಾಟೀಲ್ ಯಾರು? ಅವರು ಕೆಳಮನೆಯ ಸದಸ್ಯರಲ್ಲ, ಮೇಲ್ಮನೆಯ ಸದಸ್ಯರೂ ಅಲ್ಲ. ಅವರು ಯಾರು ದಾರಿಯಲ್ಲಿ ಹೋಗುವವರು ಮಾತನಾಡಿದರೆ ಇಲ್ಲಿ ಏಕೆ ಚರ್ಚೆ ಆಗಬೇಕು?

**ಶ್ರೀ ಎಸ್.ವ್ವಿ.ಸಂಕನೂರ:–** ಮಾನ್ಯ ಸಭಾಪತಿಯವರೆ, SIT (Special Investigation Team) ಗೆ ನಮ್ಮ ಒಪ್ಪಿಗೆ ಇಲ್ಲ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೆ, ಅವರು ಚರ್ಚೆಗೆ ಅವಕಾಶ ಕೇಳುತ್ತಿದ್ದಾರೆ. ಚರ್ಚೆಗೆ ಅವಕಾಶ ಕೊಡುವುದಾದರೆ ಯಾರ್‍ಯಾರು ಎಷ್ಟೆಷ್ಟು ಎಲ್ಲೆಲ್ಲಿ ದುಡ್ಡು ಎನ್ನುವುದು ಸಹ ತನಿಖೆಯಾಗಲಿ. ಅವರಿಗೆ 25 ಕೋಟಿ ರೂ. ಕೊಟ್ಟಿರುವುದು, ಇನ್ನೊಬ್ಬರಿಗೆ 30 ಕೋಟಿ ರೂ. ಕೊಟ್ಟಿರುವುದು ತನಿಖೆಯಾಗಲಿ.

**ಶ್ರೀ ಪ್ರಕಾಶ್ ಕೆ.ರಾಠೋಡ್:–** ಪ್ರೀತದ ಮೇಲೆ ಏನು ಆರೋಪವಿದೆ, ಅದು ಸಹ ಚರ್ಚೆಯಾಗಲಿ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೆ, ಬಾಂಬೆಯಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಬೆಂಗಳೂರಿನಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಸದಾಶಿವನಗರದಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಲ್ಲವೂ ಸಹ ತನಿಖೆಯಾಗಲಿ. ಇವರೇ ಎಲ್ಲಾ ಕಡೆ ದುಡ್ಡು ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಎಷ್ಟು ಕೊಟ್ಟರು ಎನ್ನುವುದೂ ಚರ್ಚೆಯಾಗಲಿ . . . .(ಗೊಂದಲ)

**ಶ್ರೀ ಐವಾನ್ ಡಿ'ಸೋಜಾ:–** ಶ್ರೀನಿವಾಸ ಗೌಡರಿಗೆ ಕೇವಲ 5 ಕೋಟಿ ರೂ. ಮಾತ್ರ ಕೊಟ್ಟಿದ್ದಾರೆ, 25 ಕೋಟಿ ರೂ. ಕೊಡಬೇಕು. 5 ಕೋಟಿ ರೂ. ಬಗ್ಗೆ ಚರ್ಚೆಯಾಗುತ್ತದೆಯೇ?

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೆ, ತನಿಖೆಯಾಗುವುದಾದರೆ ಎಲ್ಲವೂ ತನಿಖೆಯಾಗಲಿ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನ ಸಭಾ ಕ್ಷೇತ್ರ):–** ಲೆಹರ್ ಸಿಂಗ್ ಡೈರಿ ಬಗ್ಗೆಯೂ ಚರ್ಚೆಯಾಗಲಿ, ಹವಾಲಾ ಬಗ್ಗೆಯೂ ಚರ್ಚೆಯಾಗಲಿ. ಮೊದಲು ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

(ಗೊಂದಲ)

**ಶ್ರೀ ಟಿ.ಎ.ಶರವಣ:–** ಇಡಿ, ಸಿಡಿ ಎಲ್ಲಾ ಸೃಷ್ಟಿಯಾಗಿದ್ದು ಇವರಿಂದಲೇ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೆ, ಜೆಎಂಎಂ ಬಗ್ಗೆ ಯೋಚನೆ ಮಾಡಿದರೆ ಸೂಟ್‌ಕೇಸ್‌ಗಳೇ ಹೋಗಿತ್ತು. ಅದನ್ನು ಬಿಟ್ಟುಬಿಟ್ಟರೆ ಹೇಗೆ, ಅದನ್ನು ಮರೆಯಬಾರದು.

(ಗೊಂದಲ)

(27)11–02–2019 5.00 ಡಿಎಸ್–ಎಕೆ

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಳೆದ ಒಂದೂವರೆ ಗಂಟೆಯಿಂದ ನಾವು ಒಂದು ವಿಷಯವನ್ನು ಚರ್ಚೆ ಮಾಡಬೇಕೋ ಬೇಡವೋ ಎಂದು ಚರ್ಚೆ ಮಾಡುತ್ತಿದ್ದೇವೆ. ಈ ರೀತಿಯಾದ ವಿಚಿತ್ರ ಚರ್ಚೆಯನ್ನು ನಾನು ಎಂದೂ ನೋಡಿಲ್ಲ.

**ಸಭಾಪತಿಯವರು:–** ಈ ರೀತಿಯ ಚರ್ಚೆಯನ್ನು ನಾನು ನೋಡಿದ್ದೇನೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ತಾವು ಬಹಳ ಹಿರಿಯರು. ತಾವು ನಾಲ್ಕು ಬಾರಿ ವಿಧಾನಸಭೆಯ ಸದಸ್ಯರಾಗಿದ್ದೀರಿ, ವಿಧಾನ ಪರಿಷತ್ತಿನಲ್ಲಿ ಮೂರು ಬಾರಿ ಸದಸ್ಯರಾಗಿದ್ದೀರಿ, ತಾವು ತುಂಬಾ ಹಿರಿಯ ಸದಸ್ಯರಾಗಿದ್ದೀರಿ. ಒಂದು ವಿಷಯದ ಬಗ್ಗೆ ಚರ್ಚೆ ಮಾಡಬೇಕೋ, ಬೇಡವೋ ಎಂದು ಇಷ್ಟೊಂದು ಚರ್ಚೆ ಮಾಡುತ್ತಿರುವುದನ್ನು ನಾನಂತೂ ನೋಡಿಲ್ಲ. ಮಾನ್ಯ ಐವನ್ ಡಿ'ಸೋಜಾ ರವರು ಬತ್ತಳಿಕೆಯಿಂದ ಒಂದು ಹೊಸ ಬಾಣವನ್ನು ಬಿಟ್ಟಿದ್ದಾರೆ. ಈ ವಿಧಾನ ಪರಿಷತ್ತಿನಲ್ಲಿ ನಿಯಮ 342 ರಲ್ಲಿ ಚರ್ಚೆ ಮಾಡಬೇಕೆಂದು ಕೇಳಿರುವುದು ನನ್ನ ಅನುಭವಕ್ಕಂತೂ ಯಾವತ್ತೂ ಬಂದಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ,...

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಪ್ರಕಾಶ್ ರಾಥೋಡ್‌ರವರು sportsman ಹಾಗೂ ಬುದ್ಧಿಜೀವಿಗಳು. ಅವರು ಇಲ್ಲಿ spin ಮಾಡಿದರೆ ಹೇಗೆ?

ಮಾನ್ಯ ಸಭಾಪತಿಯವರೇ, ವಿಶಿಷ್ಟ ಮತ್ತು ವಿಚಿತ್ರವಾದ ಚರ್ಚೆ ಇಲ್ಲಿ ನಡೆಯುತ್ತಿದೆ. ನಮ್ಮ ಈ ಸದನದಲ್ಲಿ ಯಾವುದೇ ಕಾನೂನಿನಲ್ಲಿ, ಯಾವುದೇ ಸಂದರ್ಭದಲ್ಲಿ, ಯಾವುದೇ ಅಧಿವೇಶನದಲ್ಲಿ ಪ್ರಶ್ನೋತ್ತರ ಅವಧಿ



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಗಿಯುವುದಕ್ಕಿಂತ ಮೊದಲು ಬೇರೆ ವಿಷಯ ಚರ್ಚೆ ಮಾಡಿರುವುದನ್ನು ನಾನು ನೋಡಿಲ್ಲ. ಇಂತಹ ವಿಷಯಗಳು ಪ್ರಶ್ನೋತ್ತರ ವೇಳೆಯ ನಂತರ ಚರ್ಚೆಯಾಗಿರುವುದನ್ನು ನೋಡಿದ್ದೇನೆ. ಆದರೆ ಪ್ರಶ್ನೋತ್ತರವನ್ನು ತೆಗೆದುಕೊಳ್ಳದೆ ಬೇರೆ ವಿಷಯಗಳನ್ನು ತೆಗೆದುಕೊಂಡಿರುವ ಉದಾಹರಣೆಗಳಿಲ್ಲ. ನಾನು ತಮಗೆ ವಿನಂತಿ ಮಾಡುವುದೇನೆಂದರೆ, ಈಗ ಪ್ರಶ್ನೋತ್ತರವನ್ನು ಕೈಗೆತ್ತಿಕೊಳ್ಳಿ. ನಂತರ ಈ ವಿಷಯವನ್ನು ಯಾವ ನಿಯಮದಡಿ ತೆಗೆದುಕೊಳ್ಳಬೇಕೆಂದು ಚರ್ಚೆ ಮಾಡೋಣ. ನಾನು ಏಕೆ ಚರ್ಚೆ ಬೇಡ ಎಂದು ಹೇಳುತ್ತಿದ್ದೇನೆಂದರೆ, ಈಗಾಗಲೇ ವಿಧಾನಸಭೆಯಲ್ಲಿ ಚರ್ಚೆ ಮಾಡುತ್ತಿದ್ದಾರೆ, ಚರ್ಚೆ ಮಾಡಿ ಒಂದು ಹಂತಕ್ಕೆ ಬಂದು, ಯಾವುದೋ ಒಂದು ತನಿಖೆಯನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. S.I.T (Special Investigation Team) ಯಿಂದ ತನಿಖೆ ಮಾಡಬೇಕೆಂದು ತೀರ್ಮಾನ ಆಗಿದೆ ಎಂದುಕೊಳ್ಳಿ, ನಾವು ಈ ಸದನದಲ್ಲಿ ಚರ್ಚೆ ಮಾಡಿ ಎಸ್.ಐ.ಟಿ. ಯಿಂದ ತನಿಖೆಯಾಗುವುದು ಬೇಡ, ಸದನ ಸಮಿತಿಗೋ, ಲೋಕಾಯುಕ್ತಕ್ಕೋ, ನ್ಯಾಯಾಂಗ ತನಿಖೆಗೋ ಅಥವಾ ಸಿಬಿಐ ಗೆ ಒಪ್ಪಿಸೋಣ ಎಂದು ನಾವು ಇಲ್ಲಿ ನಿರ್ಣಯ ಮಾಡಿದರೆ ಅದು ಅನುಷ್ಠಾನವಾಗುತ್ತದೆಯೇ? ಆ ಮನೆಯಲ್ಲಿ ನಡೆದಂತಹ ಚರ್ಚೆಗೆ ತದ್ವಿರುದ್ಧವಾಗಿ ನಡೆಯಬೇಕೆನ್ನುವ ಉದ್ದೇಶ ನಮಗಿದೆಯೇ? ಹಾಗಾಗಿ ಇದು ಅತೀ ಸೂಕ್ಷ್ಮವಾದ ವಿಷಯವಾಗಿರುವುದರಿಂದ ಈ ರಾಜ್ಯದ ಪ್ರಜಾ ಪ್ರತಿನಿಧಿಗಳ ಬಗ್ಗೆ ಮತ್ತು ನಮ್ಮ ರಾಜ್ಯದ ಬಗ್ಗೆ ನಮಗೂ ಗೌರವವಿದೆ. ಆದರೆ ಏನಾಗಿದೆ ಎಂದರೆ, ಬೆಕ್ಕು ನೂರು ಇಲಿ ತಿಂದು ಹಜ್ ಯಾತ್ರೆಗೆ ಹೋಗಿತ್ತಂತೆ, ಹಾಗೆ ಈ ಭ್ರಷ್ಟಾಚಾರವನ್ನು ಯಾರು ಕಲಿಸಿದ್ದಾರೆ ಅವರೇ ಭ್ರಷ್ಟಾಚಾರದ ಬಗ್ಗೆ ಆರೋಪ ಮಾಡುತ್ತಿರುವುದು ಸೂಕ್ತವಲ್ಲ. ದಯವಿಟ್ಟು ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಾರದು. ಈ ವಿಷಯ ಚರ್ಚೆಗೆ ತೆಗೆದುಕೊಳ್ಳುವುದಾದರೆ ಮೊದಲು ಪ್ರಶ್ನೋತ್ತರವನ್ನು ನಡೆಸಿ, ನಂತರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎಂಬುದರ ಬಗ್ಗೆ ತೀರ್ಮಾನ ಮಾಡಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಚರ್ಚೆಯನ್ನು ನೋಡಿದಂತಹ ಸಂದರ್ಭದಲ್ಲಿ we are all beating around the bush ಎಂದು ಅನಿಸುತ್ತಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನನ್ನದು point of order ಇದೆ. ಈಗ ನಿಯಮ 342 ಅಡಿಯಲ್ಲಿ ಚರ್ಚೆ ತೆಗೆದುಕೊಳ್ಳಬೇಕೆಂದು ಚರ್ಚೆ ನಡೆಯುತ್ತಿದೆಯೋ ಅಥವಾ ಈ ವಿಷಯದ ಮೇಲೆ ಚರ್ಚೆ ಪ್ರಾರಂಭ ಆಗಿದೆಯೇ ಎಂಬುದನ್ನು ಸ್ಪಷ್ಟ ಮಾಡಬೇಕಾಗಿದೆ. ಇದೇ ವಿಚಾರವನ್ನು ಮಾನ್ಯ ಆಯನೂರು ಮಂಜುನಾಥ್‌ರವರು ಮೂರು ಸಲ ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಶ್ರೀಕಂಠೇಗೌಡರೇ, ತಾವು ಈಗ ನಿಯಮ 342 ಬಗ್ಗೆಯೇ ಮಾತನಾಡಿದ್ದೀರಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾತನಾಡುವುದಕ್ಕೆ ನನ್ನದೇನೂ ಅಡ್ಡಿಯಿಲ್ಲ. ನೀವು ಮಾತನಾಡಿ, ನಾವು ಮಾತನಾಡೋಣ, ಸಮಸ್ಯೆ ಏನು ಇಲ್ಲ. ನಮ್ಮದೇನು ಅಡ್ಡಿಯಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಶಿಕ್ಷಣ ಕ್ಷೇತ್ರದಿಂದ ಬಂದಿರತಕ್ಕಂಥ ಮಾನ್ಯ ಶ್ರೀಕಂಠೇಗೌಡರು ನೀವು ಮಾತನಾಡಿ, ನಾವು ಮಾತನಾಡೋಣ ಎಂದು ಹೇಳಿದರು. ಇದು ದೂರದರ್ಶನದಲ್ಲಿ, ಪತ್ರಿಕೆಗಳಲ್ಲಿ ನಾಳೆ ಬರುತ್ತದೆ. ಈಗ ಎಲ್ಲಾ ಲೈವ್ ಹೋಗುತ್ತಿದೆ. Unnecessary ಆಗಿ ಸಮಯ ವ್ಯರ್ಥವಾಗಬೇಕೇ?

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಈ ರೀತಿಯ ಗಂಭೀರವಾದ ವಿಚಾರವನ್ನು unnecessary ಎಂದು ಹೇಳುವುದು ಸರಿಯಲ್ಲ. ಇಡೀ ಶಾಸಕಾಂಗಕ್ಕೆ ಅಪಚಾರವಾಗುವಂತಹ ಕೆಲಸ ಮಾಡಿದ್ದಾರೆ. Unnecessary ಎಂದು ಏಕೆ ಹೇಳುತ್ತಿದ್ದಾರೆ? ಸಂವಿಧಾನದ ಬಗ್ಗೆ, ಕಾನೂನಿನ ಬಗ್ಗೆ ತಿಳುವಳಿಕೆ ಇಲ್ಲದೆ ಈ ರೀತಿ ಮಾತನಾಡುತ್ತಿದ್ದಾರೆ. Unnecessary ಎಂದು ಯಾವ ಅರ್ಥದಲ್ಲಿ ಹೇಳುತ್ತಿದ್ದಾರೆ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ ರೀತಿ ಚರ್ಚೆ ಮಾಡುವುದರ ಬದಲು ಉದಾಹರಣೆಗೆ, ಮಾನ್ಯ ರಘುನಾಥ್ ಮಲ್ಕಾಪೂರೆರವರು ಹೇಳಿದರು, ಈ ಸದನದಲ್ಲಿ ಚರ್ಚೆಯಾಗುವಂತಹ ವಿಷಯಗಳಿಗೆ ಉತ್ತರ ಕೊಡುವುದು ಯಾರು, ಗುರಿ ಏನು, ನಿರ್ಣಯ ಮಾಡುವುದು ಹೇಗೆ, ಕೆಳಮನೆಯಲ್ಲಿ ಎಸ್.ಐ.ಟಿ. ಯವರಿಂದ ತನಿಖೆ ಮಾಡುವುದಕ್ಕೆ ವಹಿಸಿದರು ಅಂದುಕೊಳ್ಳಿ, ನಾವು ಸಿ.ಬಿ.ಐ. ಗೆ ಕೊಡಬೇಕೆಂದು ತೀರ್ಮಾನ ಮಾಡುತ್ತೇವೆ, ಅದು ಆಗುತ್ತದೆಯೇ? ನಾವು ನ್ಯಾಯಾಂಗ ತನಿಖೆಗೆ ವಹಿಸಬೇಕೆಂದು ಒಕ್ಕೊರಲಿನಿಂದ ಹೇಳುತ್ತೇವೆ ಅಂದುಕೊಳ್ಳೋಣ, ತನಿಖೆಗೆ ಕೊಡುವುದಕ್ಕಾಗುತ್ತದೆಯೇ? ಆಗುವುದಿಲ್ಲ. ನಾನು ಮತ್ತೊಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ, ಇಡೀ ದೇಶಕ್ಕೆ ಬಹಳ ಬೇಕಾಗಿರುವಂತಹ ವಿಷಯ. ಅವರು ಈ ಸದನದ ಸದಸ್ಯರೇ ಅಲ್ಲ. ಇದು ಕೆಳಮನೆಯ ವಿಷಯ. ಕೆಳಮನೆಯ ವಿಷಯಗಳೆಲ್ಲಾ ಬಹಳ ಪ್ರಮುಖವಾದದ್ದು, ನಾಡಿಗೆ ಹಿತವಾಗಿರುವಂಥದ್ದು, ನಮಗೆ ಹಿತವಾಗಿರುವಂಥದ್ದನ್ನು ನಾಳೆ ಚರ್ಚೆ ಮಾಡುತ್ತೇವೆಯೇ? ಹಾಗಾದರೆ ನಾಳೆ ನಾನು ಪ್ರಸ್ತಾಪ ಮಾಡುತ್ತೇನೆ ಅಥವಾ ಮತ್ತೊಬ್ಬ ಆಡಳಿತ ಪಕ್ಷದವರು ಪ್ರಸ್ತಾಪ ಮಾಡಬಹುದು, ಇವತ್ತು ಈ ವಿಷಯಕ್ಕೆ ಪ್ರಶ್ನೋತ್ತರ ವೇಳೆಗಿಂತ ಮುಂಚೆ ಅವಕಾಶ ಕೊಡುವುದಾದರೆ ನಾಳೆ ನಾನು ಪ್ರಸ್ತಾಪ ಮಾಡುತ್ತೇನೆ, ಆಗ ನನಗೂ ಅವಕಾಶ ಕೊಡಬೇಕಾಗುತ್ತದೆ. ನಿನ್ನೆ ಅವಕಾಶ ಕೊಟ್ಟಿದ್ದೀರಲ್ಲಾ ಇವತ್ತು ಅವಕಾಶ ಕೊಡಿ ಎಂದು ಕೇಳುತ್ತೇನೆ.

**Sri PRAKASH K. RATHOD:** Threaten ಮಾಡುತ್ತಿದ್ದೀರಾ?

**ಶ್ರೀ ಎನ್.ರವಿಕುಮಾರ್:–** ನಾನು threaten ಮಾಡುತ್ತಿಲ್ಲ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಸ್ಪೀಕರ್ ಮೇಲೆ ಮಾಡಿರುವ ಆಪಾದನೆಯ ಬಗ್ಗೆ ಪ್ರಸ್ತಾಪ ಮಾಡುತ್ತಿರುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಅವರು ಸ್ಪೀಕರ್‌ಗೆ ಏನು ಹೇಳಿದರೂ ಸಹಾ ಅವರು ಕೆಳಮನೆಯವರು, ಬೇರೆಯವರು ಎಂದು ನಾವು ಸುಮ್ಮನೆ ಕುಳಿತುಕೊಳ್ಳಬೇಕೇ?

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, raise ಮಾಡುವುದು ನಮ್ಮ ಹಕ್ಕು. ಮಾತನಾಡವುದಕ್ಕೆ ಅವಕಾಶ ಕೊಡುವುದು ಬಿಡುವುದು ನಿಮ್ಮ ಹಕ್ಕು.

(ಗೊಂದಲ)

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಸ್ಪೀಕರ್ ಮೇಲೆ ಮಾತನಾಡಿರುವುದರಿಂದ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಲೇಬೇಕಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ತಾವು ನಮ್ಮ ರಕ್ಷಣೆಗೆ ಬಂದು ಚರ್ಚೆಗೆ ಅವಕಾಶ ಕೊಡಬೇಕು.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ನಾನು ನಾಳೆ ಮತ್ತೊಂದು ವಿಷಯ ತರುತ್ತೇನೆ ಎಂದು ಹೇಳಿದರೆ ಅದರಲ್ಲಿ ಅರ್ಥ ಇದೆಯೇ? ಇಂತಹ ಘಟನೆ ಯಾವಾಗಲೂ ಆಗಿರಲಿಲ್ಲ.

(ಗೊಂದಲ)

(028) 11–02–2019/5–10/ಬಿಕೆಪಿ–ಎಕೆ

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ತಾವು ನಮಗೆ ಚರ್ಚೆಗೆ ಅವಕಾಶವನ್ನು ಕೊಡುತ್ತೀರೋ ಅಥವಾ ಈ ರೀತಿ ಮಾತನಾಡಲಿಕ್ಕೆ ಅವಕಾಶವನ್ನು ಕೊಡುತ್ತೀರೋ ನೋಡಿ. ಕೆಳಮನೆಯಲ್ಲಿ ಆಗಿರುವಂತಹ ತೀರ್ಮಾನಗಳನ್ನು ಇಲ್ಲಿ ಒಪ್ಪದೇ ವಾಪಸ್ಸು ಹೋಗಿರುವಂತಹ ನಿದರ್ಶನಗಳು ಬಹಳಷ್ಟಿವೆ. ತಾವು ಹಿರಿಯರಿದ್ದು, ತಮಗೆ ಈ ವಿಚಾರ ಗೊತ್ತಿದೆ. ನಮ್ಮ ಹಕ್ಕನ್ನು ಇಲ್ಲಿ ಪ್ರತಿಪಾದನೆ ಮಾಡಲಿಕ್ಕೆ curtail ಮಾಡಬಾರದು. ಅವಕಾಶ ಮಾಡಿಕೊಡಬೇಕು. ನಮ್ಮ ಅಭಿಪ್ರಾಯಗಳನ್ನು ಇಲ್ಲಿ ಹೇಳುತ್ತೇವೆ. ಈ ವಿಚಾರವಾಗಿ ಸಿ.ಬಿ.ಐ.ಗೆ ಕೊಡಿ, ಮತ್ತೊಂದಕ್ಕೆ ಕೊಡಿ ಎಂದು ನಾವೇನಾದರೂ ಹೇಳಿದ್ದೇವೆಯೇ? ಇಲ್ಲಿ ವಿಷಯವನ್ನು divert ಮಾಡಬಾರದು.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಸದನಕ್ಕೆ ಹಕ್ಕುಚ್ಯುತಿಯಾಗಿಲ್ಲ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀನಿವಾಸಗೌಡರಿಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು, ಅವರಿಗೆ ಇನ್ನೂ 25 ಕೋಟಿ ರೂಪಾಯಿಗಳನ್ನು ಕೊಡುವುದು ಬಾಕಿ ಇದೆ. ಅವರ ಮನೆಗೆ ಹೋಗಿ 5 ಕೋಟಿ ರೂಪಾಯಿಗಳನ್ನು ಕೊಟ್ಟು ಬಂದಿದ್ದರು. ಶಾಸಕರನ್ನು ಖರೀದಿ ಮಾಡಿದ್ದಾರೆ, ಎರಡು ಮಂದಿಯನ್ನು ಖರೀದಿ ಮಾಡಲಿಕ್ಕೆ ಬಾಕಿ ಇದೆ.

(ಗೊಂದಲ)

**ಡಾ॥ ವೈ.ಎ. ನಾರಾಯಣಸ್ವಾಮಿ:-** ಇಲ್ಲಿ ಯಾರಿಗೆ ಹಕ್ಕುಚ್ಯುತಿಯಾಗಿದೆ ಎಂದು ಹೇಳಿ. ಸದನವನ್ನು misguide ಮಾಡಬೇಡಿ.

(ಗೊಂದಲ)

**ಡಾ॥ ಜಯಮಾಲ :-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಸಭಾನಾಯಕರು ಏನೋ ಹೇಳುವವರಿದ್ದಾರೆ.

**ಡಾ॥ ಜಯಮಾಲ:-** ಮಾನ್ಯ ಸಭಾಪತಿಯವರೇ, ಹಕ್ಕುಚ್ಯುತಿ ಎನ್ನುವಂಥ ವಿಚಾರದಲ್ಲಿ ಎಲ್ಲಾ ಶಾಸಕರಿಗೂ ಜವಾಬ್ದಾರಿ ಇರುತ್ತದೆ. ಎರಡು ಪೀಠಗಳ ಬಗ್ಗೆ ಅಪನಂಬಿಕೆಯನ್ನು ಮೂಡಿಸುವಂತಹದ್ದು ಆಗಿದೆ. ಅದು ಈ ಪೀಠವಾಗಿರಬಹುದು ಅಥವಾ ಕೆಳಮನೆಯ ಪೀಠವಾಗಿರಬಹುದು. ನಾಳೆ ಬಂದು ಈ ಪೀಠದ ವಿಷಯವಾಗಿಯೂ ಹೇಳುತ್ತಾರೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ,

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಶ್ರೀಯುತ ನಾರಾಯಣಸ್ವಾಮಿಯವರನ್ನು ಕುಳಿತುಕೊಳ್ಳಲಿಕ್ಕೆ ಹೇಳಿ. ಮಾನ್ಯ ಸಭಾನಾಯಕರು ಹೇಳುವುದನ್ನು ಕೇಳೋಣ.

**ಡಾ॥ ಜಯಮಾಲ :-** ಮಾನ್ಯ ಸಭಾಪತಿಯವರೇ, ಈ ಪೀಠಕ್ಕೆ ಅವಮಾನವಾಗಿರುವುದಕ್ಕೆ ಜನರು ನಮ್ಮನ್ನು ಸಂಶಯದಿಂದ ನೋಡುತ್ತಿದ್ದಾರೆ. ಇವತ್ತು ಯಾರು ಸಹ ನಮ್ಮನ್ನು ನಂಬುತ್ತಿಲ್ಲ. ಈ ರೀತಿ ಇರುವಾಗ ಇದರ ಬಗ್ಗೆ ಚರ್ಚೆ ಮಾಡುವುದರಲ್ಲಿ ತಪ್ಪೇನೂ ಇರುವುದಿಲ್ಲ. ಇದು ಈ ಮನೆಯ ಪ್ರಶ್ನೆಯಲ್ಲ. ಇದು ಕೆಳಮನೆಯ ಪ್ರಶ್ನೆ. ಚರ್ಚೆ ಮಾಡಲು ನಿಯಮದಲ್ಲಿ ಅವಕಾಶವಿರುವುದಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಚರ್ಚೆ ಮಾಡಲು ಅವಕಾಶ ಕೊಡುವಲ್ಲಿ ತಮಗೆ ವಿಶೇಷ ಅಧಿಕಾರವಿದೆ. ಈ ಸದನದಲ್ಲಿ ಈ ರೀತಿಯ ಚರ್ಚೆಗಳು ಬೇಕಾದಷ್ಟು ಆಗಿವೆ.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಿಯಮಾವಳಿಗಳ ಬಗ್ಗೆ...

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ,...

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ|| ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಿಯಮ 342...

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ನಿಮಗೆ ನಾನು ಮಾತನಾಡಲಿಕ್ಕೆ ಅವಕಾಶ ಕೊಟ್ಟಿರುವುದಿಲ್ಲ.

**ಡಾ||ಜಯಮಾಲ:–** ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಚರ್ಚೆಯಾಗ ಬೇಕೆನ್ನುವಂತಹದ್ದನ್ನು ಬೆಳಿಗ್ಗೆಯಿಂದ ಕೇಳಿಲ್ಲ. ಆದರೆ, ಇದು ಸದಸ್ಯರುಗಳ ಗೌರವದ ಪ್ರಶ್ನೆಯಾಗಿದೆ. ನಮ್ಮನ್ನು ಪ್ರತಿಯೊಬ್ಬರು ಶಂಕೆಯಿಂದ ನೋಡುತ್ತಿದ್ದಾರೆ. ಈ ಅಸ್ತಿತ್ವದ ಪ್ರಶ್ನೆ ಬಂದಾಗ ಸದಸ್ಯರುಗಳೆಲ್ಲರೂ ಈ ಬಗ್ಗೆ ಚರ್ಚೆ ಮಾಡಲು ಕೇಳಿಕೊಂಡಾಗ ಅದಕ್ಕೆ ಅವಕಾಶ ಕೊಡಲು ತಮಗೆ ಅಧಿಕಾರವಿದ್ದು, ತಾವುಗಳು ಅದನ್ನು ಉಪಯೋಗ ಮಾಡಿಕೊಂಡು ಅದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ, ಇಲ್ಲಿ ಸದನದ ಸದಸ್ಯರು ಅದರ ಗೌರವದ ಬಗ್ಗೆ, ಅದರ ಘನತೆಯ ಬಗ್ಗೆ ಬೆಳಕು ಚೆಲ್ಲುವಂತಹ ಕೆಲಸವನ್ನು ಮಾಡಬೇಕೆಂದು ಎಲ್ಲಾ ಮಾನ್ಯ ಸದಸ್ಯರುಗಳು ಸಹ ಕೇಳುತ್ತಿದ್ದಾರೆ. ಸದಸ್ಯರು ಈ ಬಗ್ಗೆ ಕೇಳಿರುವುದರಿಂದ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇನೆ. ಆದ್ದರಿಂದ, ತಮ್ಮ ಅಧಿಕಾರವನ್ನು ಉಪಯೋಗಿಸಿ, ನಮ್ಮ ಸದಸ್ಯರುಗಳಿಗೆ ಮಾತನಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬಹುದಾಗಿದೆ.

**ಡಾ|| ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, Rulings and Observations of the Chair (1956-1976) ನ ಪುಟ ಸಂಖ್ಯೆ 10 ರಲ್ಲಿ ಏನು ಹೇಳುತ್ತದೆ ಎಂದರೆ, ಈ ಮನೆ ಸದಸ್ಯರಲ್ಲದವರ ಬಗ್ಗೆ ಚರ್ಚೆ ಮಾಡುವುದಕ್ಕೆ ರೂಲ್ 261 ರಲ್ಲಿ ಮಾತ್ರ ಅವಕಾಶ ಕೊಡುತ್ತದೆ. Provided, Rule 260(2) ಏನು ಹೇಳುತ್ತದೆ ಎಂದರೆ, ಅವರು ಇಲ್ಲಿ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅವಕಾಶ ಇದ್ದರೆ, ಅದು prevent ಮಾಡುತ್ತದೆ. ಪುಟ ಸಂಖ್ಯೆ 11 ರಲ್ಲಿ ಏನು ಹೇಳಲಾಗುತ್ತದೆ ಎಂದರೆ "...*It is wrong...*". ಆ ರೀತಿಯಲ್ಲಿ ಅವರ ಬಗ್ಗೆ ಸಮರ್ಥನೆ ಮಾಡಿಕೊಳ್ಳುವುದಕ್ಕೆ ನೀವು ಅವಕಾಶ ಕೊಟ್ಟಿದ್ದರೆ ಅದನ್ನು ಹೇಳಬಾರದು ಎಂದು ನಿರ್ದಿಷ್ಟವಾದ ನಿಯಮ ಇದೆ. ಪುಟ ಸಂಖ್ಯೆ 13ರಲ್ಲಿ ಏನು ಹೇಳಲಾಗುತ್ತದೆ ಎಂದರೆ . . .

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ,...

**ಡಾ|| ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲಿಕ್ಕೆ ಒಂದು ನಿಮಿಷ ಅವಕಾಶ ಕೊಡಬೇಕು. I am talking about the rules. Please permit me.

*(Interruptions)*

**Sri IVAN D'SOUZA:** This is not against any Member.

*(Interruptions)*

**Sri PRAKASH K. RATHOD:** This is not against any Member ...*(Interruptions)* This is not against any Member.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**Dr. TEJASWINI GOWDA:** In Page 13 of the Rulings and Observations of the Chair (1956-1976), it is given as follows:-

> *"(1) No Member shall be allowed to make an allegation against…"*

*(Interruptions)*

**Sri IVAN D'SOUZA:** Don't try to mislead. …*(Interruptions)* He is a public servant.

**Dr. TEJASWINI GOWDA:** In Page 13, it is given as follows:-

> *"(1) No Member shall be allowed to make an allegation against an outsider unless he has obtained the prior permission…"*

*(Interruptions)*

**Sri PRAKASH K. RATHOD:** It is against the judges. …*(Interruptions)* It is against the judges.

**Dr. TEJASWINI GOWDA:** In Page 13, it is given as follows:-

> *"(1) No Member shall be allowed to make an allegation against an outsider unless he has obtained the prior permission of the Speaker after giving advance notice thereof to the Speaker and the Minister concerned…"*

*(Interruptions)*

**Sri IVAN D'SOUZA:** It is against the Speaker. …*(Interruptions)* It is against the Speaker. …*(Interruptions)* It is against the Judge. It is against the Prime Minister. …*(Interruptions)* It is against the Chair. It is against the Speaker.

*(Interruptions)*

**Dr. TEJASWINI GOWDA:** In Page 13, it is further given as follows:-

> *"…Such notice shall give the name of the person concerned…"*

**Sri IVAN D'SOUZA:** What else you want? …*(Interruptions)* What else you want?

*(Interruptions)*

**ಡಾ॥ ತೇಜಸ್ವಿನಿಗೌಡ:–** ಇಲ್ಲಿ ಕ್ಲಿಯರ್ ಆಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ:–** ಎಲ್ಲಾ ಕ್ಲಿಯರ್ ಆಗಿದೆ. You are misleading the House.

**(ಗೊಂದಲ)**

**Sri PRAKASH K. RATHOD:** You are misleading the House.

**Dr. TEJASWINI GOWDA:** You cannot digest; I know that. …*(Interruptions)* You cannot digest; I know that. But we will not allow this. …*(Interruptions)*

**ಶ್ರೀ ಕೆ.ಪ್ರಕಾಶ್ ರಾಥೋಡ್:–** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವದ ವಿಷಯವಾಗಿರುವುದರಿಂದ ದಯವಿಟ್ಟು ಇದರ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು.

**Sri IVAN D'SOUZA:** The charge is against the Speaker.

*(Interruptions)*

**Sri PRAKASH RATHOD:** What are you not allowing? …*(Interruptions)* She is misleading the House. …*(Interruptions)* She is misleading the House.

*(Interruptions)*

**ಡಾ॥ ತೇಜಸ್ವಿನಿಗೌಡ:–** ನಾನು ರೂಲ್ ಬಗ್ಗೆ ಹೇಳುತ್ತಿದ್ದೇನೆ.

**Sri PRAKASH K. RATHOD:** We are not against the rules. …*(Interruptions)* We are not against the rules.

**Dr. TEJASWINI GOWDA:** In Page 15, it is given as follows:-

> *"Speech and action in Parliament are no doubt unquestioned and free…"*

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:** ಮಾನ್ಯ ಸಭಾಪತಿಗಳಿಗೆ special powers ಇದೆ.

**(ಗೊಂದಲ)**

**Dr. TEJASWINI GOWDA:** In Page 15, it is given as follows:-

> *"Speech and action in Parliament are no doubt unquestioned and free…"*

*(Interruptions)*

**Sri PRAKASH K. RATHOD:** We are against 50 crores …*(Interruptions)* We are against 50 crores …*(Interruptions)* We are against 50 crores

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

*(Interruptions)*

**Dr. TEJASWINI GOWDA:** In Page 15, it is further given as follows:-

> *"…But this freedom cannot be understood to imply an unrestrained license of speech within the walls of the House."*

**ಶ್ರೀ ಐವನ್ ಡಿ'ಸೋಜಾ:–** ಈ ವಿಚಾರವಾಗಿ ಮಾನ್ಯ ವಿಧಾನಸಭಾ ಸದಸ್ಯರಾದ ಮಾನ್ಯ ಶ್ರೀನಿವಾಸಗೌಡರಿಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು, ಅವರಿಗೆ ಇನ್ನೂ 25 ಕೋಟಿ ರೂಪಾಯಿಗಳನ್ನು ಕೊಡುವುದು ಬಾಕಿ ಇದೆ.

**ಡಾ॥ತೇಜಸ್ವಿನಿಗೌಡ:–** ಅವರಿಗೆ ಇದರ ಬಗ್ಗೆ ಆಸಕ್ತಿ ಇಲ್ಲ. ನಾನು ಮೇಲ್ಮನೆಯ ರೂಲ್ಸ್ ಬಗ್ಗೆ ಮಾತನಾಡುತ್ತಿದ್ದೇನೆ. ನಾನು ಇದರ ಬಗ್ಗೆ ವಿರೋಧ ಮಾಡುತ್ತಿಲ್ಲ.

**(29) 11.02.2019 05.20 ಎಸ್‌ವಿ–ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:–** 50 ಕೋಟಿ, 50 ಕೋಟಿ... 25 ಕೋಟಿ, 30 ಕೋಟಿ.. ಎಲ್ಲಿಂದ ಬಂದಿತು ಇಷ್ಟು ಕೋಟಿಗಳು?

**(ಗೊಂದಲ)**

**Dr.TEJASWINI GOWDA:** Page 16 of the **Rulings and Observations of the Chair (1956-76) of Karnataka Legislative Council** reads thus; "*A member is responsible for the statements that he makes in this House. This would mean that action can be taken against him for his remarks if they are found to be wrong.*" ಈ ಸದನದಲ್ಲಿ ಮಾಡಿದ ಸ್ಟೇಟ್‌ಮೆಂಟ್ಸ್ ಆ ವ್ಯಕ್ತಿಗಳ ಬಗ್ಗೆ ತಪ್ಪಾಗಿ...

**(ಗೊಂದಲ)**

**ಶ್ರೀ ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ತಮ್ಮ ಪುಣ್ಯ ಚೆನ್ನಾಗಿದೆ. ತಮಗೂ resignation accept ಮಾಡುವಂತಿದ್ದರೆ ತಮಗೂ ಒಂದಷ್ಟು ಕೋಟಿ ರೂಪಾಯಿಗಳು ಬರುತ್ತಿತ್ತು.

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇದು ಬೇರೆ ಸಂದರ್ಭ ಅಲ್ಲ. ಈ ಘಟನೆಯಲ್ಲಿ ಬಂದಿರುವ ವ್ಯಕ್ತಿಗಳು, ಈ ಘಟನೆಯಲ್ಲಿ ಪ್ರಸ್ತಾಪವಾಗಿರುವ ವ್ಯಕ್ತಿಗಳು ಸಮಾಜದ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿದ್ದು, ಅವರನ್ನು ಈ ಸದನಕ್ಕೆ ಕರೆಸುವುದರಿಂದ ಯಾವುದೇ ರೀತಿಯಾದ...



ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಿಯಮ 342ರ ಅಡಿಯಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಿ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಿಯಮ 342ರ ಅಡಿಯಲ್ಲಿ ಅವಕಾಶವನ್ನು ನೀಡಿದರೆ ಆ ಮೂರು ಜನ ಗಣ್ಯರು ಇಲ್ಲಿ ಬಂದು ಸಮರ್ಥನೆಯನ್ನು ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಪ್ರಕರಣವನ್ನು ಬೇರೆ ಪ್ರಕರಣಗಳ ರೀತಿಯಲ್ಲಿ ಪರಿಗಣಿಸಲು ಸಾಧ್ಯವಾಗುವುದಿಲ್ಲ. ತಾವು ಪೀಠದಲ್ಲಿದ್ದಾಗ ಈ ರೀತಿಯ ಒಂದು ಕೆಟ್ಟ ಪರಂಪರೆಗೆ ಅವಕಾಶ ಮಾಡಿಕೊಡಬಾರದೆಂದು ತಮ್ಮಲ್ಲಿ ಸವಿನಯ ಪ್ರಾರ್ಥನೆ ಮಾಡುತ್ತೇನೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್‌ನ ಬಳಿ ಲಕ್ಷಾಂತರ ಕೋಟಿ ಇದೆ.

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ಮಹಾರಾಷ್ಟ್ರದ ಮುಖ್ಯಮಂತ್ರಿಗಳು ದುಡ್ಡು ಕೊಟ್ಟಿದ್ದಾರೆ. ಶ್ರೀನಿವಾಸ ಗೌಡರಿಗೆ 25 ಕೋಟಿ ರೂಪಾಯಿ ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡಿದರೆ ಎಲ್ಲವೂ ಹೊರಬರುತ್ತದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಸೂಟ್‌ಕೇಸ್... ಸೂಟ್‌ಕೇಸ್ ಸಂಸ್ಕೃತಿ ಕಾಂಗ್ರೆಸ್‌ನದ್ದು.

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ಶ್ರೀನಿವಾಸಗೌಡರದ್ದು ಐದು ಕೋಟಿ ಹಿಂದೆ ಬಂದಿದೆ. ಇನ್ನು ಹನ್ನೊಂದು ಮಂದಿಗೆ 10 ಕೋಟಿ ಕೊಟ್ಟಿದ್ದು, ಅದೆಲ್ಲಾ ರಿ–ಕಲೆಕ್ಷನ್ ಮಾಡಲಿ. ಶ್ರೀನಿವಾಸಗೌಡರು 5 ಕೋಟಿಯನ್ನು ಹಿಂದಕ್ಕೆ ಕಳುಹಿಸಿದ್ದಾರೆ. 30 ಕೋಟಿಯಲ್ಲಿ 5 ಕೋಟಿಯನ್ನು ಮಾತ್ರ ಕೊಟ್ಟಿದ್ದು, 25 ಕೋಟಿಯನ್ನು ಕೊಟ್ಟಿರುವುದಿಲ್ಲ. ಆ 25 ಕೋಟಿ ಬಾಕಿ ಇದೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸಾವಿರಾರು ಕೋಟಿ, ಲಕ್ಷಾಂತರ ಕೋಟಿಯನ್ನು ದೋಚಿಕೊಂಡಿದೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮುಂಬೈನಲ್ಲಿ ಯಾರು ಯಾವ ಹೋಟೆಲ್‌ನಲ್ಲಿ ಇದ್ದಾರೆ ಎಂಬುದನ್ನು ಹೇಳಲಿ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇಡೀ ಕಾಂಗ್ರೆಸ್ಸಿನ ಇತಿಹಾಸದಲ್ಲಿ ಭ್ರಷ್ಟಾಚಾರದಿಂದ ದೇಶವನ್ನು ಚೆನ್ನಾಗಿ ಲೂಟಿ ಮಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಒಟ್ಟಿಗೆ ಮಾತನಾಡಿದರೆ ಯಾವುದೂ ದಾಖಲೆಗೆ ಹೋಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಶ್ರೀ ಶರಣಪ್ಪ ಮಟ್ಟೂರ ಅವರನ್ನು ಮಾತನಾಡಲು ಕರೆದಿದ್ದೇನೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಾರ್ಟಿ ಲೂಟಿ ಪಾರ್ಟಿ ಮತ್ತು ಸೂಟ್‌ಕೇಸ್ ಪಾರ್ಟಿ.

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ದೇಶವನ್ನು ರಕ್ಷಣೆ ಮಾಡಬೇಕಾದ 'ಚೌಕಿದಾರ್ ಬಾಕಿದಾರ್' ಎಲ್ಲಿ ಹೋಗಿದ್ದಾರೆ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ವಿಷಯವನ್ನು ನಾವು ಅಡ್ಮಿಟ್ ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ರವಿಕುಮಾರ್ ಅವರು ಕೋಟಿ ಕೋಟಿ, ಐವತ್ತು ಕೋಟಿ ಎಲ್ಲಿದೆ ಎಂದು ಕೇಳಿದರು. ನೀವು ನೋಡಿದ್ದೀರಾ ಎಂದು ಕೇಳಿದರು.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ರಫೇಲ್‌ದು ದುಡ್ಡು ಎಲ್ಲಿಗೆ ಹೋಯಿತೆಂದು ಹೇಳಲಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಯಾರೂ 50 ಕೋಟಿಯನ್ನು ನೋಡಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಶ್ರೀ ಪ್ರಜ್ವಲ್ ರೇವಣ್ಣ ಅವರನ್ನು ಹೋಗಿ ಕೇಳಲಿ, ಹೇಳುತ್ತಾರೆ. ಯಾರನ್ನು ಭೇಟಿ ಮಾಡಬೇಕೆಂಬುದು ಅವರಿಗೆ ಗೊತ್ತು.

**ಸಭಾಪತಿಯವರು:–** ಈ ಸೂಚನೆಯ ಬಗ್ಗೆ ಇಲ್ಲಿಯ ತನಕ ಯಾವುದೇ ತೀರ್ಪನ್ನು ಕೊಟ್ಟಿರದ ಹಿನ್ನೆಲೆಯಲ್ಲಿ ಇದರ ಕುರಿತು ಯಾವುದೇ ಚರ್ಚೆಯ ಅವಶ್ಯಕತೆ ಇರುವುದಿಲ್ಲ. ಈಗ ಆ ವಿಷಯವನ್ನು ಪ್ರಸ್ತಾಪ ಮಾಡುವುದು ಬೇಡ. ಶ್ರೀ ಶರಣಪ್ಪ ಮಟ್ಟೂರ ಅವರು ಮಾತನಾಡುವುದು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಈ ಪ್ರಕರಣದ ತನಿಖೆಯನ್ನು ಎಸ್.ಐ.ಟಿಗೆ ನೀಡಬೇಕೆಂದು ಮಾನ್ಯ ಸಭಾಧ್ಯಕ್ಷರು ಮಾನ್ಯ ಮುಖ್ಯಮಂತ್ರಿಯವರಿಗೆ ಸೂಚನೆಯನ್ನು ನೀಡಿದ್ದಾರೆ. ಅದರ ಬಗ್ಗೆ ಚರ್ಚೆಯೂ ಆಗಿದೆ. ಸೂಚನೆ ಕೊಟ್ಟ ನಂತರ ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆ ವಾಪಸ್ ಉತ್ತರವನ್ನೂ ಸಹ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಟ್ಟಿದ್ದಾರೆ. ಅದಕ್ಕೆ ಮಾನ್ಯ ಪ್ರಾಣೇಶ್ ಅವರು 'ತುಂಬುಹೃದಯದಿಂದ he has supported the word of Lower House' ಎಂದು ಹೇಳಿದ್ದಾರೆ. ಆ ವಿಚಾರದ ಬಗ್ಗೆ ಇಲ್ಲಿರುವ ಸದಸ್ಯರಿಗೆ ಚರ್ಚೆ ಮಾಡಲು ಅವಕಾಶವನ್ನು ನೀಡಿ ರೆಸಲ್ಯೂಷನ್ ಮಾಡಬೇಕೆಂದು ಕೇಳಿದ್ದೇವೆ. ಎಷ್ಟು ಸಮಯವನ್ನು ನಾವು ಇಲ್ಲಿಯವರೆವಿಗೆ ಹಾಳು ಮಾಡಿದ್ದೇವೆಯೋ, ಅಷ್ಟು ಸಮಯದಲ್ಲಿ ಚರ್ಚೆಯೇ ಮುಗಿದು ಹೋಗುತ್ತಿತ್ತು. ಚರ್ಚೆ ಮಾಡಲು ಅನುಮತಿಯನ್ನು ಕೇಳುವುದರಲ್ಲಿಯೇ ಸದನದ ಇಡೀ ಸಮಯವನ್ನು ಹಾಳು ಮಾಡಲಾಗಿದೆ. ಈಗಲೂ ಕೂಡ ಕಾಲ ಮಿಂಚಿಲ್ಲ. ನಾನು ಒಂದು ಮಾತನ್ನು ವಿರೋಧ ಪಕ್ಷದ ನಾಯಕರಿಗೆ ಅಥವಾ ಈ ಚರ್ಚೆಯನ್ನು ಯಾರು ವಿರೋಧಿಸುತ್ತಿದ್ದಾರೆಯೋ, ಅವರನ್ನು ಕೇಳ ಬಯಸುತ್ತೇನೆ. ಚರ್ಚೆ ಮಾಡುವುದಕ್ಕೆ ಏಕೆ ಭಯಭೀತರಾಗಿದ್ದೀರಿ? In the eyes of public ನಾವೆಲ್ಲಾ ತಪ್ಪಿತಸ್ಥರಾಗಿದ್ದೇವೆ. ನಾವು ಕಳಂಕರಹಿತರು ಎಂಬುದನ್ನು ಸಾಬೀತು ಪಡಿಸುವುದಕ್ಕೆ ಈ ಚರ್ಚೆ ಬೇಕಾಗಿದೆ. ಸಾರ್ವಜನಿಕ ಹಿತಾಸಕ್ತಿಯಿಂದ ಈ ಚರ್ಚೆ ಬೇಕಾಗಿದ್ದು, ವಿರೋಧ ಪಕ್ಷದವರಿಗೆ ಬೇಕೆ ಅಥವಾ ಬೇಡವೆ ಎಂಬುದನ್ನು ಕೇಳಬೇಕು. ಯಾರು ವಿರೋಧ ಮಾಡುತ್ತಿದ್ದಾರೆಯೋ ಅವರಿಗೆ ಚರ್ಚೆ ಬೇಡವೆಂದು ಅರ್ಥ. ಹಾಗಾಗಿ ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

(30) 11.02.2019 KG.RN 5.30

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಸುಮಾರು ಎರಡು ಗಂಟೆಗಳ ಕಾಲ ಆಡಳಿತ ಪಕ್ಷದ ಸದಸ್ಯರು ಮತ್ತು ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ಸಲಹೆಗಳನ್ನು ನೀಡಿದ್ದಾರೆ. ಇಲ್ಲಿ ನಡೆದಿರುವಂತಹ ವಿಚಾರವನ್ನು ಗಣನೆಗೆ ತೆಗೆದುಕೊಂಡಾಗ ಮತ್ತು ಮೂರು ದಿವಸಗಳಿಂದ ದಿನಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಬಂದಿರುವಂತಹ ವಿಚಾರವನ್ನು ಎತ್ತಿ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ಮಾನ್ಯ ಸದಸ್ಯರಾದ ಐವನ್ ಡಿ' ಸೋಜಾರವರು ತಮ್ಮಲ್ಲಿ ಮನವಿಯನ್ನು ಇಟ್ಟಾಗ ತಾವು ಒಂದು ಅರ್ಜಿಯನ್ನು ಹಾಕಿ ನೋಡೋಣ ಎಂಬ ಸೂಚನೆಯನ್ನು ಕೊಟ್ಟಿದ್ದೀರಿ. ಇಷ್ಟೆಲ್ಲವನ್ನು ಅರಿತು ಮಾನ್ಯ ಸದಸ್ಯರಾದ ಐವನ್ ಡಿ' ಸೋಜಾರವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 342 ರಡಿ ಒಂದು ಅರ್ಜಿಯನ್ನು move ಮಾಡಿದ್ದಾರೆ. ಈ ನಿಯಮಗಳಲ್ಲಿ ಬಂದಿರುವಂಥ ವಿಷಯವನ್ನು ಗಮನಿಸಿದಾಗ ಅದರಲ್ಲಿನ contents ಅನ್ನು ತಾವು consider ಮಾಡಿದಾಗ, ಇದರ ಹಿನ್ನೆಲೆಯಲ್ಲಿ ಮೂರು ದಿವಸಗಳ ಹಿಂದಿನಿಂದ ದಿನ ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಬಂದಿರುವಂತಹ ವಿಷಯವನ್ನು ಗಮನಿಸಿದಾಗ, ಈ ವಿಚಾರ ಬಹಳ ಗಂಭೀರವಾಗಿದೆ. ಶಾಸಕಾಂಗ ವ್ಯವಸ್ಥೆಯ ಮೇಲೆ ಬಹಳ ಗಂಭೀರವಾದಂತಹ ಆರೋಪಗಳನ್ನು ಮಾಡಿರುವಂಥದ್ದನ್ನು ಗಮನಿಸಿದಾಗ, ನಾವೆಲ್ಲರೂ ಸಾರ್ವಜನಿಕರ ಬದುಕಿನಲ್ಲಿ we have lost the confidence of the people of the society

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎನ್ನುವಂಥದ್ದು ಎದ್ದು ಕಾಣುತ್ತದೆ. ಆ ಕಾರಣಕ್ಕಾಗಿ ಅರ್ಜಿಯನ್ನು move ಮಾಡಿ ತಮ್ಮಲ್ಲಿ ಈ ವಿಷಯದ ಮೇಲೆ ಚರ್ಚೆಗೆ ಅವಕಾಶ ಕೇಳಿದಾಗ ತಾವು ಹೇಳಿದ್ದೀರಿ. ಯಾವುದೇ ಒಂದು provision ಇಲ್ಲದೇ ಇದ್ದಾಗ, ನಾನು ಗಮನಿಸಿದ್ದೇನೆ. ಆಡಳಿತ ಪಕ್ಷದ ಸದಸ್ಯರು ಮತ್ತು ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿಗೌಡರವರು, ಶ್ರೀ ಆಯನೂರು ಮಂಜುನಾಥ್‌ರವರು, ಶ್ರೀ ಎನ್.ರವಿಕುಮಾರ್ ಮತ್ತು ಡಾ॥ ವೈ.ಎ.ನಾರಾಯಣಸ್ವಾಮಿ ಎಲ್ಲರೂ ವಿಚಾರಗಳನ್ನು ಹೇಳಿದ್ದಾರೆ. When the rules and procedures silent ಇದ್ದಾಗ, ಯಾವುದೇ ಒಂದು ಕಾಯ್ದೆಯಲ್ಲಿ ಸಂವಿಧಾನದಡಿ ಇಲ್ಲಿಯವರೆಗೆ ಬಂದಿರುವಂತಹ ಆಕ್ಟ್ ಇರಬಹುದು ಅಥವಾ ನಿಯಮ ಇರಬಹುದು. whenever there is a Act and Rules are silent about the particular provision to make an application to raise the issues on behalf of certain things ಇದ್ದಾಗ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 342 ಕೆಳಗೆ ಏನು ಹೇಳುತ್ತದೆ ಎಂದರೆ...

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡಬಾರದು..

(ಗೊಂದಲ)

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದು ವೇಳೆ ತಪ್ಪು ಮಾಹಿತಿ ಕೊಟ್ಟರೆ, ವಿರೋಧ ಪಕ್ಷದವರು ಅದನ್ನು ಸರಿಮಾಡಲಿ. ಮೊದಲು ಮಾನ್ಯ ಸದಸ್ಯರನ್ನು ಮಾತನಾಡುವುದಕ್ಕೆ ಬಿಡಲಿ..

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಇಷ್ಟೊತ್ತು ಕೂಗಾಡಿದ್ದಾರೆ. ಈಗ ನಮಗೆ ಮಾತನಾಡುವುದಕ್ಕೂ ಬಿಡುವುದಿಲ್ಲ ಎಂದರೆ ಹೇಗೆ?

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ನಮ್ಮ ಪುಣ್ಯಕ್ಕೆ ಮಾನ್ಯ ಸದಸ್ಯರಾದ ಶರಣಪ್ಪ ಮಟ್ಟೂರರವರು ಮಾನ್ಯ ವಿ.ಎಸ್.ಉಗ್ರಪ್ಪನವರನ್ನು ನೆನಪಿಸಿಕೊಡುತ್ತಿದ್ದಾರೆ. ಏಕೆಂದರೆ, ಮಾನ್ಯ ಸದಸ್ಯರು ಸಂವಿಧಾನದ ಪುಸ್ತಕವನ್ನು ಹಿಡಿದುಕೊಂಡು ಹೇಳುತ್ತಿದ್ದಾರೆ. ನಾವು ಅದನ್ನು ಸ್ವಲ್ಪ ಸಮಾಧಾನದಿಂದ ಕೇಳೋಣ. ಒಂದು ವೇಳೆ ಮಾನ್ಯ ಉಗ್ರಪ್ಪನವರು ಸದನದಲ್ಲಿ ಮಾತನಾಡುತ್ತಿದ್ದರೆ, ನಾವು ಕೇಳುತ್ತಿರಲಿಲ್ಲವೇ? ಮಾನ್ಯ ಸದಸ್ಯರು Article ಬಗ್ಗೆ ಹೇಳುತ್ತಿದ್ದಾರೆ. ಅದು ತಪ್ಪಾಗಿದ್ದರೆ ಅವರು ಹೇಳಲಿ.

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ನಾನು ಯಾರಿಗೂ yield ಆಗಿಲ್ಲ..

(ಗೊಂದಲ)

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಮ್ಮ ಗೆಳೆಯರು..

(ಗೊಂದಲ)

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಶರಣಪ್ಪ ಮಟ್ಟೂರರವರು ದೇವರಂತಹ ಮನುಷ್ಯರು. ಅವರನ್ನು ಅವರಿಗೆ ಏಕೆ ಹೋಲಿಸುತ್ತಾರೆ..

(ಗೊಂದಲ)

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಬೇರೆಯವರು ದೇವರಂತಹ ಮನುಷ್ಯರು ಅಲ್ಲವೇ; ಇದು ಒಳ್ಳೆಯ ಕಥೆ ಆಯಿತು..

(ಗೊಂದಲ)

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀನಿವಾಸಗೌಡರು ಸಹ ದೇವರಂತಹ ಮನುಷ್ಯ.

ಶ್ರೀ **ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, Rules of Procedure ನಲ್ಲಿ ನಿಯಮ 68, 69 ಮತ್ತು 72ರ ಬಗ್ಗೆಯೂ ಸಹ ನನಗೆ ಅರಿವಿದೆ. ನಾನು ಕೆಳಮನೆಯಲ್ಲಿ ಇರುವಂತಹ provisions ಬಗ್ಗೆ ಮತ್ತು ಈ ಸದನದಲ್ಲಿ ಇರುವಂತಹ provisions ಬಗ್ಗೆ ಅರಿವು ಇಟ್ಟುಕೊಂಡು ಈ ವಿಚಾರವನ್ನು ಮಾತನಾಡುತ್ತಿದ್ದೇನೆ. As far as my knowledge and understanding of this rules is concerned present application is moved because of the procedure is silent about the issues ಎನ್ನುವಂತಹ ಮಾತನ್ನು ನಾನು ಪುನಃ ಹೇಳುವುದಕ್ಕೆ ಬಯಸುತ್ತೇನೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 342 ರ ಕೆಳಗಡೆ "ಈ ನಿಯಮಗಳಲ್ಲಿ ನಿರ್ದಿಷ್ಟವಾಗಿ ವಿಧಾಯಕ ಮಾಡದೇ ಇರುವ ಎಲ್ಲಾ ವಿಷಯಗಳನ್ನೂ ಮತ್ತು ಈ ನಿಯಮಗಳಿಗನುಸಾರವಾಗಿ ಕೆಲಸ ನಡೆಯುವುದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಸಭಾಪತಿಯವರು ಆಗಿಂದಾಗ್ಗೆ ನಿರ್ದೇಶಿಸುವಂತೆ ಕ್ರಮಗೊಳಿಸಬೇಕು" ಎಂದು ಇದೆ. ತಾವು ಈಗಾಗಲೇ ಪ್ರತಿಪಕ್ಷದ ನಾಯಕರ ಮತ್ತು ಆಡಳಿತ ಪಕ್ಷದ ನಾಯಕರ ವಾದ ವಿವಾದಗಳನ್ನು ಸಹ ಕೇಳಿದ್ದೀರಿ. ಈಗ ಅರ್ಜಿ ತಮ್ಮ ಮುಂದೆ ಇದೆ. ಇದರ ಬಗ್ಗೆ ಕೆಳಮನೆಯಲ್ಲಿ ಬೆಳಿಗ್ಗೆಯಿಂದ ವಿವರವಾಗಿ ಚರ್ಚೆ ಆಗಿದೆ. ವಿಧಾನ ಮಂಡಲದ ಅಧ್ಯಕ್ಷರ ಮೇಲೆ ಯಾರು ಆರೋಪಗಳನ್ನು ಮಾಡಿದ್ದಾರೋ ಅವರೇ ಅದರಲ್ಲಿರುವಂತಹ ಧ್ವನಿ ನನ್ನದೇ ಎಂದು ಹೇಳಿರುವಾಗ ಇದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಏನು ತೊಂದರೆ ಇದೆ ಎಂದು ನನಗೆ ಅರ್ಥವಾಗುತ್ತಿಲ್ಲ ಇದು ಒಂದು. ಎರಡನೆಯದಾಗಿ, ಈಗ ವಿಧಾನ ಸಭೆಯ ಸನ್ಮಾನ್ಯ ಅಧ್ಯಕ್ಷರು ಸಹ ಇದರ ಬಗ್ಗೆ ಈಗಾಗಲೇ ಅವರದೇ ಆದಂತಹ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಾವು ಇಲ್ಲಿ ಏನೇ ಚರ್ಚೆ ಮಾಡಿದರೂ ಸಹ, binding ಆ decision

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮೇಲೆ ಇರುವಂತಹ ಅರಿವು ಸಹ ನನಗೆ ಇದೆ. ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 342 ರಡಿ ಬರುತ್ತದೆಯೋ ಅಥವಾ ಇಲ್ಲವೋ ಎಂಬ ತೀರ್ಮಾನವನ್ನು ತಾವು ತೆಗೆದುಕೊಳ್ಳಬೇಕಾಗಿದೆ. The discretion is vested with you to take a decision on the discussions of this House with regard to Rule.342 is concerned. ತಾವು ಇದನ್ನು ಮಾಡಬಹುದು ಎಂದು ಹೇಳುವುದಕ್ಕೆ ಅವಕಾಶ ಇರುವುದರಿಂದ ಅವಕಾಶ ಕೊಟ್ಟರೆ, ಅದರಿಂದ ಯಾವುದೇ ತೊಂದರೆ ಆಗುವುದಿಲ್ಲ. ಕೆಳಮನೆಯಲ್ಲಿ ಇದುವರೆಗೂ ಯಾವ ಪಕ್ಷದ ಸದಸ್ಯರ ಹೆಸರನ್ನು ಮತ್ತು ಯಾವ ಪಕ್ಷದ ಹೆಸರನ್ನು ಎತ್ತಿರುವುದಿಲ್ಲ. ಅಲ್ಲಿ ವೈಯಕ್ತಿಕ ನಿಂದನೆಗಳನ್ನು ಸಹ ಮಾಡಿಲ್ಲ. ಆ ರೀತಿ ಯಾರೂ ಸಹ ಮಾಡುತ್ತೇವೆಂದು ಹೇಳಿಲ್ಲ. ಆದರೆ, ಯಾರು ಮಾಡಿದ್ದಾರೋ, ನಾವೇ ಮಾಡಿದ್ದೇವೆ, ಆ voice ನನ್ನದೇ ಎಂದು ಹೇಳಿದ ಮೇಲೆ, ಅದರ ಮೇಲಿನ ಚರ್ಚೆಗೆ ಯಾವುದೇ ತೊಂದರೆ ಇಲ್ಲ ಎಂಬ ಸಲಹೆಯನ್ನು ನಾನು ಕೊಡುವುದಕ್ಕೆ ಬಯಸುತ್ತೇನೆ. ತಾವು ಇಲ್ಲಿ ಒಂದು ತೀರ್ಪನ್ನು ಕೊಟ್ಟು ಇದರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬುದು ನನ್ನ ಮನವಿ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 59ರ ಕೆಳಗೆ ನಿಲುವಳಿ ಸೂಚನೆ ತರಲು ಸಭಾಪತಿಯವರ ಅನುಮತಿ ಅಗತ್ಯ ಎಂದು ಇದೆ. "ನಿಯಮಗಳ ಉಪಬಂಧಗಳಿಗೊಳಪಟ್ಟು ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ಸಂವಿಧಾನ ಮತ್ತು ಕಾನೂನಿನಲ್ಲಿ ನಿರ್ದೇಶಿಸಲಾಗಿರುವ ಕರ್ತವ್ಯಗಳನ್ನು ಜಾರಿಗೊಳಿಸಲು ಸರ್ಕಾರದ ವೈಫಲ್ಯತೆ ಕಂಡು ಬಂದಲ್ಲಿ ಅಂತಹ ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸದನದ ಕಾರ್ಯಕಲಾಪಗಳನ್ನು ನಿಲುವಳಿ ಮಾಡುವ ಬಗ್ಗೆ ಸೂಚನೆಯನ್ನು ಪ್ರಶ್ನೋತ್ತರ ಮತ್ತು ಶೂನ್ಯ ವೇಳೆಯ ತರುವಾಯ ತರಬಹುದು" ಎಂಬುದಾಗಿ ಇದೆ.

ಮಾನ್ಯ ಸಭಾಪತಿಯವರೇ, ನಿಯಮ 60 ರಲ್ಲಿ ಸೂಚನೆಯನ್ನು ನೀಡಲು ಕಾಲಾವಧಿ ಬಗ್ಗೆ ಈ ಕೆಳಕಂಡಂತೆ ಹೇಳುತ್ತದೆ. "ನಿಲುವಳಿ ಸೂಚನೆಯನ್ನು ಯಾವ ದಿನಾಂಕದಂದು ತರಬೇಕೆಂದು ಉದ್ದೇಶಿಸಲಾಗಿದೆಯೋ ಆ ದಿನದ ಉಪವೇಶನವು ಪ್ರಾರಂಭವಾಗುವುದಕ್ಕೆ ಒಂದು ಗಂಟೆ ಮುಂಚೆಯೇ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡತಕ್ಕುದು" ಎಂದು ಇದೆ. ಇದನ್ನು ಒಂದು ಗಂಟೆ ಮುಂಚಿತವಾಗಿ ಕೊಟ್ಟಿದ್ದರೆ ಆಗುತ್ತಿತ್ತು. ಇದರಲ್ಲಿ ಅವಕಾಶ ಇದೆ..

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು ಊಟದ ಸಮಯಕ್ಕೂ ಮೊದಲೇ ಕೇಳಿದ್ದೇನೆ. ಇದಕ್ಕೆ ಅವಕಾಶ ಕೊಡುವುದಕ್ಕೆ ಇಲ್ಲಿಯವರೆಗೆ ಚರ್ಚೆಯೇ ಆಗಿದೆ. ಈ ವಿಷಯವನ್ನು ಹೇಳಬಾರದು ಎಂದು ನಾನು ಮೊದಲೇ ಹೇಳಿದ್ದೇನೆ. ಅವರು ಹೇಳಿರುವುದನ್ನೇ ಮತ್ತೆ ಮತ್ತೆ ಹುಡುಕಿ ಹೇಳುತ್ತಿದ್ದಾರೆ..

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದನ್ನು ಬಹಳ ಚೆನ್ನಾಗಿ ಓದಿ ಹೇಳಿದ್ದಾರೆ. ಇಲ್ಲಿ ಅದು mislead ಆಗುವುದು ಬೇಡ. ಸರ್ಕಾರದ ವೈಫಲ್ಯತೆ ಕಂಡುಬಂದಲ್ಲಿ ಅಂತಹ ಒಂದು ನಿರ್ದಿಷ್ಟ ವಿಷಯದ ಮೇಲೆ, ಸರ್ಕಾರದ ವೈಫಲ್ಯತೆ ಎಂಬ ಶಬ್ಧ ಬಂದಾಗ ಮಾತ್ರ ನಿಯಮ 59 ರಡಿ application move ಮಾಡುವುದಕ್ಕೆ ಬರುತ್ತದೆ. ಈಗ ಸರ್ಕಾರದ ವೈಫಲ್ಯತೆ ವಿಚಾರ ಅಲ್ಲ. There is a derogatory allegation made by the... ಮಾನ್ಯ ಸದಸ್ಯರು ಇದನ್ನು ದಯಮಾಡಿ ಗಮನಿಸಬೇಕು. Rule 59 speaks in other words. ನಾನು ಹೇಳಿದ್ದು ಬೇರೆ. ಇದು ಬೇರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಎಲ್ಲಾ ವಿಚಾರಗಳನ್ನು ಕೇಳಿದ್ದೀರಿ. ನಾವು ಎತ್ತಿರುವಂತಹ ಪ್ರಶ್ನೆ ಇಷ್ಟೇ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 342 ರಡಿ ಈ ಚರ್ಚೆಗೆ ಅವಕಾಶ ಕೊಡುವುದಕ್ಕೆ ಅವಕಾಶ ಇದೆಯೇ ಅಥವಾ ಇಲ್ಲವೋ ಎಂಬುದನ್ನು ಮನವರಿಕೆ ಮಾಡಿಕೊಡುವುದಷ್ಟೇ ನಮ್ಮ ಜವಾಬ್ದಾರಿ. ತಾವು ಇಲ್ಲಿ ಇದರ ಬಗ್ಗೆ ಬೆಳಿಗ್ಗೆಯಿಂದ ಏನೇನು ಚರ್ಚೆ ಆಗಿದೆ ಎಂಬುದನ್ನು ಗಮನಿಸಿದ್ದೀರಿ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ಏಕೆಂದರೆ, ಕೆಳಮನೆಯ ಸಭಾಧ್ಯಕ್ಷರ ಪೀಠದ ಮೇಲೆ ಬಂದಿರುವಂತಹ ಆಪಾದನೆಗಳು, ಅಲ್ಲಿರುವಂತಹ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರುವಂತಹ ಅಭಿಪ್ರಾಯಗಳು ಕೆಳಮನೆಯಲ್ಲಿ ನಡೆದಿರುವಂತಹ ಚರ್ಚೆ, ನಾವೆಲ್ಲರೂ ಮೇಲ್ಮನೆಯನ್ನು ಚಿಂತಕರ ಚಾವಡಿ ಮತ್ತು ಪ್ರಬುದ್ಧರ ಚಾವಡಿ ಎಂದು ಹೇಳುತ್ತೇವೆ. ಇವತ್ತು ಕೆಳಮನೆಯಲ್ಲಿ ನಡೆದಿರುವಂತಹ ಚರ್ಚೆಯ ಪ್ರಬುದ್ಧತೆಯನ್ನು ನೋಡಿದರೆ, ನಮ್ಮ ಸದನಕ್ಕೆ ಅದನ್ನು ಹೋಲಿಕೆ ಮಾಡಿದರೆ ನಾವು ನಮ್ಮ ಶಪಥವನ್ನು ಪುನರಾವರ್ತನೆ ಮಾಡಬೇಕಾದಂತಹ ಅವಶ್ಯಕತೆ ಇಲ್ಲವೆಂದು ನನಗೆ ಅನಿಸಿದೆ. ಅದಕ್ಕೆ ಯಾರಾದರೂ ಆಕ್ಷೇಪಣೆ ಮಾಡಿದರೆ, ಅದಕ್ಕೆ ಅಡ್ಡಿ ಇಲ್ಲ. ಅಷ್ಟೊಂದು ಪ್ರಬುದ್ಧತೆ ಇದೆ. ನಾನು ಸನ್ಮಾನ್ಯ ಕೃಷ್ಣಭೈರೇಗೌಡರವರು, ಸನ್ಮಾನ್ಯ ಸಿದ್ದರಾಮಯ್ಯನವರು, ಸನ್ಮಾನ್ಯ ಹೆಚ್.ಕೆ.ಪಾಟೀಲ್‌ರವರು, ಸನ್ಮಾನ್ಯ ಮಾಧುಸ್ವಾಮಿರವರು ಮತ್ತು ಸನ್ಮಾನ್ಯ ಸುರೇಶ್‌ಕುಮಾರ್‌ರವರು ಮಾತನಾಡಿರುವುದನ್ನು ಕೇಳಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(31)11–02–2019(5–40)ಎಂವಿ–ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು...):–**

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಚರ್ಚೆಯಾಗಿ ಕೊನೆಗೆ ಮಾನ್ಯ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು ತಮ್ಮ ಅಭಿಪ್ರಾಯ ಮಂಡಿಸಿರುವುದನ್ನು ಕೇಳಿದ್ದೇನೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಹೊರಟ್ಟಿ ಸಾಹೇಬರು ನನಗೆ ಬೆಳಕು ಚೆಲ್ಲಬೇಕು. ಸಾಮಾನ್ಯವಾಗಿ ಈ ಮನೆಯ ನಡವಳಿಕೆಯನ್ನು ಮತ್ತು ಆ ಮನೆಯಲ್ಲಿ ಬೆಳಿಗ್ಗೆ ಆದಂತಹ ಚರ್ಚೆಯನ್ನು ಗಮನಿಸಿದರೆ, ನಾವು ಎಲ್ಲೋ ತಪ್ಪು ಮಾಡುತ್ತೇವೆ ಎಂದು ನನಗನಿಸುತ್ತಿದೆ. ನಾನು ಮತ್ತೊಂದು ಹೆಜ್ಜೆ ಮುಂದೆ ಹೋಗಿ ಹೇಳುವವನು, ಏಕೆಂದರೆ ಇನ್ನು ಸದನ ನಡೆಯಲು ಉಳಿದಿರುವುದು ಮೂರು ದಿವಸಗಳು ಮಾತ್ರ. ಇವತ್ತು ಈ ಸದನದ ಬಗ್ಗೆ ಮಾಧ್ಯಮದಲ್ಲಿ ನಾವೆಲ್ಲರೂ ಸಹ ನೋಡಿದ್ದೇವೆ. ನಾವು ಬರಗಾಲದ ಬಗ್ಗೆ, ರೈತರ ಬಗ್ಗೆ ಮತ್ತು ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಬೇಕಾಗಿತ್ತು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂಥದ್ದು ಏನೂ ಮಾಡಿಲ್ಲ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಾನು ಮಾತನಾಡುತ್ತಿದ್ದೇನೆ, ಒಂದು ನಿಮಿಷ ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರಿಗೆ ಸುಮ್ಮನೆ ಇರುವುದಕ್ಕೆ ಹೇಳಿ. ನಾನು ಅವರ ವಿರುದ್ಧ ಮಾತನಾಡಿಲ್ಲ, ನಾನು ಮಾತನಾಡುವುದನ್ನು ಅವರಿಗೆ ಕೇಳುವುದಕ್ಕೆ ಹೇಳಿ. ಅವರಿಗೆ ಇರುವ ಒಂದೇ ಒಂದು ದೌರ್ಬಲ್ಯವೆಂದರೆ ಬೇರೆಯವರು ಮಾತನಾಡುವಾಗ ಎದ್ದು ನಿಲ್ಲುವುದು. ಆ ಪುಣ್ಯಾತ್ಮ ಕೇಳುವುದೇ ಇಲ್ಲ, ಈಗ ಹೇಳುವುದನ್ನು ಕೇಳಲಿ. ನಮಗೆ ಅಜೆಂಡಾ ಪ್ರಕಾರ ಎಲ್ಲಾ ಚರ್ಚೆಗಳನ್ನು ಮಾಡುವಂತಹ ಅವಶ್ಯಕತೆ ಇತ್ತು. ಆದರೆ, ಇವತ್ತು ಸದನದಲ್ಲಿ ಈ ಚರ್ಚೆ ಬಂದಿರುವುದರಿಂದ ಸಮಸ್ಯೆಗಳು ಬಂದಿವೆ. ನಾನು ನಿಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಕೆಳಮನೆಯ ಮಾನ್ಯ ಸಭಾಧ್ಯಕ್ಷರ ಹುದ್ದೆಯ ಮೇಲೆಯೇ ಆಪಾದನೆ ಬಂದಿರುವಂತಹ ವಿಷಯವಾಗಿರುವುದರಿಂದ, ಕೆಳಮನೆಯಲ್ಲಿ ಚರ್ಚೆ ನಡೆದು, ಈಗ ಅವರು ಒಂದು ತೀರ್ಮಾನ ಏನು ಮಾಡಿದ್ದಾರೆಂದರೆ, ಮಾನ್ಯ ಸಭಾಧ್ಯಕ್ಷರು ಇದನ್ನು Special Investigation Team ಗೆ ತನಿಖೆಗೆ ನೀಡಿ ಎಂದು ಹೇಳಿದ್ದಾರೆ. ಇದನ್ನು ಸರ್ಕಾರ ಒಪ್ಪಿಕೊಂಡಿದೆ, ಆದರೆ ವಿರೋಧ ಪಕ್ಷದವರು ಇದನ್ನು ನ್ಯಾಯಾಂಗ ತನಿಖೆ ಮಾಡಿ ಅಥವಾ ಬೇರೆ ಮೂಲಗಳಿಂದ ತನಿಖೆ ಮಾಡಬೇಕು, ಸದನ ಸಮಿತಿ ಮಾಡುವಂತಹ ಅಭಿಪ್ರಾಯವನ್ನು ಸಹಾ ಕೊಟ್ಟಿದ್ದಾರೆ. ನಾವು ಇಷ್ಟೆಲ್ಲಾ ಚರ್ಚೆ ಮಾಡಿದ್ದೇವೆ, ಇದಕ್ಕೆ ಪೂರಕವಾಗಿ ಯಾವುದೋ ನಿರ್ಧಾರಕ್ಕೆ ಬಂದರೆ, ಅದನ್ನು ಕೆಳಮನೆ ಒಪ್ಪಬಹುದೆ? ಮತ್ತು ಕೆಳಮನೆಗೆ ಜಂಟಿ ಸದನ ಸಮಿತಿಯನ್ನು ಮಾಡಬೇಕಾದಂತಹ ಅವಶ್ಯಕತೆಗಳು ಕೂಡ ಇಲ್ಲ. ಕೆಳಮನೆಗೆ ಆ ಸಾಮರ್ಥ್ಯ ಮತ್ತು ಅನುಭವ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ನೀವುಗಳೆಲ್ಲರೂ ಒಪ್ಪುತ್ತೀರಾ ಎಂದು ನನಗೆ ಗೊತ್ತಿಲ್ಲ. ನೀವುಗಳೆಲ್ಲರೂ ಒಪ್ಪುವುದಾದರೆ, ಕೆಳಮನೆಯಲ್ಲಿ ಮಾತನಾಡಿದ ವಿರೋಧ ಪಕ್ಷದವರು ಇರಬಹುದು ಮತ್ತು ಆಡಳಿತ ಪಕ್ಷದವರು ಇರಬಹುದು, ಒಬ್ಬನೇ ಒಬ್ಬ ಸದಸ್ಯರು ಪೀಠದಲ್ಲಿರುವಂತಹ ಶ್ರೀ ರಮೇಶ್ ಕುಮಾರ್‌ರವರನ್ನು ಒಂದೇ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಂದು ಶಬ್ಧದಿಂದ ಅನುಮಾನಿಸಿಲ್ಲ. ಅದರ ಬದಲಾಗಿ ನಿಮ್ಮ ಜೀವನ ನಮಗೆಲ್ಲಾ ಮಾರ್ಗದರ್ಶಿ, ನಿಮ್ಮ ಮೇಲೆ ಆಪಾದನೆ ಬಂದಿರುವ ಕಾರಣಕ್ಕೆ, ನೀವು ಏನು ಹೇಳುತ್ತೀರೋ ನಾವು ಒಪ್ಪುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅಂದರೆ ಶ್ರೀ ಸಿದ್ದರಾಮಯ್ಯನವರಿಂದ ಪ್ರಾರಂಭವಾಗಿ ಶ್ರೀ ಯಡಿಯೂರಪ್ಪನವರವರೆಗೆ. ಆಗ ಮಾನ್ಯ ಸಭಾಧ್ಯಕ್ಷರು ಏನು ಮಾಡಿದರು ಎಂದರೆ, ನಾವು ಇದನ್ನು ಒಂದು ತನಿಖಾ ಸಂಸ್ಥೆಗೆ ನಿಯೋಜನೆ ಮಾಡಿದ್ದೇವೆಂದು ಹೇಳಿದರು. ಈಗ ಆ ತನಿಖಾ ಸಂಸ್ಥೆ ಯಾವುದು ಎಂಬುದರ ಬಗ್ಗೆ ಮಾತ್ರ ಚರ್ಚೆ ಇದೆ. ಆದರೆ ಪೀಠದ ಮೇಲೆ ಯಾವ ಚರ್ಚೆಯೂ ಇಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಬೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ನನಗೆ ಗಡಿಬಿಡಿ ಮಾಡುವುದು ಬೇಡ. ನಿಮಗೆ ಕುಳಿತುಕೊಳ್ಳುವುದಕ್ಕೆ ಸಮಯವಿಲ್ಲವೆ, ಬೇಕಾದರೆ ಮಾನ್ಯ ಸದಸ್ಯರು ಮಾತನಾಡಲಿ ನಾನು ಕುಳಿತುಕೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಬೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಗೆ ಅವಕಾಶ ನೀಡಿ ಎಂದು ಕೇಳುತ್ತಿದ್ದಾರೋ ಅಥವಾ ಅವರು ಚರ್ಚೆಯಲ್ಲಿ ಭಾಗವಹಿಸಿದ್ದಾರೋ ಎನ್ನುವುದನ್ನು ದಯಮಾಡಿ ತಿಳಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಅವರೆಲ್ಲರೂ ಸಹ ಚರ್ಚೆಯಲ್ಲಿ ಭಾಗವಹಿಸಿ ಆಗಿದೆ. ಒಂದು ನಿಮಿಷ ನಾನು ಹೇಳುವುದನ್ನು ಕೇಳಲಿ. ಇಲ್ಲಿ ನಾವು ಚರ್ಚೆ ಮಾಡಬೇಕಾದರೆ, ನಾವೆಲ್ಲರೂ ಒಂದೊಂದು ಗಂಟೆ ಭಾಷಣ ಮಾಡಿ ಮುಗಿಸಬೇಕು ಎಂಬುದನ್ನು ಬಿಟ್ಟರೆ, ಬೇರೆನೂ ಇಲ್ಲ. ವಿಧಾನಸಭೆಯಲ್ಲಿ ಚರ್ಚೆಯಾಗಿ ಒಂದು ಹಂತಕ್ಕೆ ಬಂದು ಆಗಿದೆ. ಅಲ್ಲಿ ನಡೆದಿರುವಂತಹ ವಿದ್ಯಾಮಾನ, ಆ ಪರಮೋಚ್ಛ ಪೀಠದ ಬಗ್ಗೆ ಯಾರ ಅಭಿಪ್ರಾಯಗಳು ಸಹ ಇಲ್ಲ. ತನಿಖೆ ಏನು ಮಾಡಬೇಕು ಎಂಬುದರ ಬಗ್ಗೆ ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಿ ಆಗಿದೆ. ನಾವು ಏನಾದರೂ ಇಲ್ಲಿ ಇದನ್ನು ಚರ್ಚೆ ಮಾಡಿದರೆ, ಇದು ಸಾಂಪ್ರದಾಯಿಕವಾಗಿ ಒಂದು ಒಣ ಚರ್ಚೆಯಾಗುತ್ತದೆ ಎಂಬುದನ್ನು ಬಿಟ್ಟರೆ, ಫಲಿತಾಂಶ ಗೌಣ. ಇದನ್ನು ನೀವು ಒಪ್ಪುತ್ತೀರೋ; ಬಿಡುತ್ತೀರೋ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀಕಂಠೇಗೌಡರು ಮಾತನಾಡುವುದಾದರೆ ನಾನು ಕುಳಿತುಕೊಳ್ಳುತ್ತೇನೆ. ನನಗೆ ಅವರ ಮೇಲೆ ಗೌರವವಿದೆ, ನಾನು ಅವರ ಬಳಿ ವಿನಂತಿ ಮಾಡುತ್ತೇನೆ. ಈ ಚರ್ಚೆಯ ಅವಶ್ಯಕತೆಗಳು ಮತ್ತು ...

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್.ಬೋಜೇಗೌಡ:–** ಮಾನ್ಯ ಸಭಾಪತಿಯವರೆ, ಅವರು ಹಿರಿಯ ಸದಸ್ಯರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇದಕ್ಕೆ ಸೀಮಿತವಾಗಿ ಅದರ ಚೌಕಟ್ಟಿನೊಳಗೆ ಅವರು ಮಾತನಾಡಿದರೆ ನಮ್ಮ ಅಭಿಪ್ರಾಯಗಳು ಏನೂ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಾನು ಚೌಕಟ್ಟು ಬಿಟ್ಟು ಹೋಗಿಲ್ಲ. ಆಯಿತು ಹೇಳಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್. ಸದಸ್ಯರಾದ ಮಾನ್ಯ ಐವನ್ ಡಿ'ಸೋಜಾರವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 342ರ ಅಡಿಯಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವಂತಹ ಸೀಮಿತವಾದ ಚರ್ಚೆಗಷ್ಟೆ ಇವತ್ತು ನಾವುಗಳೆಲ್ಲರೂ ಭಾಗವಹಿಸಿದ್ದೇವೆ. ಎಲ್ಲಾ ವಿಚಾರವನ್ನು ವಿವರವಾಗಿ ವಿರೋಧ ಪಕ್ಷದ ನಾಯಕರು ಚರ್ಚೆ ಮಾಡುವುದಾದರೆ, ನಾವು ಸಹ ಚರ್ಚೆ ಮಾಡುತ್ತೇವೆ. Now you restrict the discussion ಮಾಡುತ್ತೀರಾ? 342ನೇ ನಿಯಮದಡಿಯಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ಮಾತ್ರ ಹೇಳಬೇಕು. ಹಾಗಾದರೆ ನಾವು ಸಹ ಎಲ್ಲವನ್ನು ಹೇಳುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ನಾನು ಹೇಳುವುದು ಇಷ್ಟೆ. ಪೀಠದಿಂದ ಅವಕಾಶವನ್ನು ಪಡೆದಾಗ, ಅವರು ಏನು ಬೇಕಾದರೂ ಚರ್ಚೆ ಮಾಡಲಿ, ಅದು ನಮಗೆ ಗೊತ್ತಿಲ್ಲ. ಆದರೆ, ನಿಯಮ 342ರ ಅಡಿಯಲ್ಲಿ ಈ ಚರ್ಚೆಯ ಸಾಧಕ–ಬಾಧಕಗಳ ಅನಿವಾರ್ಯತೆ ಮತ್ತು ಅಗತ್ಯ ಹಾಗೂ ಅವಕಾಶಕ್ಕೆ ಇರುವಂತಹ ಹಕ್ಕು ಇಷ್ಟನ್ನು ಮಾತ್ರ ನಾನು ಹೇಳುವುದು. ಹಾಗಾಗಿ ನನ್ನ ವಿನಂತಿ ಮತ್ತು ಆಗ್ರಹ ಇರುವಂಥದ್ದು ಏನೆಂದರೆ, ಯಾವುದೇ ಕಾರಣಕ್ಕೂ ನಾವು ಇದನ್ನು ಇಲ್ಲಿ ಚರ್ಚೆ ಮಾಡಿದರೆ, ಅದು ಒಣ ಚರ್ಚೆಯಾಗಬಹುದು ಮತ್ತು ನಿಯಮ 342ರ ಅಡಿ ಅವಕಾಶವನ್ನು ಕೊಟ್ಟರೆ, ಈ ಸದನದ ಸತ್ಸಂಪ್ರದಾಯದಂತೆ ಇಲ್ಲಿಯವರೆಗೂ ಇಂತಹ ಪ್ರಕರಣ ನಡೆದಿದ್ದು ಇಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿ, ನಾಳೆಗೆ ಸಾರ್ವಜನಿಕ ಹಿತಸಕ್ತವಾದಂತಹ ಯಾವುದೋ ಒಂದು ತುರ್ತು ವಿಚಾರವನ್ನು ನಿಮ್ಮ ಮುಂದೆ ಮಂಡಿಸುತ್ತೇನೆ. ಅಂದರೆ, ಕುಡಿಯುವ ನೀರು ಇರಬಹುದು, ಯಾವುದೋ ಧರಣಿ ಇರಬಹುದು ಮತ್ತು ಯಾವುದೋ ರೈತರ ಸಮಸ್ಯೆ ಇರಬಹುದು. ಈಗ ಏನು ಹೇಳುತ್ತೀರಿ ಎಂದರೆ, ಈ ಸದನದ ಸತ್ಸಂಪ್ರದಾಯದ ಪ್ರಕಾರ, ಶ್ರೀ ಹೊರಟ್ಟಿಯವರು ಮತ್ತು ಶ್ರೀ ಡಿ.ಹೆಚ್.ಶಂಕರಮೂರ್ತಿಯವರು ಸಭಾಪತಿಯಾಗಿದ್ದಾಗ ಪ್ರಶ್ನೋತ್ತರ ಅವಧಿಗಿಂತ ಮುಂಚಿತವಾಗಿ ಬೇರೆ ವಿಷಯವನ್ನು ಕೈಗೆತ್ತಿಕೊಳ್ಳುವುದಿಲ್ಲವೆಂದು ಹೇಳಿದ್ದರು. ನೀವು ಹಾಗೆಯೇ ಪ್ರಶ್ನೋತ್ತರ ಆದನಂತರ ಅವಕಾಶ ಕೊಡುತ್ತೇನೆ ಎಂದು ಹೇಳುತ್ತೀರಿ, ತಾವು ಆ ರೀತಿ ಹೇಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಂದು ವೇಳೆ ನಾಳೆಯಿಂದ ಹೇಳುವುದಿಲ್ಲ, ಇದೇ ಸಂಪ್ರದಾಯವನ್ನು ಮುಂದುವರೆಸುತ್ತೇವೆ ಎಂದು ಸದನ ಹೇಳಿದರೆ ಪ್ರಶ್ನೆ ಮಾಡುವುದಕ್ಕೆ ನಾವ್ಯಾರು? ನಾನು ಆ ಕಾರಣಕ್ಕೆ ಹೇಳಿದೆ, ಈ ಚರ್ಚೆಗಳು ನಿಯಮ 342ರ ಅಡಿಯಲ್ಲಿ ಚರ್ಚೆಗೆ ಕೈಗೆತ್ತಿಕೊಂಡರೆ, ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕೆಳಮನೆಯಲ್ಲಿ ಚರ್ಚೆಯಾಗಿದೆ. ಕೆಳಮನೆಯಲ್ಲಿ ಏನು ನಿರ್ಣಯ ಮಾಡುತ್ತಾರೋ ಹೆಚ್ಚು ಕಡಿಮೆ ಅದೇ ಆಗಿಬಿಡುತ್ತದೆ. ವಿರೋಧ ಮಾಡುವ ಹಕ್ಕನ್ನು ವಿರೋಧ ಪಕ್ಷ ಕಾಯ್ದಿರಿಸಿಕೊಂಡಿರಬಹುದು. ಇದನ್ನು ಮೇಲ್ಮನೆಯಲ್ಲಿ ಚರ್ಚೆ ಮಾಡಿದರೆ ಇದು ಒಣ ಚರ್ಚೆಯಾಗುತ್ತದೆ ಎನ್ನುವಂತಹ ಅಪಾಯಗಳು ಇದೆ. ಏಕೆಂದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಕೈಗೆತ್ತಿಕೊಳ್ಳುವುದಕ್ಕೆ ಅವಕಾಶಗಳು ಕೂಡ ಇಲ್ಲ. ಇಲ್ಲಿಯವರೆಗೆ ಆ ಸಂಪ್ರದಾಯಗಳನ್ನು ನಾವು ಮಾಡಿಲ್ಲ, ಮುಂದೆ ಇದನ್ನು ಮಾಡುವುದು ಸಹ ಸರಿಯಲ್ಲ. ದಯವಿಟ್ಟು ನಾನು ವಿನಂತಿ ಮಾಡುತ್ತೇನೆ. ಕೆಳಮನೆಯಲ್ಲಿ ಶ್ರೀ ರಮೇಶ್ ಕುಮಾರ್ ಎಂದರೆ, ನಮಗೆಲ್ಲರಿಗೂ ಪ್ರಾಸ ಸ್ಮರಣಿಯರು ಎಂದು ನಾವು ತಿಳಿದುಕೊಂಡಿದ್ದೇವೆ. ಆದರೆ, ನಿಮ್ಮ ಅಭಿಪ್ರಾಯ ಏನೆಂದು ನಮಗೆ ಗೊತ್ತಿಲ್ಲ. ಶ್ರೀ ರಮೇಶ್ ಕುಮಾರ್ ಬಗ್ಗೆ ನಾವೆಲ್ಲರೂ ಸಹ ಸಾರ್ವಜನಿಕ ಜೀವನದಲ್ಲಿ ಇದ್ದವರು, ನಾವು ಅವರನ್ನು ಅತ್ಯಂತ ಗೌರವದಿಂದ ಕಂಡಂತಹವರು. ಆ ಪೀಠದ ರಕ್ಷಣೆಗೆ ಆ ಸದನ ಸಮಿತಿ ಅತ್ಯಂತ ಪರಿಣಾಮಕಾರಿಯಾದಂತಹ ನಿಲುವನ್ನು ಹೊಂದಿರುವುದರಿಂದ, ಅದರ ರಕ್ಷಣೆಗೆ ನಾವು ಬರಬೇಕಾದ ಅವಶ್ಯಕತೆ ಇಲ್ಲ ಎಂದು ನನಗೆ ಅನಿಸಿದ ಹಿನ್ನೆಲೆಯಲ್ಲಿ ನಿಯಮ 342ರ ಅಡಿ ಇದನ್ನು ಚರ್ಚೆಗೆ ಕೈಗೆತ್ತಿಕೊಳ್ಳುವಂತಹ ಅಗತ್ಯ ಇಲ್ಲ ಎನ್ನುವುದನ್ನು ನಾನು ಮನವರಿಕೆ ಮಾಡುತ್ತಿದ್ದೇನೆ. ಒಂದು ವೇಳೆ ಪೀಠ ತಮ್ಮದೇ ಆದ ಪರಮೋಚ್ಛ ನಿರ್ಧಾರವನ್ನು ತೆಗೆದುಕೊಂಡರೆ, ಅದರ ಅನಿವಾರ್ಯತೆ ಮತ್ತು ಅಗತ್ಯತೆಯನ್ನು ಕಂಡು ವಿರೋಧ ಪಕ್ಷದ ಹಕ್ಕನ್ನು ನಾನು ಕಾಯ್ದಿರಿಸಿಕೊಂಡಿದ್ದೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಒಂದೇ ಒಂದು ನಿಮಿಷ ನಾನು ಮಾತನಾಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ ಅದಕ್ಕೆ ನಾವು ಒಪ್ಪುವುದಿಲ್ಲ. ಏಕೆಂದರೆ, ಇದು ಸಾರ್ವಜನಿಕ ಹಿತಾಸಕ್ತಿಯಿಂದ ಚರ್ಚೆ ಅವಶ್ಯಕತೆ ಇದೆ. ಅದಕ್ಕೆ ನಾವು ಇದನ್ನು ಚರ್ಚೆ ಮಾಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ, ನಾವು ಕೇವಲ ಕೆಳಮನೆಯ ಪೀಠದ ಬಗ್ಗೆ ಮಾತನಾಡುತ್ತಿಲ್ಲ. ಅದು ಒಂದು ಭಾಗವಿದ್ದರೆ, ಇನ್ನು ಹಲವಾರು ಭಾಗಗಳನ್ನು ನಾವು ಚರ್ಚೆ ಮಾಡಬೇಕಾಗಿದೆ. ಇವತ್ತು ಆಪಾದನೆ ಇರುವುದು ಜಡ್ಜ್‌ಗಳ ಮೇಲೆ, ಶಾಸಕರ ಮೇಲೆ ಮತ್ತು ಎಲ್ಲಾ ಜನಪ್ರತಿನಿಧಿಗಳ ಮೇಲೆ, ಆದುದರಿಂದ ಇದು ಸರ್ಕಾರದ ಮೇಲೆ ಪರಿಣಾಮವಾಗುತ್ತಿದೆ. ಆದುದರಿಂದ ನಿಯಮ 342ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಶ್ರೀ ಪಿ.ಆರ್.ರಮೇಶ್, ಶ್ರೀ ಐವನ್ ಡಿ'ಸೋಜಾ, ಶ್ರೀ ಪ್ರಕಾಶ್ ಕೆ. ರಾಥೋಡ್, ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಮತ್ತು ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರುಗಳು ನಿಯಮ 342ರ ಮೇರೆಗೆ ಕೊಟ್ಟಿರುವಂತಹ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸೂಚನೆಗಳನ್ನು ನಿಯಮದ ಅಡಿಯಲ್ಲಿ ಹಾಗೂ convention ಗಳನ್ನು ಆಧರಿಸಿ ಪರಿಶೀಲನೆ ಮಾಡಿ, ನನ್ನ ತೀರ್ಪನ್ನು ಕಾಯ್ದಿರಿಸುತ್ತೇನೆ. ಈಗ ಸದನವನ್ನು ನಾಳೆ ಮಂಗಳವಾರ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 5 ಗಂಟೆ 47 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 12ನೇ ಫೆಬ್ರವರಿ ಮಾಹೆ 2019ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

*******

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "